ಕರ್ಮವೀರ

5-1-1948 ರಿಂದ

27-12-1948 ವರೆಗೆ

ವಿವಿಧ ಪ್ರಪಂಚ

...ಬಾಂಬಿನ ಗಂಡ!

...ಬಾಂಬು, ಅಟಂ ಬಾಂಬು' ಎಂದು ...ನಡು ಅದರ ವಿನಾಶಕ ಶಕ್ತಿಗಂಜಿ ...ರಗಳನ್ನು ವ್ಯಕ್ತಪಡಿಸುತ್ತಾರೆ. ...ಂದು ಬಲವಾದ ವೈರಿಯಿದೆ ಎಂಬು...ರೆ ಅಟಂ ಬಾಂಬು ತಯಾರಿಕೆಯಲ್ಲಿ ...ಮುಂದುವರಿಯುತ್ತಿರುವ ಅಮೇರಿಕ ...ಸ್ಪರ್ಧೆಗೆ ಹೇಗಾದರೆಬಹುದು? ...ರಾಜ; ಸಿಂಹವನ್ನು ನುಂಗುವ... ...ಹುಲಿ ಆ ಕಾಲಿನ ಶರಭ; ಅದರ ನೆತ್ತಿ...ಕ್ಕಬಲ್ಲುದೆಂದರೆ ಗಂಡಭೇರುಂಡ— ...ಸಮಯವಿರುವಂತೆ ಭಾರತದಲ್ಲಿಂದು ...ಬಿನ ಗಂಡ' ನೆನಿಸಿದ ವಿಶ್ವಕಿರಣದ ...ನ ಬಹಳ ಉತ್ಸಾಹದಿಂದ ಸಾಗಿದೆ.

...ಕದಲ್ಲಿಯ ಚಿಕಾಗೋ ವಿಶ್ವವಿದ್ಯಾಲ...ಕ್ಟರೇಟ್ (ಮಹಾವಿದ್ವಾನ್) ಪದವಿ ...ದೆದುಬಂದ ೩೭ ವರ್ಷ ವಯಸ್ಸಿನ ಡಾ. ...ಂಗಜಿಲ್ ಎಂಬವರೀಗ Tata Insti-... Fundamental Research ...ದ ಮೂಲಭೂತ ಸಂಶೋಧನ ಸಂಸ್ಥೆ ...ಕಿರಣ ಸಂಶೋಧನವನ್ನು ನಡೆಸತೊಡ... ...ಸೆಂಬರ ತಿಂಗಳ ಬೆಳಗಿನ ಜಾವದ ... ಡಾ. ಜಿಲ್ಲರು ಮುಂಬಯಿಯ ಜುಹೂ ...ಯೋಗಾರ್ಥ ಜಲಜನಕ (Hydrogen) ...ಂಬಿ "ಬಲೂನು"ಗಳನ್ನು ಮೇಲಕ್ಕೆ ...ರು. ಅವು ೮೦ ಸಾವಿರ ಅಡಿ ಎತ್ತರ ...ಮುಟ್ಟಿವೆಯಂತೆ!

...ನಕ್ಕೆ ಗೊತ್ತಿರುವ ಕಿರಣಗಳಲ್ಲೆಲ್ಲ ಈ ... Rays— ವಿಶ್ವಕಿರಣಗಳೇ ಅತ್ಯಂತ ...ದುವು. ಕಣ್ಣಿಗೆ ಕಾಣುವ ಸಾಧಾರಣ ...ಕಿರಣಗಳಲ್ಲಿ ೩ 'ವ್ಹೋಲ್ಟ' ಶಕ್ತಿಯಿದ್ದರೆ ...ದ "ಇಲೆಕ್ಟ್ರಾನ್" ಗುಂಪೊಂದರಲ್ಲಿ ...ಕೋಟಿ 'ವ್ಹೋಲ್ಟ'ನಷ್ಟು ಶಕ್ತಿ ತುಂಬಿದೆ. ...ಣದಲ್ಲಿಯ ವಸ್ತು ಹೃದಯ ಭೇದಕ ಅಣು ...ಮೆಜೊಟ್ರೋನ್" ಎನ್ನುತ್ತಾರೆ. ಇದು Atom— ಪರಮಾಣುವನ್ನು ೧೦ ಸಾವಿರ ...ಗಳಾಗಿ ಒಡೆಯಬಲ್ಲುದಂತೆ!

...ಜಿಲ್ಲರ ಸಂಶೋಧನದಿಂದ ಇಲ್ಲಿಯ ವರೆಗೆ ...ನ ವಿಜ್ಞಾನಿಗಳಿಗೆ ತಿಳಿಯದ ಹೊಸ ವಿಧದ ...ಭೂತ ಕಣಗಳು ಹೊರಬಿದ್ದಿವೆ. ಅವರು ...ಪ್ರಯೋಗ ಶಾಲೆಯಲ್ಲಿ ಇಷ್ಟರ ವರೆಗೆ ವಿಶ್ವ ...ಶಕ್ತಿಯನ್ನು ಹಿಡಿದಿಡುವ ಕಾರ್ಯವನ್ನು ... ಆದರೆ ಇದನ್ನು ಮುಂದುವರಿಸಿ ಪ್ರ... ...ಸೃಷ್ಟಿಯ ಮೂಲಭೂತ ಬೀಜಕಣದ ...ಗಳಿಂದ ಅದ್ಭುತಪರಿಮಾಣದ ಶಕ್ತಿಯನ್ನು ...ಕೊಂಡು ಶಾಂತ್ಯ ಸಿಪಾರ್ಸಕ್ಕೆ ಬಳಸಬಹು... ನಂಬಲಾಗಿದೆ.

...ಸ್ತ್ರಕ್ಕೆ ವರುಣಾಸ್ತ್ರದಿಂದ ಪ್ರತೀಕಾರ, ...ಬಲಕ್ಕೆ ಪಾಶುಪತ ಬಲದಿಂದ ಸೋಲು; ...ಪರಮಾಣು ಬಾಂಬಿಗಿಂದು ವಿಶ್ವಕಿರಣವು ...ಸ್ತ್ರವಾಗಿ ನಿಲ್ಲಬಹುದೆಂದು ನಿರೀಕ್ಷಿಸಲಾಗಿದೆ. ...ತ್ರ ಭಾರತವು ಜಗತ್ತಿನೆಡೆಗೆ ನಿಂತು ...ತಿ ಸಂದೇಶವನ್ನು ಬೀರಬೇಕಾದರೆ 'ಜ್ಞಾನೇ... ...ರ ಕ್ಷಮಾ ಶಕ್ತಿ'' ಎಂಬ ನುಡಿಯಂತೆ ...ದ ರಾಷ್ಟ್ರಗಳಿಗೆ ಸಮಬಲನೆನಿಸಿದರೆ ಮಾತ್ರ ...ರ ಶಾಂತಿಸಂದೇಶ ಪರಿಣಾಮಕಾರಿಯಾದೀ... ...ನೆ ಬರಿದೆ ಅಸಹಾಯತೆಯಿಂದ ಕೂಗಿದರೆ ...[illegible] ?

ಲೋಹನಿಕಷ

...ದ್ಯುತ್ತಿನಿಂದ ಆಗದ ಕೆಲಸವಿಲ್ಲ. ವಿದ್ಯುಲ್ಲ...ಯೇ ವಿಜ್ಞಾನ ಸಾಮ್ರಾಜ್ಞಿ. ಇದಕ್ಕೆ ಹೊಸ ...ಷ್ಟಾಂತವೆಂದರೆ, ಲೋಹಗಳನ್ನು ಗುರುತಿಸ... ...ಯೋಗಿಸುವ ಒಂದು ವಿದ್ಯುದ್ಯಂತ್ರ. ಬೇರೆ ...ರೆ ಲೋಹಗಳನ್ನು ಇದು ಗುರುತಿಸುತ್ತದೆ. ...ಯೇ ಲೋಹದ ಬೇರೆ ಬೇರೆ ಬಗೆಯನ್ನೂ ಸಿದ್ಧೇ...ತ್ತದೆ. ಬಣ್ಣ, ಪಾಲಿಶ್, ತುಕ್ಕು ಈ ಎಲ್ಲ...ನ್ನು ಭೇದಿಸಿ ಅದು ಲೋಹದ ನಿಜಜಾತಿ...ನ್ನು ಬಯಲಿಗೆಳೆಯಬಲ್ಲುದು.

...ಸಾಧನವನ್ನು ಉದ್ಯೋಗ ಕೇಂದ್ರಗಳಲ್ಲಿ ...ಗಾಗಿ ತಯಾರಿಸಿದ್ದಾದರೂ ಅದನ್ನೀಗ ...ನಾಣ್ಯವನು ಖೋಟಾ ನಾಣ್ಯಗಳಿಂದ ... [illegible] ...ದೆಯಂತೆ. ಅದು ...ರ್ಲಿಂಗ್ ಬೆಳ್ಳಿಯನ್ನೂ ಬೆಳ್ಳಿಯ ಇತ್ತೀಗ... ...ನ್ನು ಬೇರೆ ಬೇರೆ ಗುರುತಿಸುತ್ತದೆ. ಉಕ್ಕಿನ ...ಧ ರೀತಿಗಳನ್ನು ಬೇರ್ಪಡಿಸಿ ಹೇಳುತ್ತದೆ. ...ಬಾಹಿತ್ತಾಳೆಯ ಮೊಳೆಗಳನ್ನು ಗಿಲೀಟು ಮೊಳೆ...ಂದ ಬೇರೆ ಮಾಡಿ ತೋರಿಸುತ್ತದೆ.

...ಈ ಯಂತ್ರವು ಲೋಹಗಳ ಭೌತಿಕ, ರಾಸಾಯ... ...ಭೇದಗಳಂತೆ ಅವುಗಳ ವೈದ್ಯುತ ಮತ್ತು ...ಕ ಶಕ್ತಿಗಳೂ ಬೇರೆ ಬೇರಾಗಿರುತ್ತವೆ. ಇದು ತನ್ನ ಮುಖದ್ವಾರದ ಮೇಲೆ ಗಡಿಯಾರ ಗಂಟೆ ತೋರಿಸುವಂತೆ ಯಾವನ್ನೊಂದು ನಿರ್ದಿಷ್ಟ ವರ್ಗದಿಂದ ಎಷ್ಟು ಹುಟ್ಟಿಗೆ ಭಿನ್ನವಾಗಿದೆ ಎಂಬುದನ್ನು ತೋರಿಸುತ್ತದೆ.

ಈ ಯಂತ್ರವು ನೋಡುವುದಕ್ಕೆ ಟೇಬಲ್ ಮಾಡೆಲ್ ರೇಡಿಯೋದ ಹಾಗೆ ಲೋಹದ ಪೆಟ್ಟಿಗೆಯಲ್ಲಿರುತ್ತದೆ. ಕೊನೆಯ ಗುರುತಿನಿಂದ ಮುಖ್ಯ ಎಡಬಲಕ್ಕೆ ಸರಿದಾಡ್ಡ ಇಟ್ಟ ಲೋಹದ ತುಣುಕಿನ ಸ್ವರೂಪವನ್ನು ಮಾಪಕ ವ್ಯವಸ್ಥೆಯಿರುವ ತನ್ನ ಮುಖದಲ್ಲಿ ತೋರಿಸುತ್ತದೆ!

ಉಪ್ಪರಿಗೆ ಬೀದಿ

ಬ್ರಿಟಿಶ ಸಂಸ್ಥೆಗೆ ಮಾಡಲಾದ ಸೂಚನೆಗಳನ್ನು ಕಾರ್ಯರೂಪಕ್ಕೆ ತಂದರೆ ಇಂಗ್ಲಂಡಿನಲ್ಲಿ ಉಪ್ಪರಿಗೆಯಿಂದ ಉಪ್ಪರಿಗೆಗೆ ಹರಿವ ರಸ್ತೆಗಳು ತಯಾರಾಗಬಹುದೆಂದು ಹೇಳಲಾಗಿದೆ. ಈ ರಸ್ತೆಯು ನೂರಡಿ ಎತ್ತರದ ಅಂಗಡಿ ಮನೆಗಳ ಮೇಲೆ ರಚಿಸಲ್ಪಡಬಹುದು. ಅಡ್ಡ ರಸ್ತೆಬರುವಲ್ಲಿ ಸೇತು ಕಟ್ಟಬಹುದು.

ಇದರಿಂದ ಬಹಳ ಅನುಕೂಲವಿದೆ. ಇದೆಂದೂ ಭೂಗತವಾದ ಉಪಮಾರ್ಗ, ಜಲಮಾರ್ಗ, ವಾಯುನಾಳ, ಕಾಲುವೆ ಮುಂತಾದವುಗಳಿಗೆ ಯಾವ ಬಾಧಕವನ್ನೂ ಉಂಟುಮಾಡದು; ಟೆಲಿಫೋನ್ ಮುಂತಾದುವುದರ ವೈದ್ಯುತ ತಂತಿಗಳಿಗೂ ಇದರಿಂದ ತೊಂದರೆ ಸಂಭವಿಸದು. ಈ Roof Top Roadways ಮನೆಮೇಲಿನ ದಾರಿಗಳ ರಚನೆಯಿಂದ ಭೂಮಿಯ ಮೇಲೆ ಎತ್ತರಿಸಿದ ರಸ್ತೆ ಮುಂತಾದವನ್ನು ರಚಿಸುವ ಅಗತ್ಯ ತಪ್ಪುತ್ತದೆ; ದೊಡ್ಡ ದೊಡ್ಡ ನ್ಯಾಯದ ಗೃಹಗಳಿಗೆ ವಾಹನಾದಿಗಳಿಂದ ಅವಘಡ ಉಂಟಾಗಿ ಆಗಾಗ ಆಗುವ ಸಾವುನೋವು ಮುಂತಾದ್ದರ ನಷ್ಟ ಉಂಟಾಗುವುದು ಇಲ್ಲವಾಗುತ್ತದೆ.

ಜೀವನ ಪ್ರಾಕೃತಿಕ ಹೆಚ್ಚಿಸಲು ವಿಜ್ಞಾನವಿಂದು ಬಹಳ ದುಡಿದಿದೆ. (ಅದರ ನಾಶಕ್ಕೂ ಹಾಗೇ ದಾರಿ ಹಾಕಿಕೊಟ್ಟಿದೆ). ಮನೆಯಿಂದ ಮಹಡಿಗೆ ದಾಟಿಕೊಂಡು "ಕಿಂಗ್ ಕಾಂಗ್" ಇಲ್ಲವೆ ಕಪಿವೊಗದ ಮಂಗ (ಮನುಷ್ಯ) ತಿರುಗಾಡಿದಂತೆ ಮನುಷ್ಯರು ತಿರುಗಾಡಲು ಅನುಕೂಲ ಮಾಡಿಕೊಳ್ಳುವುದೊಂದು ಸೋಜಿಗವಲ್ಲವೆ? ಒಂದು ಸುಖವೆನಿಸಿದರೆ, ಅದಕ್ಕಿಂತ ಮುಂದಿನ ಹೆಚ್ಚಿನ ಸುಖಯಾವುದು? —ಎಂದು ಮನುಷ್ಯ ಹುಡುಕುತ್ತಾನೆ. ಇದು ಅದಕ್ಕೊಂದು ಉದಾಹರಣೆ.

ಹಣ ಎಣಿಸುವ ಯಂತ್ರ

ನಿನ್ನದೇ ಆದರೆ ಎಲ್ಲ ಹಣ, ಬಹಳ ಬಹಳ ರೊಕ್ಕ ಎಣಿಸುತ್ತ ಕೂತುಕೊಳ್ಳುವುದೆಂದರೆ ಸ್ವರ್ಗಕ್ಕೆ ಮೂರೇ ಗೇಣು ಮಾತ್ರ ಕಡಿಮೆಯೆನಿಸುವುದು ಸಹಜ; ಆದರೆ ಒಂದು ಬ್ಯಾಂಕಿನಲ್ಲಿ ಕುಳಿತು ಇನ್ನೊಬ್ಬರ ರೊಕ್ಕ ಎಣಿಸುತ್ತ ಕುಳಿತುಕೊಳ್ಳುವುದೆಂದರೆ ಯಾರಿಗೂ ಬೇಡ ಎನಿಸುವುದಿಲ್ಲವೆ?

ಈ ಬೇಜಾರಿನ ಕೆಲಸವನ್ನು ಸುಲಭಮಾಡಲು ವಾಷಿಂಗ್‌ಟನ್ನಿನಲ್ಲಿಯ ಥಾಮಸ್ ಈ ಹೇಸ್ ಎಂಬವನು ನೋಟುಗಳನ್ನು ಪ್ರತ್ಯೇಕಿಸುವ ಮತ್ತು ಎಣಿಸುವ ಒಂದು ಯಂತ್ರವನ್ನು ಕಂಡು ಹಿಡಿದಿದ್ದಾನೆ; ಅದನ್ನು ಅವನು ೨೪,೬೫,೩೧೦ ನೆಯ ನಂಬರಿನಲ್ಲಿ "ಪೇಟೆಂಟ್" ಮಾಡಿಸಿದ್ದಾನೆ.

ಈ ಯಂತ್ರಕ್ಕೆ ಐದು ಭಾಗಗಳಿವೆ. ಅವು ೧, ೨,೫,೧೦ ಮತ್ತು ೨೦ ಡಾಲರ್ ನೋಟುಗಳನ್ನು ಕ್ರಮವಾಗಿ ಎಣಿಸುತ್ತವೆ. ಪ್ರತಿಯೊಂದು ಭಾಗದ ಮೇಲೂ ಒಂದು ನೋಟು ಉರುಳುಗೋಲು ಇರುತ್ತದೆ. ಅವುಗಳ ನಡುವೆ ಯಂತ್ರವು ಮಿಶ್ರ ನೋಟುಗಳನ್ನು ಒಳಸೆಳೆದುಕೊಳ್ಳುತ್ತದೆ. ಆನಂತರ ಯಂತ್ರವು ತನ್ನ ವಿಭಾಗದ ಮೇಲಿರುವ ರಿಜಿಸ್ಟರಿನ ಮೇಲೆ ತಾನೇತಾನಾಗಿ ಎಣಿಸಿ ಬಗೆಯುತ್ತದೆ. ಅದೇ ಕಾಲದಲ್ಲಿ ಯಂತ್ರದ ತುದಿಯಲ್ಲಿರುವ ಕೂಡಿಸುವ ವಿಭಾಗವು ಅವುಗಳ ಬೆಲೆಯನ್ನು ಕೂಡಿಸಿ ತೋರಿಸುತ್ತದೆ.

ಕೊನೆಯಲ್ಲಿ ಎಲ್ಲ ಬಿಲ್ಲು (ನೋಟು ಇತ್ಯಾದಿ) ಗಳೂ ಗಣಿಸಲ್ಪಟ್ಟು ಒಟ್ಟು ಒಂದು ಮೊತ್ತವಾಗಿ ತೋರಿಸಲಾಗುತ್ತದೆ.

ಕಾಗದದ ಕತೆ

ಚೀನದ ತ್ಸಾಯಿಲುಂಗನು ಕ್ರಿ. ಶ. ೧೦೫ ರಲ್ಲಿ ಕಾಗದವನ್ನು ಕಂಡು ಹಿಡಿದನು. ಅವನು ಅದರ ತಯಾರಿಕೆಗೆ ಹಳೆಯ ಮೀನುಬಲೆ, ಚಿಂದಿ, ಮರದ ತೊಗಟೆ ಮುಂತಾದುವನ್ನು ಬಳಸುತ್ತಿದ್ದನು. ಆ ಪ್ರಥಮ ಯುಗದಲ್ಲಿ ಅವನು ಕಾಗದ ತಯಾರಿಸುವವರ ದೇವನೇ ಆದನು.

೬೦೦ ವರ್ಷಗಳವರೆಗೆ ಈ ಗುಟ್ಟು ಚೀನದಲ್ಲಿ ಉಳಿಯಿತು. ಒಮ್ಮೆ ಇಂದಿನ ಚೀನೀ ತುರ್ಕಿಸ್ತಾನದ ಇಬ್ಬರು ಮಾಂಡಲಿಕರಲ್ಲಿ ಕಲಹ ಉತ್ಪನ್ನವಾಯಿತು. ಇಬ್ಬರಲ್ಲಿ ಒಬ್ಬನು ಚೀನೀಯರ ನೆರವನ್ನೂ ಮತ್ತೊಬ್ಬನು ಅರಬರ ಸಹಾಯವನ್ನೂ ಕೇಳಿದನು. ಆಗ ಅರಬರೇ ಜಯಶಾಲಿಗಳಾದರು. ಕೈದಿಯಾಗಿ ಸಿಕ್ಕಿದ ಚೀನೀಯರಲ್ಲಿ ಕೆಲವರು ಕಾಗದ ತಯಾರಿಸಬಲ್ಲವರಾಗಿದ್ದರು. ಅವರನ್ನು ಒತ್ತಾಯ ಪಡಿಸಿ ಅರಬರು ಕಾಗದದ ಗುಟ್ಟನ್ನು ತಿಳಿದು ಕೊಂಡರು.

೮ ನೆಯ ಶತಮಾನದ ಕೊನೆಯಲ್ಲಿ ಸಮರ್ಕಂಡ, ಬಾಗದಾದ ಮತ್ತು ದಮಾಸ್ಕಸಗಳಲ್ಲಿ ಕಾರಖಾನೆಗಳು ಹುಟ್ಟಿ ಕೊಂಡವು. ಅನಂತರ ಅವು ಇಡೀ ಅರಬ ಪ್ರದೇಶದಲ್ಲೆಲ್ಲ ಹರಡಿದವು. ೫ ಶತಮಾನಗಳ ವರೆಗೆ ಸಾರಸೀನರಲ್ಲಿಯೇ ಆ ವಿದ್ಯೆ ಅಡಗಿತ್ತು. ಅವರು ಮೊರಾಕೊ ಮತ್ತು ಸ್ಪೈಯಿನುಗಳ ಮೂಲಕ ಪಾಶ್ಚಾತ್ಯ ಪ್ರಪಂಚಕ್ಕೆ ಅದನ್ನು ಮುಟ್ಟಿಸಿದರು. ಮುಸ್ಲಿಂ ಸ್ಪೈಯಿನು ಅದನ್ನು ಕ್ರಿಶ್ಚಿಯನ್ ಯುರೋಪಿಗೆ ಒಯ್ದಿತು. ಮುಸ್ಲಿಂ ಸಾಮ್ರಾಜ್ಯದ ಹೊರಗೆ ಪಾಶ್ಚಾತ್ಯ ಪ್ರಪಂಚದಲ್ಲಿ ಸ್ಥಾಪಿತವಾದ ಮೊದಲನೆಯ ಕಾಗದದ ಕಾರಖಾನೆಯೆಂದರೆ ಹೀರೌಲ್ಟ ಯಲ್ಲಿಯದು. ಅದನ್ನು ೧೧೮೯ ರಲ್ಲಿ ಸ್ಥಾಪಿಸಲಾಯಿತು. ಹೀರೌಲ್ಟ ಪಿರನೀಸ ಪರ್ವತ ಪಂಕ್ತಿಯ ಫ್ರೆಂಚ ಪಾರ್ಶ್ವದಲ್ಲಿದೆ. ಈ ಕತೆ "ಮ್ಯಾಂಚೆಸ್ಟರ್ ಗಾರ್ಡಿಯನ್ನಿ"ನಲ್ಲಿ ಹೊರಟಿದೆ.

ಟೆಲಿಟೈಪರ್

ಟೆಲಿಫೋನ್, ಟೆಲಿಗ್ರಾಫ್, ಟೆಲಿ ಪ್ರಿಂಟರ್ ಇವುಗಳಂತೆ ಟೆಲಿ ಟೈಪರ್ ಎಂಬ ಯಂತ್ರವನ್ನು ಕಂಡು ಹಿಡಿದು ಅಮೇರಿಕದಲ್ಲಿ ಬಳಸುತ್ತಿದ್ದಾರೆ. ಆದರೀಗ ಜರ್ಮನಿಯ ವಿಜ್ಞಾನಿಗಳು ಅದಕ್ಕಿಂತ ಅನುಕೂಲವಾಗುವಂಥ ಟೆಲಿಟೈಪರನ್ನು ಕಂಡು ಹಿಡಿದಿರುವರೆಂದು ವರದಿ ಬಂದಿದೆ.

ಅಮೇರಿಕದ ಟೆಲಿ ಪ್ರಿಂಟರು ಪ್ರತಿಯೊಂದು ಅಕ್ಷರಕ್ಕೂ ಬೇರೆ ಬೇರೆ ಮುದ್ರಣದ ಮೊಳೆಯನ್ನು ಬಳಸಿದರೆ ನಾಜಿ ಯಂತ್ರವು ಸಾಕ್ಷಾತ್ ಅಕ್ಷರಗಳ ಉದ್ದ ಮತ್ತು ಅಡ್ಡಗೆರೆಗಳನ್ನು ಮುದ್ರಿಸುವ ಸೂಕ್ಷ್ಮಸಂದೇಶ (Impulse) ವನ್ನು ಕಳುಹಿಕೊಡಬಲ್ಲದು.

ಅಮೇರಿಕದ ಟೆಲಿಟೈಪರುಗಳಲ್ಲಿ ಒಮ್ಮೊಮ್ಮೆ ತಪ್ಪು ಅಕ್ಷರ ಮುದ್ರಿತವಾಗುತ್ತಿದೆ. ಇದರಲ್ಲಿ ಸುತ್ತಿನಲ್ಲಿ (Circuits) ನಡು ನಡುವೆ ಅಡೆತಡೆ ಉಂಟಾಗಿ ಅಕ್ಷರಗಳ ರೂಪ ಕೆಲವೊಮ್ಮೆ ಕೆಟ್ಟರೂ ತಪ್ಪು ಅಕ್ಷರವೆಂದೂ ಮುದ್ರಿತವಾಗುವುದಿಲ್ಲ.

ಇದು ಬಹಳ ಸರಳವಾದ ಯಂತ್ರ. ಜರ್ಮನಿಯ ತಯಾರಿಕೆಯಲ್ಲಿ ಇದರ ತೂಕ ಕೇವಲ ೬೦ ರತ್ತಲು. ಒಂದೇ ಒಂದು ನ್ಯೂನತೆಯೆಂದರೆ ನಿಮಿಷವೊಂದಕ್ಕೆ ೧೫೦ ಅಕ್ಷರಗಳನ್ನು ಮಾತ್ರ ಇದು ಕಳುಹ ಬಲ್ಲದು.

ಈ ಯಂತ್ರದ ಕಾರ್ಯ ವಿಹಾರಕ್ಕೂ ನಮ್ಮ ಪತ್ರಿಕಾಲಯದಲ್ಲಿರುವ ಟೆಲಿಪ್ರಿಂಟರ್ ಯಂತ್ರದ ಕಾರ್ಯಗತಿಗೂ ಭೇದವಿಲ್ಲ. ಟೆಲಿಫೋನಿನಲ್ಲಿ ಮಾತಾಡಿದ್ದು ಇತರ ಗ್ರಾಹಕ ಯಂತ್ರಗಳ ಮೂಲಕ ಹೊರಬೀಳುವಂತೆ ಕೇಂದ್ರ ಸುದ್ದಿ ಸಂಸ್ಥೆಯಲ್ಲಿ ಟೈಪು ಹೊಡೆಯುತ್ತಿರುವ ಸುದ್ದಿ ಅದೇ ಕಾಲದಲ್ಲಿ ಸಂಬಂಧಿಸಿದ ಗ್ರಾಹಕ ಯಂತ್ರಗಳಲ್ಲಿ ಸ್ವಯಂ (ವಿದ್ಯುತ್ಸಹಾಯದಿಂದ) ಅಚ್ಚಾಗುವುದು. ಬಿಳಿ ಕಾಗದವೊಂದನ್ನು ಇಟ್ಟಿಟ್ಟರೆ ಸಾಕು. ಸುರುಳಿ ಸುರುಳಿಯಾಗಿ ಮುದ್ರಿಸಲ್ಪಟ್ಟು ಹೊರಬೀಳುತ್ತದೆ.

ಇಪ್ಪತ್ತು ಬಣ್ಣದ ಪುಟಗಳ ಮುದ್ರಣ

[illegible] ... ಮುದ್ರಣ ಯಂತ್ರ ... [illegible] ... ಬರುತ್ತದೆ.

ಅದು "ಪೇಟೆಂಟ್" ... [illegible] ... ಲಾಗಿದೆ.

ಅದೇ ... [illegible] ... Non-stop Press—ಅವಿಚ್ಛಿನ್ನ ಮುದ್ರಣ ಯಂತ್ರಕ್ಕಾಗಿ ಕೊಟ್ಟ "ಪೇಟೆಂಟ್" ಹಕ್ಕನ್ನು ಕೊಡಲಾಗಿದೆ.

ಮಾತಾಡುವ ಟೈಪರೈಟರ

ಚಾರ್ಜ ಕೋಫ ಎಂಬ ೫೯ ವರ್ಷದ ಮುದುಕನು ಮಾತಾಡುವ ಟೈಪ್ ರೈಟರನ್ನು ತಯಾರಿಸಿದ್ದಾನೆ!

ಒಂದು ವಿಧದ ವೈದ್ಯುತ ಸಂಬಂಧಗಳಿಂದ ಮತ್ತು ನಾದತಂತ್ರದಿಂದ ಧ್ವನಿಗ್ರಾಹಕ ಮತ್ತು ಪ್ರತಿಧ್ವನಿಕಾರಕಗಳ ಯೋಜನೆಯನ್ನು ಟೈಪ್ ರೈಟರಿಗೆ ಜೋಡಿಸಲಾಗಿದೆ "ಡಬ್ಲ್ಯು" ಎಂಬ ಅಕ್ಷರದ ಮೊಳೆಯನ್ನು ಒತ್ತಿದಾಕ್ಷಣ ಅದು "ಡಬಲ್ ಯು—Double you" ಎಂದು ಕೂಗುತ್ತದೆ!

ಒಂದು ರೇಡಿಯೋ ಧ್ವನಿವರ್ಧಕದ ಮೂಲಕ ಈ ಯಂತ್ರವು ಒತ್ತಲಾದ ಮೊಳೆಯಲ್ಲಿಯ ಅಕ್ಷರವನ್ನು ಉಚ್ಚರಿಸುತ್ತದೆ. ಕೋಫನು ೧೯೩೭ ರಲ್ಲಿ ಆಲೋಚಿಸಿ ೧೯೪೭ ರಿಂದ ಸಂಶೋಧನ ಪ್ರಾರಂಭಿಸಿ ಈಗ ಯಂತ್ರವನ್ನು ಪೂರ್ಣಗೊಳಿಸಿದ್ದಾನೆ.

ಕನ್ನಡಿಗರ ಸಮಾವೇಶಗಳು ಫಲಪ್ರಾಪ್ತಿಯ ಯೋಗ

(ಹಿಂದಿನಂಕದಿಂದ ಮುಂದುವರಿದುದು)

ಪ್ರಚಾರಾವಶ್ಯಕತೆ

ಶರೀರಾರೋಗ್ಯಕ್ಕೆ, ಮನುಷ್ಯನ ನಿರ್ವಾಹಕ್ಕೆ, ಒಟ್ಟು ಜೀವನದ ಭದ್ರತೆಗೆ ರಕ್ತಸಂಚಲನವು ಅವಶ್ಯಕ. ಆ ರಕ್ತ ಹೃದಯದಿಂದಲೂ ಅಂಗಾಂಗಗಳಲ್ಲೂ ನಡೆಯಬೇಕು. ಒಂದು ಪುಷ್ಟದ ಕಾವಿ ಹಿಂದೆ, ಒಂದು ಪ್ರಮಾಣದ ವೇಗದಿಂದ ರಕ್ತ ಪರಿಚಲನವಾಗಬೇಕು. ಈ ಕಾರ್ಯ ಸ್ವಾಭಾವಿಕ ಕಟ ನಿಲ್ಲದಂತೆ ನೋಡಿಕೊಳ್ಳಬೇಕು. ಹಾಗೆಯೇ ಒಂದು ದೇಶದ ಭದ್ರತೆ ಮತ್ತು ಯೋಗಕ್ಷೇಮ ಅವಧಿಯು ಕೇಳ. ಅಂದಮೇಲೆ ರಾಷ್ಟ್ರ ಶರೀರದಲ್ಲಿ ಜ್ಞಾನ ಪ್ರಚಾರ ಪಾಪು...ಯು ಏಕ ಪ್ರಕಾರವಾಗಿ ವೇಗವಾಗಿ ನಾಡಿನ ನಾನಾ ಭಾಗಗಳಲ್ಲಿ ಹರಿಯುತ್ತಿರಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಚಾರಕ್ಕೆ ಪ್ರಥಮ ಸ್ಥಾನ. ಕನ್ನಡ ನಾಡಿನಲ್ಲಿ ಈಗ ನಾಡಿನ ಭಾಷೆ ಸಾಹಿತ್ಯ ಕಲೆ...ಗಳ ಇತಿಹಾಸ ಹಾಗೂ ಸ್ವಾತಂತ್ರ್ಯ ಸೌಭಾಗ್ಯ, ವಿನಾಶ ಕಾರ್ಯ ಪ್ರವೃತ್ತಿಗಳು ದೌರ್ಬಲ್ಯಗಳು ಇವುಗಳನ್ನು ಕುರಿತು ಸುವ್ಯವಸ್ಥಿತವಾದ ರೀತಿಯಿಂದ ಪ್ರಚಾರ ನಡೆಸಬೇಕು. ಅದಕ್ಕಾಗಿ ಪ್ರಚಾರ ಪ್ರಕಟನ ಕಾರ್ಯವಿಧಾನಗಳನ್ನು ರೂಪಿಸಬೇಕು. ಸಂಚಾರೀ ಪ್ರಸ್ಥಾನಗಳು ನಡೆಯುತ್ತ ಹೋಗಬೇಕು. ವಿದ್ವಾಂಸರೂ ಕವಿಗಳೂ ಗಮಕಿಗಳೂ ವಾಗ್ಮಿಗಳೂ ಹಂಚೋಣಿಕೆಯಾಗಿ ಮೇಲೆ ಮೇಲೆ ನಾಡಿನಲ್ಲೆಲ್ಲಾ ಸಂಚಾರ ಮಾಡಬೇಕು.

ಕರ್ನಾಟಕ ಏಕೀಕರಣ ಪ್ರಯತ್ನ

ರಾಜಕೀಯವಾಗಿ ಕನ್ನಡ ನಾಡೊಂದಾಗು ವವರೆಗೂ ನಮ್ಮ ಆಶಯಗಳೆಲ್ಲ ಬರಿಯ ಕನಸಾಗಿಯೇ ಉಳಿಯುತ್ತವೆ. ಕನ್ನಡ ನಾಡು ಸುಮಾರು ಇಪ್ಪತ್ತು ಆಡಳಿತಗಳಿಗೆ ಹಂಚು ಹಂಚಿಕೆಯಾಗಿ ಹೋಗಿರುವುದೇ ಇದಕ್ಕೆ ಕಾರಣ. ಆಡಳಿತವು ಒಂದಲ್ಲ ಒಂದು ರೀತಿಯಿಂದ ಏಕ ರೂಪವಾಗುವವರೆಗೆ ಕನ್ನಡಿಗರ ಏಕೀಕರಣ ಮನೋರಥವೀಡೇರುವ ಹಾಗಿಲ್ಲ. ರಾಜಕೀಯವಾದ ಏಕೀಕರಣವಾಗಬೇಕು; ಅಂದರೆ ಕರ್ನಾಟಕ ಮಹಾರಾಷ್ಟ್ರ ನಿರ್ಮಾಣವಾಗಬೇಕು.

ನೆಹ್ರುಗಳ ಮಾತು

ದೆಹಲಿ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತ್ಯದ ವಿಚಾರ ಬಂತು. ಆಗ ಮಹಾಪ್ರಧಾನ ಜವಾಹರಲಾಲ ನೆಹ್ರುಗಳು—

"ಆಂಧ್ರ ಪ್ರಾಂತ್ಯವಾಗಬೇಕೆಂದು ಕೇಳುವದು ಬಹಳ ನ್ಯಾಯವಾಗಿದೆ. ಈ ಪ್ರಶ್ನೆಯ ಕುರಿತಾದ ತತ್ವಗಳಲ್ಲೇನೂ ಇಲ್ಲ. ೧೯೩೫ನೆಯ ಇಸವಿಯ ಇಂಡಿಯಾ ಸರಕಾರ ಶಾಸನದಲ್ಲಿ ಒರಿಸಾ ಮತ್ತು ಸಿಂಧ ಪ್ರಾಂತ್ಯಗಳನ್ನು ಸೇರಿಸಿದಂತೆ ಹೊಸರಾಜ್ಯಾಂಗ ವ್ಯವಸ್ಥೆಯಲ್ಲಿ ನಾನಾ ಪ್ರಾಂತ್ಯಗಳೊಂದಿಗೆ ಇದನ್ನು ಸೇರಿಸಬಹುದು. ರಾಜ್ಯಾಂಗವನ್ನ ನ್ನಿಯನ್ನ ಅಂಗೀಕರಿಸಿದ ಕೂಡಲೆ, ತೀರ್ಮಾನವನ್ನು ಬದಲಿಗೆ ತರಬಹುದು" ಎಂಬುದಾಗಿ ಹೇಳಿದರು. ಅಷ್ಟು ಮಾತ್ರವಲ್ಲ—

"ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ನಿರ್ಮಾಣದ ಮಾತನ್ನೆತ್ತಿದರೆ ಅಸಾಧ್ಯ ಕಷ್ಟಗಳೇಳುತ್ತವೆ. ಸಂಬಂಧಪಟ್ಟ ಪ್ರಾಂತ್ಯಗಳ ಸ್ವರೂಪ ಮತ್ತು ಜೀವನ ರಚನೆಗೇ ಪ್ರಚಂಡ ಸಂಚಕಾರ ಬರುತ್ತದೆ. ಈ ಪ್ರಶ್ನೆಯನ್ನು ಸರ್ವ ತೋಮುಖವಾಗಿ ಪರೀಕ್ಷೆ ಮಾಡಬೇಕಾಗಿದೆ, ಆಗ ಮಾತ್ರ ತೀರ್ಮಾನವು ತೃಪ್ತಿಕರವಾಗಿಯೂ ಸಂಬಂಧಪಟ್ಟ ಪಕ್ಷಗಳಿಗೆ ಅಂಗೀಕಾರ ಯೋಗ್ಯವೂ ಆಗುತ್ತದೆ." ಅಂದರು.

ಆಗ ಶ್ರೀ. ದಿವಾಕರರವರು ಭದ್ರ ಕರ್ನಾಟಕದ ದುರ್ಧರ ಪರಿಸ್ಥಿತಿಯನ್ನು ಮಹಾಪ್ರಧಾನರ ಗಮನಕ್ಕೆ ತಂದರು.

ಹಲವು ಸದಸ್ಯರು ಉಪಮಹಾಪ್ರಧಾನ ಸರದಾರ ಪಟೇಲರಿಗೆ ಶಿಬಾರದಲ್ಲಿ ಪ್ರತಿಭಟನಾ ರೂಪದ ಪತ್ರವೊಂದನ್ನು ಬರೆದಿದ್ದಾರೆ. ಆಂಧ್ರ ಪ್ರಾಂತ್ಯ ನಿರ್ಮಾಣದೊಂದಿಗೇ ಕರ್ನಾಟಕ ಪ್ರಾಂತ್ಯ ನಿರ್ಮಾಣ ಕಾರ್ಯವನ್ನು ಕೈಕೊಳ್ಳಬೇಕೆಂದು ತಿಳಿಸಿದ್ದಾರೆ. ಕೇಂದ್ರದ ತೀರ್ಮಾನ ಕನ್ನಡಿಗರಿಗೆ ಒಪ್ಪಿಗೆ ಇಲ್ಲ. ಬಿಕ್ಕಟ್ಟಿನ ಸಮಸ್ಯೆ ತೀರ್ಮಾನವಾಗದೆ ಆಂಧ್ರ ಪ್ರಾಂತ ನಿರ್ಮಾಣ ತೀರ್ಮಾನವಾಗಬಾರದು.

ಕರ್ನಾಟಕ ಸಬ್—ಫೆಡರೇಷನ್

ಸದ್ಯಕ್ಕೆ ಗೋವೆ, ಹೈದರಾಬಾದ್ ಕರ್ನಾಟಕ ಕ್ಷೇತ್ರಗಳನ್ನು ಬಿಟ್ಟರೆ, (೧) ಮುಂಬಯಿಯ ನಾಲ್ಕು ಜಿಲ್ಲೆಗಳು; (೨) ಮದರಾಸಿನ ಮೂರು ಜಿಲ್ಲೆಗಳು; (೩) ಕೊಡಗು; (೪) ಮೈಸೂರು ಸಂಸ್ಥಾನ; (೫) ದಕ್ಷಿಣದ ಹದಿನಾಲ್ಕು ಸಂಸ್ಥಾನಗಳು ಹೀಗೆ ಐದು ಪ್ರತ್ಯೇಕ ಕ್ಷೇತ್ರ ಮತ್ತು ಆಡಳಿತವಿರುತ್ತವೆ. ಐದನೆಯ ಕ್ಷೇತ್ರದಲ್ಲಿ ಹದಿನಾಲ್ಕು ಆಡಳಿತಗಳಿವೆ. ಇವೆಲ್ಲವನ್ನು ಒಂದು ಸ್ವರೂಪವನ್ನು ಸಾಧಿಸುವಷ್ಟು ಹುಟ್ಟಿಗೆ ಹಾಗೆಯೇ ಉಳಿಸಿ ಅನಿವಾರ್ಯವಾದಷ್ಟು ಬದಲಾವಣೆಗಳನ್ನು ಮಾಡಿ ಈ ಕಾರ್ಯವನ್ನು ಸಾಧಿಸಬಹುದು. 'ಕರ್ನಾಟಕ ಸಬ್-ಫೆಡರೇಷನ್' ಮೂಲಕ ಮಾತ್ರ ಕನ್ನಡನಾಡಿಗೇ ವಿಶಿಷ್ಟವೆನಿಸುವ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವೆಂದು ತೋರುತ್ತದೆ.

'ಸಬ್-ಫೆಡರೇಷನ್'ನಲ್ಲಿ ಅಂಗರಾಜ್ಯಗಳು ಐದಿರಬೇಕೇ; ಮೂರಿರಬೇಕೆ; ಎರಡೇ ಸಾಕೆ ಎಂಬ ಪ್ರಶ್ನೆಗಳನ್ನು ಚೆನ್ನಾಗಿ ಪರೀಕ್ಷೆಮಾಡಬೇಕು, ಅಂಗರಾಜ್ಯಗಳ ಸಂಖ್ಯೆಯನ್ನು ಅದಷ್ಟು ಕಡಿಮೆ ಮಾಡುವುದು ರಾಷ್ಟ್ರ ಭದ್ರತೆಯ ದೃಷ್ಟಿಯಿಂದ ಬಹಳ ಅವಶ್ಯಕವೆಂಬುದನ್ನು ಇತ್ತೀಚಿನ ಭಾರತದ ಇತಿಹಾಸವು ನಮ್ಮ ಅನುಭವಕ್ಕೆ ತಂದುಕೊಡುತ್ತಿದೆ.

(೧) ಮೇಲೆ ಸೂಚಿಸಿದಂತೆ ಐದು ವಿಭಾಗಗಳನ್ನುಳಿಸಿ, ಐದು ಅಂಗರಾಜ್ಯಗಳನ್ನು ಮಾಡೋಣವೆ?

(೨) ಮುಂಬಯಿ, ಮದರಾಸು, ಕೊಡಗನ್ನು, ಸೇರಿಸಿ ಒಂದು ರಾಜ್ಯ; ಮೈಸೂರು ಸಂಸ್ಥಾನವೇ ಒಂದು ರಾಜ್ಯ; ಸಂಸ್ಥಾನಗಳ ಕೂಟವೊಂದು ರಾಜ್ಯ; ಒಟ್ಟು ಮೂರು ಅಂಗರಾಜ್ಯಗಳನ್ನು ನಿರ್ಮಿಸೋಣವೆ?

(೩) ಹದಿನಾಲ್ಕು ಸಂಸ್ಥಾನಗಳನ್ನೂ ಮುಂಬಯಿ ಮತ್ತು ಮದರಾಸು ಪ್ರಾಂತ್ಯಗಳ ಕರ್ನಾಟಕದೊಂದಿಗೇ ಬೆರೆಸಿ ಒಂದು 'ಡೊಮಿನಿಯನ್ ಕರ್ನಾಟಕ'; ಒಂದು ಮೈಸೂರು ಸಂಸ್ಥಾನ; ಹೀಗೆ ಎರಡೇ ಅಂಗರಾಜ್ಯಗಳನ್ನು ಉಳಿಸೋಣವೆ?

ಸಬ್‌ಫೆಡರೇಷನ್' ಆಲೋಚನೆಯು ಒಪ್ಪಿಗೆಯಾಗುವುದಾದರೆ ಪ್ರತಿನಿಧಿ ಶಿಷ್ಟಮಂಡಳವೊಂದನ್ನು ರಚಿಸಿ ಅಲ್ಲಿ, (೧) 'ಸಬ್—ಫೆಡರೇಷನ್' ರೂಪ, ರಚನೆ (೨) ಅಂಗರಾಜ್ಯಗಳ ಸಂಖ್ಯೆ, (೩) ಸಬ್ ಫೆಡರೇಷನ್ ಕೇಂದ್ರ: (೪) ಅಂಗರಾಜ್ಯಗಳು ಕೇಂದ್ರಕ್ಕೆ ಬಿಟ್ಟುಕೊಡಬೇಕಾದ ಅಧಿಕಾರಾಂಶಗಳು (೫) ಕೇಂದ್ರದ ಹಣಕಾಸು: ಇವೇ ಮುಂತಾದ ವಿವರಗಳನ್ನೆಲ್ಲ ನಿಶ್ಚಯಮಾಡಬೇಕು. ಕರ್ನಾಟಕ ಏಕೀಕರಣ ಮಹಾಸಭೆಯು ಇತ್ತಕಡೆ ಗಮನಕೊಡಬಹುದು.

ಸೀಮಾಚಿಹ್ನೆಗಳ ನಿರ್ಣಯ

ಗಡಿಗಳನ್ನು ನಿಶ್ಚಯಮಾಡುವ ಕೆಲಸವು ಎಷ್ಟು ಅವಶ್ಯಕವೋ ಅಷ್ಟು ಕ್ಲಿಷ್ಟವಾಗಿದೆ. ಈ ಕ್ಲಿಷ್ಟತೆಯ ಗರ್ಭದಲ್ಲಿ ಮುಖ್ಯವಾಗಿ ಪ್ರಾಂತ್ಯ ಪ್ರಾಂತ್ಯಗಳ ದ್ವೇಷಾಸೂಯೆಗಳು ಅಡಗಿಕೊಂಡಿವೆ. ಈಗ ನಾವು ಕರ್ನಾಟಕದ ವಿಷಯದಲ್ಲಿ ನಾಲ್ಕು ಕಡೆಯ ಗಡಿಗಳನ್ನು ಗಾಂಧೀಜಿಯವರ ಸಲಹೆಯಂತೆ ನಾವೇ ನಿಶ್ಚಯಮಾಡಿಕೊಳ್ಳಬೇಕು. ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಕೇರಳ ಪ್ರಾಂತ್ಯ ಬಂಧುಗಳೊಂದಿಗೆ ಸ್ನೇಹದಿಂದ, ದೂರದೃಷ್ಟಿಯಿಂದ ರಾಷ್ಟ್ರ ಭಾರತದ ಹಿತಸಾಧನೆಯ ದೃಷ್ಟಿಯಿಂದ ಈ ಕಾರ್ಯವನ್ನು ಸಾಧಿಸಬೇಕಾಗಿದೆ. ಈ ಗಡಿ ನಿರ್ಮಾಣಕಾರ್ಯದಲ್ಲಿ ಕೆಲವು ತತ್ವಗಳನ್ನು ಮತ್ತು ವಿಧಾನಗಳನ್ನು ಅಂಗೀಕರಿಸಿ ಅನುಸರಿಸಕೊಳ್ಳುವದು ಅವಶ್ಯಕ.

೧. ಗಡಿಪ್ರಾಂತಗಳಲ್ಲಿ ಒಂದೊಂದು ಹಳ್ಳಿಯಲ್ಲೂ ಜನರು ಯಾವ ಭಾಷೆಯನ್ನು ಬಳಸುತ್ತಾರೆ. ಅವರ ಮಾತೃಭಾಷೆ ಏನು? ಎಂಬುದರ ಒಂದು ಪರೀಕ್ಷೆ ನಡೆಯಬೇಕು. ಆ ಪರೀಕ್ಷೆಯ ಫಲವಾಗಿ ಒಂದು ಹಳ್ಳಿಯ ಜನರು ನೂರಕ್ಕೆ ಅರವತ್ತು ಮಂದಿ ಕನ್ನಡಮಾತೃಭಾಷೆ ಉಳ್ಳವರಾದರೆ ಆ ಹಳ್ಳಿಯನ್ನು ಕರ್ನಾಟಕಕ್ಕೆ ಸೇರಿಸಬೇಕು. ಹಾಗಿಲ್ಲವಾದರೆ ಆಂಧ್ರ ಗಡಿಯಾದರೆ ಆಂಧ್ರಕ್ಕೆ ಸೇರಬೇಕು. ತಮಿಳು ಗಡಿಯಾದರೆ ತಮಿಳುನಾಡಿಗೆ, ಕೇರಳದ ಗಡಿಯಾದರೆ ಕೇರಳಕ್ಕೆ! ಮಹಾರಾಷ್ಟ್ರದ ಗಡಿಯಾದರೆ ಮಹಾರಾಷ್ಟ್ರಕ್ಕೆ ಸೇರಬೇಕು.

೨ ಗಡಿಪ್ರಾಂತ್ಯದ ಹಳ್ಳಿಗಳಲ್ಲಿ ಮೇಲಿನಂತೆ ಮಾಡುವುದಕ್ಕೆ ಬದಲಾಗಿ (ಪ್ಲೆಬಿಸೈಟ್) ಪ್ರಜೆಗಳಿಗೇ ತಾವು ಯಾವ ಪ್ರಾಂತಕ್ಕೆ ಸೇರಬೇಕೆಂಬ ನಿಶ್ಚಯಾಧಿಕಾರವನ್ನು ಕೊಟ್ಟು ಬಿಡಲೂ ಬಹುದು. ಅವರ ಸಂಖ್ಯಾಬಲ ಎಷ್ಟೇ ಇರಲಿ ಬಹುಮತದಂತೆ ಅವರು ಪ್ರಾಂತ್ಯ ಪ್ರವೇಶ ವಿಚಾರವನ್ನು ನಿಶ್ಚಯ ಮಾಡಿಕೊಳ್ಳಲಿ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹಿಂದುಸ್ತಾನದ ರಾಯಭಾರಿಗಳಾಗಿ ರಶಿಯಕ್ಕೆ ತೆರಳಿದ್ದರಿಂದ ತೆರವಾದ ಪ್ರಾಂತಿಕ ಶಾಸನ ಸಭೆಯ ಸ್ಥಳಕ್ಕೆ ಕಾನಪುರ ಜಿಲ್ಲೆಯಿಂದ ಶ್ರೀಮತಿ ಸುಚೇತಾ ಕೃಪಲಾನಿಯವರು ಅವಿರೋಧವಾಗಿ ಆರಿಸಿಬಂದಿದ್ದಾರೆ.

ಕನ್ನಡಿಗರ ಗೀತೆ

(೧೯೪೭ ನೆಯ ನವೆಂಬರ ೨೭)

ರಾಗ: ಕಾಂಬೋಧಿ ತಾಳ: ಝಂಪೆ

ಸ್ವಾಗತಂ 'ಕರ್ನಾಟಕ'ದ ಸಹೋದರರೇ! ಸ್ವಾ.॥
ಸ್ವಾಗತಂ ನಿಖಿಲ 'ಭಾರತ' ಸುಧೋದಯರೇ! ॥ಅ. ಪ.॥

ಇಂದಿನ 'ಸ್ವತಂತ್ರ ಭಾರತ'ದಲ್ಲಿ ಮೊದಲಾಗಿ ।
ಸಂಧಿಸುವ 'ಸಾಹಿತ್ಯ ಪರಿಷತ್ತಿ'ಗಾಗಿ ।
ಬಂದಿರೆ? 'ಪ್ರಜಾಧಿಪತ್ಯ'ದ 'ಮಹೀಶೂರ'ರೇ ।
ಕುಂದಣದ-ಚಂದನದ-ದೇಶಬಾಂಧವರೇ! ॥೧॥

ಸ್ವರ್ಣಭೂ-ಸ್ವಾತಂತ್ರ್ಯ'ದೊಡನೆ
ಸ್ವಜನಾಭ್ಯುದಯ ।
ವನ್ನು ಚಿಂತಿಸುವ 'ಸತ್ಯಾಗ್ರಹ'ವ ನಡೆಸು ॥
ಕೆನ್ನೀರ 'ಹೈದರಾಬಾದಿ'ನ ಸುಯೋಧರೇ! ।
ಕನ್ನಡಿಗರೇ! ಸೆಣಸಿ ಬಂದಿರೇ! ಭಲರೇ! ॥೨॥

'ಕರ್ನಾಟಕ ಪ್ರಾಂತ'ದೇಕೀಕರಣ ನಿಶ್ಚಯ ।
ವನ್ನು ಸಾಧಿಸಿ 'ಸ. ಹಾಕರ್ನಾಟಕ'ವನು ॥
ಮನ್ನಿಸಲಿಕಿರುವ 'ಮುಂಬಾಯಿ' ಸಂಸ್ಥಾನವಾ ।
ಕನ್ನಡದ ಮಲ್ಲರೇ! ಸುಕ್ಷೇಮವೇನು? ॥೩॥

ಪಡುಗಡಲ ದಡದೊಳದಗಿರುವ ಕನ್ನಡನಾಡ ।
ಗಡಿಗೆಡರಿಸಿಡುವವರ ತಡೆಯೆ-ದೃಢ ಬಲದ- ॥
ಕಡಲಪದೆಗಂಜದಾ ಬೆಡಗಿನಾ ಕೊಡಗಿನಾ ।
ಕಡುಗಲಿಗಳ್ಕೆ ತಂದಿರೇ? ಸುಖವೆ ಪಯಣ? ॥೪॥

ವಿಶ್ವಕರ್ನಾಟಕ'ದ 'ತಾತ'ನಧ್ಯಕ್ಷತೆಯ ।
ವಿಶ್ವಾಸದಲಿ 'ನಮ್ಮ' ನಾಡನೇಳಿಗೆಯ ॥
ವಿಶ್ವ ಭಾರತಕೆನಿಡಲು 'ಮುದರಾಸಿ'ನೆಡೆಗಿಳಿದ ।
'ವಿಶ್ವ ಕನ್ನಡಿಗ'ರೇ! ಬಂದುದಾನಂದ ॥೫॥

ಮಧ್ವ, ಶಂಕರ 'ಮಠ'ಗಳಲ್ಲಿ 'ಕೂಡಲು'ನಾದ ।
ವೆಮ್ಮ 'ಸಂಗಮ'ನಾದ 'ಕಾಶಿ'ನಾಲಯದ ॥
ಶುದ್ಧ ಕನ್ನಡದ 'ಕಾಸರಗೋಡು' ಸ್ವಾಗತಕೆ ।
ಸಿದ್ಧವಿದೆ ಕರ್ನಾಟಕದ ಮಹೋತ್ಸವಕೆ ॥೬॥

ಇಲ್ಲಿ 'ಭುವನೇಶ್ವರಿ'ಯ 'ಕನ್ನಡಾಂಬೆ'ಯ
ಹರಕೆ ।
ಸಲ್ಲಿಸಲು ನೆರೆದ ಕನ್ನಡ 'ಭಕ್ತ'ಜನಕೆ ॥
'ಮಲ್ಲಿಕಾರ್ಜುನ' ದೇವನಭಯವನು ಕರುಣಿನಲಿ ।
ಸಲ್ಲಲಿತ 'ವಿಜಯಲಕ್ಷ್ಮೀ'ಶ' ನೊಲಿದಿರಲಿ! ॥೭॥

ಪುಂಡೂರು ಲಕ್ಷ್ಮೀನಾರಾಯಣ
ಪುಣಿಂಚತ್ತಾಯ

ಪುಸ್ತಕ ವಿಮರ್ಶೆ

ಅರುಣ

(ಕೈಬರಹದ ತ್ರೈಮಾಸಿಕ. ಪುಟಗಳು ೯೫)

ಧಾರವಾಡ ಕರ್ನಾಟಕ ಹಾಯಸ್ಕೂಲಿನ ಮಾಳಮಡ್ಡಿ ಶಾಖೆಯ ಶಾಲೆಯ ೫ ನೆಯ ೬ ನೆಯ ವರ್ಗಗಳ ಹುಡುಗರು ಇದನ್ನು ಹೊರಡಿಸಿದ್ದಾರೆ. ಪತ್ರಿಕೆಯ ಪುಟಪುಟಕ್ಕೆ ಹುಡುಗರ ಉದ್ಯಮಶೀಲತೆಯು ಒಡೆದು ಕಾಣುವಂತಿದೆ. ಪತ್ರಿಕೆಯ ಓರಣಕ್ಕೆ ಅಲಂಕರಣದ ಒಪ್ಪ ಹಾಕಿದ್ದರಿಂದ ಅಚ್ಚುಕತ್ತಿನ ಮುದ್ರಿತ ಪತ್ರಿಕೆಗಳನ್ನು ಕೂಡ ನಾಚಿಸುವಂತಿದೆ. ವಿಧವಿಧ ವರ್ಣಗಳ ಹಿತವಾದ ಮಿಲನದಿಂದ ಕೂಡಿದ ಹದವರಿತ ಬಗೆಬಗೆಯ ಚಿತ್ರಣಕ್ಕೆ ಹೊಣೆಯಾದ ಅನಂತ ಪ್ಯಾಟಿ ಎಂಬ ಹುಡುಗ, ತಕ್ಕ ಪ್ರೋತ್ಸಾಹ ಸಿಕ್ಕರೆ, ಉತ್ತಮ ಶಿಲ್ಪಿಯಾಗದಿರಲಾರ. ಪ್ರಕಟಿಸಲ್ಪಟ್ಟ ಲೇಖನಗಳನ್ನೂ ಕವಿತೆಗಳನ್ನೂ ಇವು ಹುಡುಗರು ಬರೆದವು ಎಂಬ ಅರಿವಿನಿಂದ ಓದಿದರೆ ಪಾಡುಗಾಯಿಯ ರುಚಿ ಸಿಕ್ಕದಿರದು. ನಿರೂಪಣಾವಿಧಾನ ಕೈಲಿ ಸರಿಯಿಲ್ಲ. ಅದರೂ ಕೈ ಇನ್ನೂ ಪಳಗಬೇಕು. ಇದನ್ನು ಪ್ರಕಟಪಡಿಸಿದ ಹುಡುಗರು ತಮ್ಮ ದಿನದ ಅಭ್ಯಾಸಕ್ಕೆ ವ್ಯಾಘಾತ ಬರದಂತೆ ನೋಡಿಕೊಳ್ಳುತ್ತಿದ್ದರೆ ಇಂತಹ ಪತ್ರಿಕೆಗಳು ಶಾಲೆಯಲ್ಲಿ ಹೊರಟಷ್ಟೂ ಒಳ್ಳೆಯದೇ.

Commerce (ವಿಶೇಷಾಂಕ)

ಪ್ರಕಾಶಕರು ಶ್ರೀ ಎಫ್. ಬೋರ್ಟಿನ್, ಚರ್ಚಗೇಟ ರಸ್ತೆ, ಮುಂಬಯಿ.

ಪುಟ ೧೮೦, ಬೆಲೆ ರೂ. ೫

ಆಹಾರ ಸಮಸ್ಯೆ, ಜಮೀನುದಾರಿ, ಭಾರತ ರಾಜಕಾರಣ, ಆರ್ಥಿಕ ವಿಚಾರ, ಜಾಗತಿಕ ನ್ಯಾಯ, ಚಿನ್ನ, ಅಣುಶಕ್ತಿಯ ಭವಿಷ್ಯ, ಉದ್ಯೋಗಗಳ ರಾಷ್ಟ್ರೀಕರಣ, ಮಲೇರಿಯ ನಿವಾರಣ, ಭಾರತದ ಹಡ ಉದ್ದಿಮೆಯ ಮುಂತಾದ, ಸಾಲು ಮುಂತಾದ ಹಲವಾರು ಉಪಯುಕ್ತವೂ ವಿಷಯ ವಿವರಣಾತ್ಮಕವೂ ಆದ ಲೇಖನಗಳಿಂದಲೂ ವರ್ಣಚಿತ್ರಗಳಿಂದಲೂ ಪತ್ರಿಕೆ ಕಂಗೊಳಿಸುತ್ತದೆ. ವ್ಯವಹಾರ ಕುಶಲರಿಗೆ ಅದ ವೃಕಟಿಸಿರುವ ಜ್ಞಾನರತ್ನದಂತೆವೆನಿಸುವ ಇದು ಸರ್ವಗ್ರಾಹ್ಯವಿದೆ.

ಜೀವನ ಮತ್ತು ವಿಜ್ಞಾನ

ಹಾಲು

[ವೆಂಕಟಾಚಾರ್ಯ ಉಪಾಧ್ಯಾಯ ... ಎಂ. ಎಸ್. ಸಿ.]

ಹಾಲು ಒಂದು ಉತ್ತಮವಾದ ಆಹಾರವೆಂದು ಕರೆಯಲ್ಪಟ್ಟಿದೆ. ಏಕೆಂದರೆ, ಇದರಲ್ಲಿ ನಮ್ಮ ಪೋಷಣೆಗೆ ಬೇಕಾದ ಎಲ್ಲ ಆಹಾರಾಂಶಗಳು ಸರಿಯಾದ ಪ್ರಮಾಣದಲ್ಲಿರುತ್ತವೆ. ಎಂತಲೇ ಆಹಾರ ಶಾಸ್ತ್ರಜ್ಞರು ಹಾಲನ್ನು, 'ಸಂಪೂರ್ಣ ಆಹಾರ' ವೆಂದು ಕರೆದಿದ್ದಾರೆ.

ಹಾಲಿನಲ್ಲಿದ್ದ ಎಲ್ಲ ಧಾತುಗಳಲ್ಲಿ 'ಕ್ಯಾಲ್ಸಿಯಂ' ಬಹಳ ಮಹತ್ವದ್ದಾಗಿದೆ. ಇದು ಹಲ್ಲು ಮತ್ತು ಎಲುವುಗಳ ಬೆಳವಣಿಗೆಗೆ ತುಂಬ ಅವಶ್ಯ. ಹಾಲಿನಲ್ಲಿದ್ದಷ್ಟು 'ಕ್ಯಾಲ್ಸಿಯಂ' ಮತ್ತಾವ ಪದಾರ್ಥಗಳಲ್ಲಿಯೂ ಇಲ್ಲ. ಇದಲ್ಲದೆ ಇದು ಹಾಲನ್ನು ಕಾಯಿಸುವುದರಿಂದಾಗಲಿ, ಒಣಗಿಸುವುದರಿಂದಾಗಲಿ ಅಥವಾ ಮಜ್ಜಿಗೆಯಲ್ಲಿ ಕೂಡಾ ತರಿಸುವುದರಿಂದಾಗಲೀ ನಷ್ಟವಾಗುವದಿಲ್ಲ. ಕಾರಣ, ಹಾಲು ಉಗಯೋಗಿಸಲ್ಪಡಲಿ ... ಪೋಷಣೆಗೆ ಬೇಕಾದ 'ಕ್ಯಾಲ್ಸಿಯಂ' ದೊರಕಿಸಿಕೊಳ್ಳುವುದು ಬಹಳ ಕಠಿಣ.

ರಕ್ತ ಹೆಪ್ಪುಗಟ್ಟುವುದಕ್ಕೂ ಹಾಗೂ ಎಲುವುಗಳ ಬೆಳವಣಿಗೆಗೂ 'ಕ್ಯಾಲ್ಸಿಯಂ' ಮತ್ತು 'ರಂಜಕ'ಗಳು ಬಹಳ ಅವಶ್ಯಕ. ಸುದೈವದಿಂದ ಇವೆರಡೂ ಹಾಲಿನಲ್ಲಿ ಸಾಕಷ್ಟು ಪ್ರಮಾಣದಲ್ಲಿವೆ. ಇದಲ್ಲದೆ ಹಾಲಿನಲ್ಲಿ ಕಬ್ಬಿಣ, ತಾಮ್ರ, ಮತ್ತು ಮೆಂಗನೀಜ್ ಧಾತುಗಳು ಕಡಿಮೆಯ ಪ್ರಮಾಣದಲ್ಲಿದ್ದು, ಶರೀರ ಪೋಷಣೆಗೆ ಉಪಯುಕ್ತವಾಗಿವೆ.

ಶರೀರ ಪೋಷಣೆಗೆ ಬೇಕಾದ ಹಾಗೂ ಹಾಲಿನಲ್ಲಿರುವ ಇನ್ನೊಂದು ಮಹತ್ವದ ವಸ್ತುವೆಂದರೆ ರಿಬೋಫ್ಲಾವಿನ್ (Riboflavin) ಇದೊಂದು 'ಬಿ' ಜೀವಸತ್ವ. ಶರೀರದಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದ್ದರೆ ಮನುಷ್ಯನು ಹೆಚ್ಚು ವರ್ಷ ಬಾಳುತ್ತಾನೆ. ಈ ಜೀವಸತ್ವವು ಬಹಳ ಸೂಕ್ಷ್ಮವಿದ್ದ ಕಾರಣ ಹಾಲನ್ನು ಹೆಚ್ಚು ವೇಳೆ ಬಿಸಿಲಿನಲ್ಲಿ ಇಡಕೂಡದು.

'ಬಿ' ಜೀವಸತ್ವವಲ್ಲದೆ ಹಾಲಿನಲ್ಲಿ 'ಎ' ಜೀವಸತ್ವವು (ಇದೊಂದು ಮೇದೋದ್ರವ್ಯವಾಗಿರುವುದರಿಂದ ಹಾಲಿನ ಕೆನೆಯಲ್ಲಿ ಹೆಚ್ಚಾಗಿ ಸಿಕ್ಕುತ್ತದೆ.) ಹೆಚ್ಚಿನ ಪ್ರಮಾಣದಲ್ಲಿಯೂ, ಸಸಾರಜನಕಾಂಶ, ಸಿಹಿ ಶರ್ಕರೆ 'ಸಿ', 'ಡಿ' ಮತ್ತು 'ಈ' ಜೀವಸತ್ವಗಳು ಕಡಿಮೆಯ ಪ್ರಮಾಣದಲ್ಲಿಯೂ ಇರುತ್ತವೆ. ಹಾಲಿನಲ್ಲಿದ್ದ ಎಲ್ಲ ಆಹಾರಾಂಶಗಳು ಸುಲಭವಾಗಿ ಜೀರ್ಣವಾಗುವ ರೀತಿಯಲ್ಲಿವೆ. ಹಾಲನ್ನು ಕಾಯಿಸುವುದರಿಂದ ಅದರಲ್ಲಿಯ ಜೀವಸತ್ವಗಳು ನಾಶವಾಗುವದಿಲ್ಲ.

ಒಟ್ಟಿನಮೇಲೆ ದಿನಂಪ್ರತಿ ಒಂದು ಪಾವು ಹಾಲು ಸೇವಿಸಿದಲ್ಲಿ (ಇದು, ಒಂದು ದಿನಕ್ಕೆ) ಶರೀರ ಪೋಷಣೆಗೆ ಬೇಕಾಗುವ ಎಲ್ಲ ಆಹಾರಾಂಶಗಳನ್ನೂ ಪೂರೈಸುತ್ತದೆ.

ಪಾಕಿಸ್ತಾನದ ವಿದೇಶ ಮಂತ್ರಿ ಸರ ಮಹಮ್ಮದ ಜಾಫರುಲ್ಲಾಖಾನರು ಬ್ರಹ್ಮದೇಶದ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ೧೯೪೮ ಜನವರಿ ಮೊದಲವಾರದಲ್ಲಿ ರಂಗೂನಕ್ಕೆ ತೆರಳಬಹುದು.

ಅಂತರ್ರಾಷ್ಟ್ರೀಯ

ಟ್ರೂಮನ್ನರಿಗೆ ಸೋಲು ?

ಹೆನ್ರಿ ವ್ಯಾಲೇಸರು ಆಕಾಶವಾಣಿಯಲ್ಲಿ ಭಾಷಣ ಮಾಡುತ್ತ ತಾವು ೩ ನೆಯ ಪಕ್ಷ ಸ್ಥಾಪಿಸಿ ಅಧ್ಯಕ್ಷ ಚುನಾವಣೆಗೆ ನಿಲ್ಲುವುದಾಗಿ ಸಾರಿದ್ದರಿಂದ ರೂಜವೆಲ್ಟರ ಮರಣ ನಂತರ ಡೆಮೊಕ್ರ್ಯಾಟಿಕ್ ಪಕ್ಷಕ್ಕೆ ದೊಡ್ಡ ಆಘಾತ ಬಿದ್ದಂತಾಯಿತೆಂದು ವಾಶಿಂಗ್ಟನ್ನಿನಲ್ಲಿ ಹೇಳಲಾಗುತ್ತಿದೆ.

ಅಧ್ಯಕ್ಷ ಟ್ರೂಮನ್ನರ ಖಾಸಗಿ ವೈದ್ಯರು ಕಾಳಿನ ಪೇಟೆಯಲ್ಲಿ ಸಟ್ಟಾ ವ್ಯಾಪಾರದಲ್ಲಿ ತೊಡಗಿದ್ದು ಪತ್ರಿಕೆಯಲ್ಲಿ ಪ್ರಧಾನವಾಗಿ ಪ್ರಕಟವಾದ ದಿನವೇ ವ್ಯಾಲೇಸರ ಭಾಷಣ ನಡೆದುದರಿಂದ ಅದು ಜನರನ್ನು ಬಹುವಾಗಿ ಆಕರ್ಷಿಸಿತೆಂದು ತಿಳಿಯುತ್ತದೆ. ವ್ಯಾಲೇಸರು ಧ್ಯೇಯವಾದಿಗಳಾದುದರಿಂದ ವ್ಯವಹಾರ ಚತುರರಾಜಕಾರಣಿಗಳಾಗಲಾರರೆಂದು ಪ್ರಚಾರ ಸಾಗಿದ್ದರೂ ನಿನ್ನಿನ ಭಾಷಣದಿಂದ ಟ್ರೂಮನ್ನರಿಗೆ ಸೋಲುಂಟಾದರೂ ಆಗಬಹುದೆಂದು ಶಂಕಿಸಲಾಗಿದೆ.

ಚಿತ್ತಾಯದ ಸೈನ್ಯ ಶಿಕ್ಷಣವನ್ನು ತೆಗಳಿದ್ದರಿಂದ ವ್ಯಾಲೇಸರು ತರುಣರಿಗೆ ಪ್ರಿಯರಾದರು. ಹಾಗೇ ವರ್ಣದ್ವೇಷವನ್ನು ಅವರು ಖಂಡಿಸಿದ್ದರಿಂದ ಅವರಿಗೆ ನ್ಯೂಯಾರ್ಕಿನ ಮತದಾರರು ಬೆಂಬಲಿಗರಾಗುವಂತಾಯಿತು.

ಯುರೋಪಿಗೆ ಸಹಾಯ ಮಾಡುವ ಮಾರ್ಶಲ ಯೋಜನೆಯನ್ನು ಟೀಕಿಸುವಾಗ ರಿಪಬ್ಲಿಕನ್ ಪಕ್ಷದವರಾದ ರಾಬರ್ಟ ಟಾರ್ಪರಂತೆಯೇ ವ್ಯಾಲೇಸರು ಅದರಿಂದ ಬೆಲೆಗಳು, ಮಿತಿಮೀರಿ ಅಮೇರಿಕದ ಜೀವನ ನಿರ್ವಾಹದ ವೆಚ್ಚ ಏರಿ ... ಜನನ್ನು ನಿಜವಾಗಿ ಊಡಬಲ್ಲರು. ಈ ... ರೀಕೆಯ ಪವಾಡದ ಗುಟ್ಟು ಇಲ್ಲಿದೆ. ಅವರು ... ವಲ ಇನ್ನೊಬ್ಬರ ದೋಸೆಯನ್ನೇ ತಿಂದರೆ ... ವರೆದು ಹಾಗೇ ಉಳಿಯಬೇಕೆನ್ನರಿ. ಆದರೆ ... ದನ್ನು ಮಾಡುವ ಕ್ರಮವೆಂದರೆ, ಸಾಮಾನ್ಯ ... ಗಿ ನೇನು ತಿನ್ನುವುದಕ್ಕಿಂತ ದೊಡ್ಡ ತುಂಡನ್ನು

ಯೆಹೂದಿಗಳ ಪ್ರತಾಪ

೬ ಅರಬ್ಬೀ ಪ್ರದೇಶಗಳನ್ನು ಚೆನ್ನಾಗಿ ಶಸ್ತ್ರಸಜ್ಜಿತರಾದ ಯೆಹೂದಿಗಳು ಆಕ್ರಮಿಸಿದರೆಂದು ಇದೀಗ ಜೆರೂಸಲೇಮಿನಿಂದ ಸುದ್ದಿ ಬಂದಿದೆ. ಒಬ್ಬ ಅರಬನನ್ನು ಕೊಂದು ೫ ಅರಬ ಗೃಹಗಳನ್ನು ನಾಶಗೊಳಿಸಿ ಅನೇಕರಿಗೆ ಅವರು ಗಾಯ ಮಾಡಿ ಹೋದರು. ಆಕ್ರಾಮಕರು ಮೆಶಿನ್ ಗನ್ ಮತ್ತು ಬಾಂಬುಗಳನ್ನು ಪ್ರಯೋಗಿಸಿದ್ದಲ್ಲದೆ ಸಮರ್ಥವಾಗಿ ಅರಬರ ಪ್ರತ್ಯಸ್ತ್ರಗಳನ್ನು ಖಂಡಿಸಿದರು. ರಾತ್ರಿಯ ವೇಳೆ ಸಲಾಮೆ, ಜೈಫಾ, ಹಾರ್ಟವ್ ಮತ್ತು ಪೋಜಾಗಳ ಮೇಲೂ ಯೆಹೂದಿಗಳು ದಾಳಿ ಮಾಡಿದುದಾಗಿ ತಿಳಿಯುತ್ತದೆ.

ಇದಾವುದರ ಪರಿಣಾಮ ? ಸಂಯುಕ್ತ ರಾಷ್ಟ್ರಸಂಘವು ಪಾಲೆಸ್ತಾನವನ್ನು ವಿಭಜಿಸಬೇಕೆಂದು ನಿರ್ಣಯಿಸಿದುದರ ಫಲವಿದಲ್ಲದೆ ಮತ್ತೇನು ? ಹಿಟ್ಲರನ ಪ್ರಕಾರ The best method of defence is,to be on the offensive—ಆತ್ಮರಕ್ಷಣೆಯ ಉತ್ತಮೋತ್ತಮ ಉಪಾಯವೆಂದರೆ ಮೊದಲೇ ಶತ್ರುಗಳ ಮೇಲೆ ಬೀಳುವುದು. ಇದೇ ಸೂತ್ರವನ್ನು ಇಂದು ಯುದ್ಧ ವಿಜೃಂಭಣೆಯ ಘೋಷಣೆ ಮಾಡುತ್ತಿರುವ ಅರಬರನ್ನು ಬಗ್ಗುಬಡಿಯಲು ಯೆಹೂದಿಗಳು ಅನುಸರಿಸಿದಂತಿದೆ. ವಿಭಜನೆಯಲ್ಲಿ ಅರಬರಿಗೇ ಹೆಚ್ಚು ಅನ್ಯಾಯವಾಗಿದೆಯೆಂಬುದು ಆಗಲೆ ವಿದಿತವಾಗಿದೆ. ಅವರ ಆರ್ಭಟ ಕೃತ್ಯಗಳನ್ನು ಅವಲೋಕಿಸಿ

ಅವರ ಉತ್ಪಾದನೆಯನ್ನು ಅಳಿದು, ಅದನ್ನು ಪ್ರಕೃತಿಯ ಉದಾರ ವರಗಳೊಡನೆ ಹೋಲಿಸಿ ನೋಡಿದರೆ ಯಂತ್ರಗಳನ್ನು ಮಾನವನು ಉತ್ಪಾದನೆ ಹೆಚ್ಚಿಸುವುದಕ್ಕಿಂತ ಹೆಚ್ಚಾಗಿ ಉತ್ಪನ್ನವನ್ನು ಹಾಳುಮಾಡಲು ಬಳಸಿದ್ದಾನೆ ಎಂದೇ ಹೇಳಬೇಕಾಗುತ್ತದೆ.

ಮದರಾಸು ಮದ್ಯಪಾನ ನಿರೋಧ ಕಾನೂನು

ಈ ಸಂಬಂಧವಾಗಿ ಆಯುರ್ವೇದಾಭಿಮಾನಿಗಳಲ್ಲಿ ಒಂದು ವಿನಂತಿ

ಶ್ರೀ ಜನಾರ್ದನ ನಾಯಕ, ಮ್ಯಾನೇಜಿಂಗ್ ಡೈರೆಕ್ಟರ್, ಭುಜಂಗ ಫಾರ್ಮಸಿ ಕಟಪಾಡಿ ದ. ಕ., ಇವರಿಂದ

ಪ್ರೊಹಿಬಿಶನ್ ಆಕ್ಟಿನ ೧೪ ನೇಯ ಕಲಮಿನ ಅನ್ವಯ ಅಸವಾರಿಷ್ಟ ಮತ್ತು ಮಾದಕ ಪದಾರ್ಥಗಳು ಸೇರಿದ ಇತರ ಔಷಧಿಗಳ ತಯಾರಿಕೆಗೆ ಅಗತ್ಯವಿರುವ ಲ್ಯಾಸನ್ಸುಗಳನ್ನು ಜಿಲ್ಲಾ ಕಲೆಕ್ಟರರಿಂದ ಪಡೆದುಕೊಂಡೇ ಕೈಕೊಳ್ಳಬೇಕಾಗಿರುತ್ತದೆ. ಈ ವಿಷಯದಲ್ಲಿ ಮಾನ್ಯ ಸರಕಾರವು ಯೋಗ್ಯ ಪ್ರಚಾರ ಕಾರ್ಯವನ್ನು ಮಾಡದ ಸಂಬಂಧ, ಜನಸಾಮಾನ್ಯರಿಗೂ, ಆಯುರ್ವೇದ ವೈದ್ಯ ವೃತ್ತಿಯವರಿಗೂ ತುಂಬ ತೊಂದರೆದಾಯಕವಾಗಿ ಕಂಡು ಬಂದಿರುತ್ತದೆ. ಹಲವು ಕಡೆಗಳಲ್ಲಿ ಸಭೆಗಳು ಜರುಗಿ ಸರಕಾರದವರು ಆಯುರ್ವೇದ ಔಷಧಿಗಳ ವಿಷಯವಾಗಿ ಈ ರೀತಿಯ ಧೋರಣೆ ವಹಿಸಿದ್ದನ್ನು ಖಂಡಿಸಿ ನಿರ್ಣಯಗಳನ್ನು ಮಾಡಿ, ಮಾನ್ಯ ಸರಕಾರದ ಗಮನಕ್ಕೆ ತಂದಿರುವ ಸಂಗತಿಗಳು ಅಲ್ಲದೆ ಅಲ್ಲಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಆಯುರ್ವೇದ ಔಷಧಿಗಳನ್ನು ಮಾರುವವರ ಕೂಡ ಅಸವಾರಿಷ್ಟಗಳನ್ನು ಅಮಾನತು ಪಡಿಸಿದ ದೂರುಗಳು, ಇವರಿಗೆ ಈ ಹೊಸ ಆಕ್ಟಿನ ವಿಷಯವಾಗಿ ಏನೊಂದೂ ತಿಳಿಸದೆ ಲಾಯಸನ್ಸ ಪಡೆಯದೆ ಮಾರ ಬಾರದಾಗಿ ಮಾತ್ರ ತಿಳಿಸಿರುತ್ತಾರಾಗಿ ಕೂಡ ದೂರುಗಳು ಬಂದಿರುತ್ತವೆ. ಅದಕಾರಣ ಈ ಆಕ್ಟಿನ ಪ್ರಕಾರ ಅಸವಾರಿಷ್ಟಗಳನ್ನು ಮಾಡಲು ಇಲ್ಲವೆ ಮಾರಲು ಸಿಗಿ... ಇಚ್ಛಿಸದಂತಾಗದು.

ಮಾಡುವವರಿಗೆ ಏನೊಂದೂ ತೊಂದರೆಗಳಾಗದ ರೀತಿಯಲ್ಲಿ ಅಗತ್ಯವಿರುವ ಅನುಕೂಲತೆಗಳನ್ನು, ಔಷಧದ ರೂಪವಾಗಿ ಉಪಯೋಗಿಸಲು ಅಡ್ಡಿಯಾಗದಂತೆ, ಮಾನ್ಯ ಸರಕಾರದವರು ಈ ಆಕ್ಟಿನಲ್ಲಿ ಸೇರಿಸಿರುತ್ತಾರೆ. ಅಸವಾರಿಷ್ಟಗಳ ದುರುಪಯೋಗವಾಗದಂತೆ ಈ ಪ್ರಕಾರ ಕ್ರಮಗಳನ್ನು ಜಾರಿಗೆ ತಂದಿರುವದು ನ್ಯಾಯವಾಗಿರುತ್ತದೆ. ಅಸವಾರಿಷ್ಟಗಳನ್ನು ನ್ಯಾಯವಾದ ರೀತಿಯಲ್ಲಿ ತಯಾರಿಸುವದಕ್ಕೆ ಮತ್ತು ಮಾರುವದಕ್ಕೆ ಜಿಲ್ಲಾ ಕಲೆಕ್ಟರ ದೊರೆಗಳಿಂದ ಅಗತ್ಯವಿರುವ ಲ್ಯಾಸನ್ಸ್ ಪಡೆಯಲು ಯಾವ ತೊಂದರೆಗಳೂ ಇರುವದಿಲ್ಲ. ಪ್ರತಿಯೊಬ್ಬ ವೈದ್ಯಕೀಯ ವೃತ್ತಿಯವರು ತನ್ನ ಹೆಸರು, ವಿಳಾಸ, ಗ್ರಾಮ, ತಾಲೂಕು, ಮತ್ತು ವೈದ್ಯಕೀಯವೃತ್ತಿಯನ್ನು ಎಷ್ಟು ಸಮಯದಿಂದ ಮಾಡಿಕೊಂಡಿರುತ್ತಾನೆ ಎಂಬುದಾಗಿ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಂಬಂಧಪಟ್ಟ ಪ್ರೊಹಿಬಿಶನ್ ಇನ್ಸ್‌ಪೆಕ್ಟರರ ಮುಖಾಂತರ, ಅವರ ಶಿಫಾರಸು ಸಮೇತ ಜಿಲ್ಲಾ (೧) ಫಾರ್ಮಸಿ ಲ್ಯಾಸನ್ಸ್ (Pharmacy Licence) (೨) ವೈದ್ಯಕೀಯ ವೃತ್ತಿಯ ಲಾಸೆನ್ಸ್ (Ayurvedic Practitioner's Licence) ಗಳನ್ನು ಪಡೆದುಕೊಳ್ಳಬೇಕು.

... ಪದ್ಧತಿಗಳಿಂದ ಅವರು ಹೇಳುವಂತೆ ಸರ್ವಹಿತ ಸಾಧಿಸುವುದೇ ? ಈ ವರೆಗೆ ಅಂಥ ಪದ್ಧತಿಗಳಿಂದ ನಮ್ಮ ಜನರಿಗೆ ಸಂಭವಿಸಿದ ದುಃಖ ದುರಂತಗಳೆಷ್ಟೆಂಬುದನ್ನು ಅವರು ಗಮನಿಸಿದರೆ ಮೇಲಿನ ಮಾತಿನಲ್ಲಿಯ ಸತ್ಯತೆ ತಾನಾಗಿ ಹೊಳೆಯುತ್ತದೆ. ಇದನ್ನು ಗಮನದಲ್ಲಿ ತಂದುಕೊಂಡು ರಾಷ್ಟ್ರಸೇವಾಕರ್ತರು ಉದ್ಯೋಗ, ಧಂಧೆಗಳನ್ನು ಉತ್ಪಾದನೆ ಹೆಚ್ಚಿಸುವ ಗುರಿಯಿಂದ ಸಂಘಟಿಸುವರೆ ?

...ದರೆ ಅದು ಸಣ್ಣ ಕಳ್ಳತನವೆನಿಸಲಾರದೆ ಉತ್ಪಾದನವೆನ್ನಿಸಲಾರದು.

ಅಧಿಕೋತ್ಪಾದನೆ

ಮೇಲಿನಂತೆ ಮಲಬಾರಿನಲ್ಲೂ ಬತ್ತದ ಗದ್ದೆಗಳಲ್ಲಿ ತೆಂಗನ್ನು ಬೆಳೆಸಲಾಗುತ್ತದೆ. ಆ ತೆಂಗಿನ ಕಾಯಿಗಳಾದರೂ ಮನುಷ್ಯರ ಬಳಕೆಗಾಗಿ ಅಲ್ಲ; ಗಿರಣಿಗಳಲ್ಲಿ ಎಣ್ಣೆ ತಯಾರಿಸಿ ಸಾಬೂನು ಮಾಡು

ತರ್ಕಿಸಿದರೆ ತಪ್ಪಾಗದು. ರಾಜತಂತ್ರದ ಗತಿಯು ಕ್ಷಣ ಕ್ಷಣಕ್ಕೆ ಬದಲಾಗುವ ಸ್ವಭಾವದ್ದಾದುದರಿಂದ ಪರಿಣಾಮವನ್ನು ನಿರ್ಧರಿಸಿ ಹೇಳಲು ಕೆಲಕಾಲ ಕಾಯಬೇಕಾದೀತು.

ಹಿಂದೀ—ಸಿಂಹಳ ಮಾತುಕತೆ

ಸಿಂಹಳದ ಮುಖ್ಯ ಮಂತ್ರಿಯಾದ ಶ್ರೀ ಡಿ. ಎಸ್. ಸೇನಾನಾಯಕೆಯವರು ಹಿಂದುಸ್ತಾನ—ಸಿಂಹಳಗಳ ನಡುವಣ ಪ್ರಮುಖ ರಾಜಕೀಯ ಪ್ರಶ್ನೆಗಳ ಬಗ್ಗೆ ಮಾತುಕತೆ ನಡೆಸಲು ಮಹಾಪ್ರಧಾನ ಜವಾಹರರ ಭೆಟ್ಟಿಗಾಗಿ ದಿಲ್ಲಿಗೆ ದಯಮಾಡಿಸಿದ್ದಾಗಿ ತಿಳಿಯುತ್ತದೆ.

ಈ ರಾಜಕೀಯ ಪ್ರಶ್ನೆಗಳಲ್ಲಿ ೮ ಲಕ್ಷ ಹಿಂದೀಯರು ಸಿಂಹಳದಲ್ಲಿ ನೆಲಸಿದ್ದು, ಅವರ ನಾಗರಿಕ ಹಕ್ಕು ಬಾಧ್ಯತೆಗಳನ್ನು ನಿರ್ಣಯಿಸುವುದು ಮುಖ್ಯವಾದುದು. ಸಿಂಹಳಕ್ಕೆ ಭಾರತೀಯರು ವಲಸೆಹೋಗುವುದನ್ನು ನಿಲ್ಲಿಸುವ ಹಿಂದೀ ಧೋರಣವನ್ನು ಸರ್ಕಾರ ಕಾಯದೆಯನ್ವಯ ಇನ್ನು ಮುಂದೆಯೂ ಭಾರತ ಸರಕಾರವು ಅಮಲಿನಲ್ಲಿಡಬಹುದೆಂದು ಹೇಳಲಾಗುತ್ತದೆ. ಅಗಲೆ ಸಿಂಹಳದಲ್ಲಿ ನೆಲಸಿರುವ ಹಿಂದೀಯರಿಗೆ ತಾವೇ ಯಾವ ರಾಷ್ಟ್ರಕ್ಕೆ ಸೇರಬೇಕೆಂಬುದನ್ನು ತಾವು ನಿರ್ಧರಿಸಲು ಅವಕಾಶಕೊಡಬೇಕೆಂದು ಜವಾಹರರು ಶ್ರೀ. ಸೇನಾನಾಯಕೆಯವರನ್ನು ಕೇಳಬಹುದೆಂದು ನಂಬಲಾಗಿದೆ. ರಾಷ್ಟ್ರೀಯ ಆರ್ಥಿಕ ಪುನರಭಿವೃದ್ಧಿ ಯೋಜನೆಗಳನ್ನೊಳಗೊಂಡು ಎಲ್ಲ ದರಲ್ಲಿಯೂ ಸಿಂಹಳದ ಪ್ರಜೆಗಳಾಗಿ ಉಳಿಯುವ ನೆಲಬ ಹಿಂದೀಯರಿಗೆ ಸಂಪೂರ್ಣ ನಾಗರಿಕ ಹಕ್ಕು ಬಾಧ್ಯತೆಗಳನ್ನು ಕೊಡಬೇಕೆಂದು ಹಿಂದೀ ಮಹಾಪ್ರಧಾನರು ಕೇಳುವರೆಂದೂ ಊಹಿಸಿಯದೆ.

ಹಿಂದುಸ್ತಾನ-ಸಿಂಹಳಗಳು ಬಹಳ ಕಾಲದಿಂದ ಅಕ್ಕತಂಗಿಯರಂತಿವೆ. ಸಿಂಹಳದಲ್ಲಿಂದು ಕೃಷಿ ...ರಿಕೆ ಮುಂತಾದವುಗಳ ಅಭಿವೃದ್ಧಿಯಾಗಿ ... ಅದಕ್ಕೆ ಹಿಂದೀ ವಲಸೆಗಾರರೂ ಕೆಲಸಗಾರರೂ ಬಹುಮಟ್ಟಿಗೆ ಕಾರಣರು. ಅದರಲ್ಲೂ ಮದ್ರಾಸುಪ್ರಾಂತದಿಂದಲೂ ಮಲಬಾರಿನಿಂದಲೂ ಹೋಗಿ ನೆಲಸಿದವರೇ ಹೆಚ್ಚು. ಈ ದೃಷ್ಟಿಯಿಂದ ಮಹಾ ಪ್ರಧಾನರ ಧೋರಣವು ನ್ಯಾಯಬದ್ಧವಾಗಿದೆ. ಇದಕ್ಕೆ ಸಿಂಹಳದ ಮುಖ್ಯ ಮಂತ್ರಿಗಳು ಒಪ್ಪದಿರರೆಂದು ಊಹಿಸಲಾಗಿದೆ. ಸಿಂಹಳಕ್ಕೆ ಭಾರತದಾಗಿನಿಂದ ಎಲ್ಲ ವಿಧದಿಂದಲೂ ಅನಿವಾರ್ಯವೆಂಬುದನ್ನು ಅವೆಂದೂ ಮರೆಯಲಾಗದು.

ಯನ್ನು ಅಲ್ಲಿಯ ವಿದೇಶ ಕಾರ್ಯ ಅಲ್ಲಗಳೆದಿರುತ್ತದೆ. ಅದಕ್ಕೆ ತುರ್ಕಿಯ ಕಾಯದೆಯೊಂದು ಕಾರಣ ಎಂದು ಅದು ಸಾರಿದೆ. ಆ ಕಾಯದೆಯ ಪ್ರಕಾರ ತುರ್ಕಿಯ ಪ್ರಜೆಗಳು ಅನ್ಯ ಸರಕಾರಗಳ ಕೈಕೆಳಗೆ ಮಿಲಿಟರಿ ಕೆಲಸಕ್ಕೆ ಸೇರಬಾರದೆಂದಿದೆ. ಇವರ ಅನ್ವಯ ಪಾಲೆಸ್ತಾನದ ಕಲಹದಲ್ಲಿ ತಾನು ಕೈಹಾಕದೆ ತಟಸ್ಥನಾಗಿರುವುದಾಗಿ ತುರ್ಕಿಯು ಘೋಷಿಸಿದೆ. ರಶಿಯದ ನೆರೆಯಲ್ಲಿರುವ ತುರ್ಕಿಯ ಈ ಧೋರಣವು ಸ್ವಹಿತಕ್ಕೆ ಅನುಕೂಲವಾಗಿಯೇ ಇದೆ ಎನ್ನದಿರಲಾಗದು. ರಶಿಯ ಅಮೇರಿಕಗಳೆರಡೂ ವಿಭಜನೆಗೆ ಸಮ್ಮತಿಯಿತ್ತ ರಾಷ್ಟ್ರಗಳಾಗಿರುವಾಗ ಅವುಗಳ ಧೋರಣ ಈ ಸಂದರ್ಭದಲ್ಲಿ ಏನೆಂಬುದನ್ನು ನಿರೀಕ್ಷಿಸಿ ನೋಡಬೇಕಾಗಿದೆ.

ಗ್ರೀಸಿನ ಉಗ್ರೋಪಾಯ

"ಸ್ವತಂತ್ರ 'ಸರಕಾರ'"ದ ಕೂಟ ಯೋಧರ ಸೈನ್ಯಗಳನ್ನು ಗ್ರೀಸಿನ ಸರಕಾರವು ಯಶಸ್ವಿಯಾಗಿ ಹಿಮ್ಮೆಟ್ಟಿಸಿದೆಯೆಂದು ತಿಳಿದು ಬಂದಿದೆ. ರಶಿಯದ ನೆರೆಯಲ್ಲಿರುವ ಗ್ರೀಸಿನಲ್ಲಿ ಕಮ್ಯುನಿಸ್ಟರ ಹಾವಳಿಯಿರುವುದು ಸಹಜವಾಗಿದೆ. ಅದುದರಿಂದಲೇ ಅಮೇರಿಕವು ಅವರನ್ನು ಸದೆಬಡಿಯಲು ಅವಶ್ಯವಿರುವ ಧನ ಶಸ್ತ್ರಾಸ್ತ್ರಗಳನ್ನು ಗ್ರೀಸು ಸರ್ಕಾರಕ್ಕೆ ಪೂರೈಸುತ್ತ ಬಂದಿದೆ.

ಗ್ರೀಸು ಸರಕಾರವು ದಾಳಿಗಾರರಿಂದ ಆಕ್ರಾಂತವಾದ ಪ್ರದೇಶದ ಸರಕಾರದ ವಿರುದ್ಧ ೧೯೩೧ರ ಬಹಿಷ್ಕಾರದ ಕಾಯದೆಯನ್ನು ಪುನಃ ಪ್ರಯೋಗಿಸಿತು. ಇದರಿಂದ ಸರಕಾರೀ ನೌಕರರಲ್ಲಿ ಕಮ್ಯುನಿಷ್ಟರಿದ್ದರೆ ಅವರಿಗೆ ಉಚ್ಚಾಟನೆಯಾಗುವುದಲ್ಲದೆ ನಾಡಿನ ಎಲ್ಲ ಕಮ್ಯುನಿಸ್ಟ ಸಂಘ ಸಂಸ್ಥೆಗಳೂ ಇಲ್ಲದಂತಾಗಬೇಕಾಗುವುದು.

ಸ್ಪಷ್ಟ ಧೋರಣವಿಲ್ಲದ ಸೋಶಾಲಿಸ್ಟ ಪಕ್ಷದವರು ಕಮ್ಯುನಿಸ್ಟರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದೆಂದು ಸರಕಾರ ಘೋಷಿಸಿದೆ.

ಗ್ರೀಕ ಕೂಟಬಲಕ್ಕೆ ಬೋಸ್ಪರಸ್ಸಿನ ಮುಖಾಂತರ ಹಡಗುಗಳಲ್ಲಿ ಮದ್ದು ಗುಂಡುಗಳನ್ನು ಕಳುಹಲಾಗುತ್ತಿದೆಯೆಂದು ತುರ್ಕಿಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಹೇಳುವುದೊಂದು ಮಾಡುವುದು ಮತ್ತೊಂದು ಎಂಬ ರೀತಿಯಿಂದ ಅಮೇರಿಕ ಮತ್ತು ರಶಿಯಗಳು ಪರಸ್ಪರರ ವಿದೇಶ ಧೋರಣದಲ್ಲಿ ನಡೆದು

ಕವು ಪ್ರಕಟವಾಗಿ ಯಥೇಚ್ಛ ಸಹಾಯವನ್ನು ಬೇಕಾದಲ್ಲಿಗೆ ಕಮ್ಯುನಿಷ್ಟ ವಿರೋಧಿಗಳಿಗೆ ಕಳುಹುತ್ತಿದೆ. ಹೇಳುವವರಿಲ್ಲದವರ ಮಗಳು ಸೂ... ಬಸವಿಯಾದಳು !

ಆಂಗ್ಲೋ-ಅಮೇರಿಕನ್ ಒಪ್ಪಂದ ?

ನೌಕಾ ನಿರ್ಮಾಣ ಪ್ರಮಾಣದಲ್ಲಿ ಅಮೇರಿಕ ಇಂಗ್ಲಂಡುಗಳಲ್ಲಿ ಒಂದು ಒಪ್ಪಂದವಾಗಬಹುದೆಂದು ವಾಷಿಂಗ್‌ಟನ್ನಿನಲ್ಲಿ ಸುದ್ದಿಯಿದೆ. ಯುರೋಪಿನ ಪುನರುದ್ಧಾರ ಯೋಜನೆಯೊಳಗೆ ಇದು ಬರುವುದು. ಈ ಕಾರ್ಯದಲ್ಲಿ ಇತಿಹಾಸಕಾಲದಿಂದ ನೌಕಾ ನಿರ್ಮಾಣ ಚತುರರಾದ ಅಂಗ್ಲರು ಬಹಳ ಉತ್ಸಾಹ ವಹಿಸಿ ಕೆಲಸ ಮಾಡಲಿರುವರೆಂದು ತಿಳಿಯುತ್ತದೆ.

ಎದುರಿಗೆ ನೋಡಿದರೆ, ಬ್ರಿಟನ್ ಮತ್ತು ಇನ್ನಿತರ ಯುರೋಪ್ಯ ರಾಷ್ಟ್ರಗಳು ನೌಕಾನಿರ್ಮಾಣವನ್ನು ಕಡಿಮೆ ಮಾಡಬೇಕೆಂಬ ಧೋರಣವನ್ನು ಅಮೇರಿಕದ ಸಂಯುಕ್ತ ಸಂಸ್ಥಾನವು ವಹಿಸಿದೆ. ಅದರ ಹೇಳಿಕೆಯಂತೆ ಯುದ್ಧ ಕಾಲದಲ್ಲಿ ಬಳಸಿ ಈಗ ಅದರ ತೀರ ಪ್ರದೇಶದಲ್ಲಿ ನಿಲ್ಲಿಸಲಾಗಿರುವ ಯುದ್ಧದ ಮತ್ತು ಇತರ ಸಾಮಾನ್ಯ ಹಡಗುಗಳನ್ನು ಯುರೋಪ್ಯ ರಾಷ್ಟ್ರಗಳು ಕೊಳ್ಳಬೇಕು ಇಲ್ಲವೆ ಕೊಳ್ಳುವುದಾಗಿ ಮಾತು ಕೊಡಬೇಕು. ತನ್ನ ನೌಕಾ ನಿರ್ಮಾಣ ಕೇಂದ್ರಗಳನ್ನು ತೈಲ ಸಂಚಯ ಪಾತ್ರ (Oil Tankers) ಗಳ ನಿರ್ಮಾಣಕ್ಕಾಗಿ ಬಳಸಲು ಬ್ರಿಟನ್ನು ಒಪ್ಪಲಿರುವುದೆಂದು ನಂಬಲಾಗಿದೆ. ಅಗಲೆ ಪ್ರಾರಂಭಿಸಿದ ಹಡಗುಗಳ ನಿರ್ಮಾಣವನ್ನು ಮುಗಿಸಿದ ನಂತರವೆಂಬುದೊಂದೇ ಅಪಕ್ಕರುವ ಕರಾರು.

ಜಗತ್ತಿನಲ್ಲಿ ಯುದ್ಧ ಕಾಲದಲ್ಲಿ ಕಟ್ಟಲಾದ ಹಡಗುಗಳಲ್ಲಿ ಸುಮಾರು ಅರ್ಧದಷ್ಟನ್ನು ಬ್ರಿಟಿಶ ನೌಕಾ ಕೇಂದ್ರಗಳಲ್ಲೇ ಕಟ್ಟಲಾಗಿದೆ. ಕಟ್ಟಿಕೊಡಬೇಕೆಂದು ಬ್ರಿಟಶರಿಗೆ ಇತರರು ಬರೆದುಕೊಂಡ ಮತ್ತು ಬರೆದುಕೊಳ್ಳಬಹುವಾದ ಹಡಗುಗಳ ಬೆಲೆ ೬ ಕೋಟಿ ಪೌಂಡುಗಳಷ್ಟಾಗಬಹುದು.

ಇಂಗ್ಲಂಡು 'ಕಡಲ ರಾಣಿ' ಯೆನಿಸಿಕೊಂಡ ತನ್ನ ಬಿರುದನ್ನು ರಕ್ಷಿಸಿಕೊಳ್ಳಲು ಇಂದಾದರೂ ಶಕ್ತವಿದೆ. ಆದರಿಂದ, ಪುನರುದ್ಧಾರ ಯೋಜನೆಗಳಿಂದ ತನ್ನ ಆರ್ಥಿಕೋನ್ನತಿಯನ್ನು ಸಾಧಿಸಲು ಟೊಂಕ ಕಟ್ಟಿ ನಿಂತಿರುವಾಗ ಅದು ತನ್ನ ಈ ಸುಪ್ರಸಿದ್ಧ ಉದ್ದಿಮೆಯನ್ನು ಎಂದಾದರೂ ಬಿಟ್ಟುಕೊಟ್ಟೀತೆ ?

ಗೊಳಿಸ (Renewal) ಬೇಕಾಗಿರುತ್ತದೆ. ಮೇಲ್ಗಡೆ ವಿವರಿಸಿದ ಅರು ಅಸವಾರಿಷ್ಟಗಳನ್ನು ಮಾತ್ರ ಕ್ರಮ ಪ್ರಕಾರದ ಲೆಖ ಪತ್ರಗಳನ್ನಿಟ್ಟು ವಹಿವಾಟು ನಡಸ ಬೇಕಾಗುತ್ತದೆ.

೨ ವೈದ್ಯಕೀಯ ಲ್ಯಾಸನ್ಸ್ ದಾರನು ಮೇಲ್ಗಡೆ ವಿವರಿಸಿದ ೨ ಅಸವಾರಿಷ್ಟಗಳನ್ನು ಬಿಟ್ಟು ಉಳಿದ ಅಸವಾರಿಷ್ಟಗಳನ್ನು ತಯಾರಿಸಲು ಅರ್ಹನಾಗಿರುತ್ತಾನೆ ಮತ್ತು ಸದರಿ ೬ ಅಸವಾರಿಷ್ಟಗಳನ್ನು ಫಾರ್ಮಸಿ ಲ್ಯಾಸನ್ಸ್ ದಾರರಿಂದ ಪಡಕೊಳ್ಳಬಹುದು. ಈ ಪ್ರಕಾರ ಪಡಕೊಳ್ಳುವ ಅಸವಾರಿಷ್ಟಗಳ ಬಗ್ಗೆ ಕ್ರಮ ಪ್ರಕಾರವಾದ ಲೆಕ್ಕ ಪತ್ರಗಳನ್ನಿಟ್ಟು ನ್ಯಾಯವಾದ ಚೀಟಿ (Prescription) ಮೇಲೆ ಮಾರಬೇಕಾಗುತ್ತದೆ. ಉಳಿದ ಅಸವಾ... ಗಳನ್ನು ಮಾರಲು ಯಾವ ನಿರ್ಬಂ... ಇರುವದಿಲ್ಲ.

ಮೇಲ್ಗಡೆ ವಿವರಿಸಿದ ಕ್ರಮದಲ್ಲಿ ...ರಿಷ್ಟಗಳ ತಯಾರಿಕೆಗಾಗಲಿ ನ್ಯಾಯವಾದ ರೀತಿಯಲ್ಲಿ ಸದುಪಯೋಗ ಮಾಡುವರಿಗಾಗಲಿ ... ಗಳಿ ಉಪಯೋಗಿಸುವರಿಗಾಗಲಿ ನಿರ್ಬಂಧಗಳಿಲ್ಲ. ಈ ಯೋಗ್ಯ ...ಗಳನ್ನು ಮಾನ್ಯ ಸರಕಾರದವರು ಜಾರಿಗೆ ತಂದ ವಿಷಯದಲ್ಲಿ ಆಯುರ್ವೇದಾಭಿಮಾನಿಗಳೆಲ್ಲರೂ ಸಹಕರಿಸಬೇಕಾಗಿ ನಮ್ಮ ...ನಂತಿ. ಅಲ್ಲದೆ ವೈದ್ಯಕೀಯ ವೃತ್ತಿಯವರಿ ಅಗತ್ಯವಿರುವ ಲ್ಯಾಸನ್ಸ್‌ಗಳನ್ನು ಏನೊಂದೂ ತೊಂದರೆಯಿಲ್ಲದೆ ಸಿಗುವಂತೆ ನಮ್ಮಂಥ ... ಅಧಿಕಾರಿಗಳೂ ಕೂಡ ಸಹಕಾರವನ್ನು ನೀಡುವಂತೆ ನಮ್ಮ ವಿನಂತಿ.

ತಿದ್ದುಪಡಿ

೨೨-೧೨-೪೭ ರ ಕರ್ನಾಟಕ(ದ) ಸಂಚಿಕೆಯ ೧೩ ನೆಯ ಪುಟದ ಕೊನೆಯ ಕಾಲಂದ ಕೆಳಗಿನ ಶೃಂಗೇರಿ ಜಗದ್ಗುರು ಸಂಸ್ಥಾನದ ಬಗ್ಗೆ ಒಂದು ಸಮಾಚಾರವಿದೆ. ಅದರಲ್ಲಿ ೨೫೦ ರ... ಗಳ ವೆಚ್ಚದ ಯೋಜನೆ ಎಂಬುದಾಗಿ ತಪ್ಪಿದೆ. ಅದನ್ನು ೨೫ ಲಕ್ಷ ರೂಪಾಯಿ ವೆಚ್ಚದ ಯೋಜನೆ ಎಂಬುದಾಗಿ ತಿದ್ದಿಕೊಳ್ಳಬೇಕಾಗಿ ಬೇಡುತ್ತೇವೆ.

ಸಂಪಾದಕ

ಕೆ. ವೆಂ. ವಿ.

...ನೇ ಇತಿಹಾಸಕಾರನೂ ಭಾವೀ ... ಇದೀಗ ಕಳೆದ ೧೯೪೭ ನೇ ಇಸವಿ ... ಸ್ವಾತಂತ್ರ್ಯ ವರ್ಷವೆಂದು ಯಾವಾಗಲೂ ... ಮುನವರಲ್ಲಿ ಸಂದೇಹವಿಲ್ಲ. ಇನ್ನೂರು ... ಗಳ ಪಾರತಂತ್ರ್ಯದ ನೊಗವನ್ನು ತೆಗೆದೂ ... ಸ್ವಾತಂತ್ರ್ಯದ ಗೌರವಪೂರ್ಣ ಯುಗದಲ್ಲಿ ... ಪ್ರವೇಶಿಸಿದ ವರ್ಷವದು. ಆದರೆ ಅದರ ಮಹತಿ ಇಷ್ಟರಲ್ಲಿ ಮುಗಿಯಲಿಲ್ಲ. ಪರಾಧೀನತೆಯ ಪಾಶವನ್ನು ಹರಿದು ಸ್ವತಂತ್ರವಾದ ರಾಜ್ಯಗಳು ಭೂಮಿಯಲ್ಲಿ ಹಲವಾರು ಇವೆ. ಆದರೆ ಹಗೆಯು ನೆತ್ತರು ಸುರಿಸದೆ ಸತ್ಯ ಅಹಿಂಸೆಗಳ ಸಾತ್ವಿಕ ಮಾರ್ಗದಿಂದ ಜೇತೃವಾಗಿ ಅತ್ಯ ತೇಜಸ್ಸಿನಿಂದ ... ವಲೀ ನ್ಯಾಯ್ಯವನ್ನು ದೊರಕಿಸಿಕೊಂಡ ಹೆಮ್ಮೆ ಭಾರತದ್ದು—೧೯೪೭ ರದ್ದು. "ಧಿಗ್ಬಲಂ ಕ್ಷತ್ರಿಯ ಬಲಂ" ಎಂದ ವಿಶ್ವಾಮಿತ್ರನ ಮಾತಿಗೆ ಜಗತ್ತಿನಲ್ಲೇ ಇಂದು ಉದಾಹರಣರೂಪವಾಗಿರುವಾಗ ನವೋದಿತ ಸ್ವಾತಂತ್ರ್ಯದ ತನ್ನ ಸಾತ್ವಿಕ ಪ್ರಕಾಶವನ್ನು ಅಂತರ್ರಾಷ್ಟ್ರೀಯ ರಂಗದಲ್ಲಿಯೂ ಬೀರಿ, ಸಾತ್ವಿಕತೆಯೇ, ನ್ಯಾಯಬುದ್ಧಿಯೇ ಜಗತ್ತಿನ ರೋಗಗಳಿಗೆಲ್ಲ ಸಿದ್ಧೌಷಧವೆಂದು ನಮ್ಮ ನಾಡು ಸಾರಿದೆ. ಯುಕ್ತ ರಾಷ್ಟ್ರ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಅನುಸರಿಸಿದ ನೀತಿಯಾದರೂ ಇದಕ್ಕೆ ಅನುಗುಣವಾಗಿಯೇ ಇದೆ. ಬ್ರಿಟಿಶ ಸಾಮ್ರಾಜ್ಯದ ತಳಪಾಯಕ್ಕೆ ಗೆದ್ದಲು ಹತ್ತಿ ಅದು ಶಿಥಿಲವಾದುದರಿಂದ ಅದು ಕೈ ತಪ್ಪಿದಕ್ಕೆ ... ಸ್ವಾರ್ಥವೆಂದು ... ಔದಾರ್ಯ ... ಇದು ಅಹಿಂಸೆಯ ವಿಜಯವೂ ... ಬ್ರಿಟಿಶರ ನೈತಿಕತೆಯ ದ್ಯೋತಕವೂ ಅಲ್ಲ ... ತರ್ಕವಾದ ಕೈತಿಗೆ ... ಬಹುದು. ಆದರೆ ಸಾಮ್ರಾಜ್ಯಕ್ಕಿಂತಲೂ ದುರ್ಬಲ, ಶಿಥಿಲ ಸಾಮ್ರಾಜ್ಯಗಳು ಹಿಂದೀ ಚಳವಳಿಗಿಂತ ಎಷ್ಟೋ ... ಶಸ್ತ್ರಶಕ್ತಿಯಲ್ಲಿ ಬಲಿಷ್ಠವಾಗಿರುವ ... ಚಳವಳಿಗಳನ್ನು ಇನ್ನೂ ಹತ್ತಿಕ್ಕು ... ಮೇಲಿನ ... ವಲ್ಲಿ ಅಷ್ಟೇನೂ ... ವೆಂದು ಸಿದ್ಧವಾಗುವದು. ಈ ಸಂದ ... ತಿಣಾಮಿ ಚರ್ಚಿಲ್ ಪ್ರಭೃತಿಗಳು ... ದ ಹಲವು ವಿಘ್ನಗಳನ್ನು ದಾಟಿ ಭಾರ ... ನ್ಯಾಯ್ಯವಾದ ಬೇಡಿಕೆಯನ್ನು ಮನ್ನಿಸಿದ ... ಕ್ಕೆ ಬೇಕಾದ ಕ್ರಮಗಳನ್ನು ತಕ್ಷಣ ... ಬ್ರಿಟಿಶ ಕೂಲಿಕಾರ ಸರಕಾರವೂ ... ಬಲವಿತ್ತ ಬ್ರಿಟಿಶ ಜನತೆಯೂ ಪ್ರಶಂ ... ಸದು ಹೇಳದಿದ್ದರೆ ಕೃತಘ್ನತೆಯಾ ...

... ಇದು ಒಂದು ಮುಖದ—ಪ್ರಕಾಶ ಮುಖದ—ವರ್ಣನೆಯಾಯಿತು. ಭಾರ ... ೪೦ ಕೋಟಿ ಜನತೆಗೆ ೧೯೪೭ ನೆ ವರ್ಷ ಕಾಳೋಕ ಪರ್ವತದಂತೆ ಸಪ್ರಕಾಶವಾಗಿ ... ಅಪ್ರಕಾಶವೂ ಆಗಿತ್ತು. ಸಾವಿರಾರ್ ... ಸಂಗತಿಯನ್ನು ಕಡೆಗಣಿಸಿ ಧರ್ಮಾಂ ... ಬಲೆಯಲ್ಲಿ ಬಿದ್ದು ಹಿಂದೀ ಮುಸ್ಲಿಮರು ... ಹಿಂದುಸ್ತಾನದ ಹರ್ಲು ಹರಿದು ಬೇರಾ ... ಇತ್ತು. ಅದರ ಫಲವಾಗಿ ಪಂಚ ನದಿಗಳು ... ಸಂಥ ನೆತ್ತರ ಕಾಲುವೆ ಹರಿದುದು ... ಇತಿಹಾಸದಲ್ಲೆ ದುಷ್ಟ-ಕರುಣ ಘಟನೆ ... ಲಕ್ಷೋಪಲಕ್ಷ ಜನರು ಗುಳೆ ... ಹೋಗುವ ದೃಶ್ಯವೂ ಆಧುನಿಕ ಇತಿಹಾಸದಲ್ಲಿ ಅ...ಕವಾಗಿತ್ತು—ಕಲಂಕ ಪ್ರಾಯವಾಗಿತ್ತು. ಲಕ್ಷರ ಕುಟುಂಬಗಳು ಇದರ ಕಹಿ ನೆನಪನ್ನು ... ಸೇರಿಸಿಕೊಂಡು ತಲೆ ಮಾರು ಗಳ ತನಕ ... ಬುದ್ಧಿಯನ್ನು ಕಲಿಸಿಕೊಳ್ಳಬಹುದು. ಸಾಲದ್ದು ಹಿಂದೀ ನರೇಂದ್ರರಿಗೆ ಬ್ರಿಟಿಶರು ಹೋಗುವಾಗ "ಸ್ವಾತಂತ್ರ್ಯ ಸಾರ್ವಭೌಮಾಧಿಕಾರ" ಗಳನ್ನು ಕೊಟ್ಟು ಹೋಗಿ ನಮ್ಮ ಕಾಲ ಕೆಳಗೆ ... "ಅವಧಿ ಬಾಂಬನ್ನು" ಇಟ್ಟು ಹೋದರು. ... ಪ್ರಜಾಭಿಪ್ರಾಯದ ಬಲದಿಂದಲೂ ನಾಯಕ ಪ್ರಸಂಗಾವಧಾನದಿಂದಲೂ ಈ ಸಮಸ್ಯೆಯೊದು ಹೆಚ್ಚು ಕಡಿಮೆ ಸಮಾಧಾನಕರವಾಗಿ ಬಿಡಿಸಲ್ಪಟ್ಟಿದೆ. ಉಳಿದ ಅಂಶವೂ ಬೇಗನೆ ಬಿಡಿಸಲ್ಪಡಬಹುದು. ಪ್ರತಿಗಾಮಿ ರಾಜರ ಹಿಂದೆ ಪಕ್ಷಗಳಂತಿದ್ದ ಅನೇಕ ದಿವಾನರು ಪದಚ್ಯುತರಾದುದರಿಂದ ೧೯೪೭ ಪ್ರಜೆ ... ಪಡೆಯುತ್ತಿದೆ ... ಯೆಂದು ಧಾರಾಳವಾಗಿ ಹೇಳಬಹುದು. "ಸಬ ನಾವನಲ ... ಎಂಬ ಐಕ್ಯಪಾಠ ಬೇಡವಾದವರು ... ಅನಾದಿಯಿಂದ ಒಂದಾಗಿದ್ದುದನ್ನು ಒಡೆದುದೊಂದೇ ಎಲ್ಲಕ್ಕೂ ದೊಡ್ಡ ವಿಷಾದದ ಸಂಗತಿ.

ಕಾಸ್ಕಿನ ಕಾರ್ಯಕಲಾಪ

ಕಳೆದ ... ಕೊನೆಯ ವಾರ ದಕ್ಷಿಣ ಕನ್ನಡದ—ಕರ್ನಾಟಕದ—ಅತಿ ದಕ್ಷಿಣ ಸೀಮೆಯಾದ ಕಾಸರಗೋಡಿನಲ್ಲಿ ಸೇರಿದ ಸಾಹಿತ್ಯ ಸಮ್ಮೇಲನ(?)ದಿಂದಿಗಾದ ಏಕೀಕರಣ ಪರಿಷತ್ತು ... ದಪ್ಪುಗಳ ವಿವರಗಳನ್ನು ಈ ... ಕಡೆಯಲ್ಲಿ ಕೊಡಲಾಗಿದೆ. ಸಮ್ಮೇಲ

ಸಂಪಾದಕೀಯ ಟೀಕೆ ಟಿಪ್ಪಣಿಗಳು

ನಾಧ್ಯಕ್ಷರಾದ ಶ್ರೀ ತಿರುಮಲೆ ತಾತಾಚಾರ್ಯರು ನುರಿತ ಸಾಹಿತಿ, ರಾಜಕಾರಣಜ್ಞ, ಕರ್ನಾಟಕ ಪ್ರೇಮಿಗಳೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಅವರ ಸುದೀರ್ಘ ಅಧ್ಯಕ್ಷ ಭಾಷಣದಲ್ಲಿ ಭಾವೀ ಕರ್ನಾಟಕದ ಉಜ್ವಲ ಕಲ್ಪನೆಗಳು ಮೂರ್ತಿಮತ್ತಾಗಿ ಮೂಡಿದುದೇನೂ ಆಶ್ಚರ್ಯವಲ್ಲ. "ಆಗಬೇಕಾದ" ಕರ್ನಾಟಕದ ಅಶೇಷ ಚಿತ್ರವೇ ಅದೆಂದರೂ ತಪ್ಪಾಗದು. ಸಾಹಿತ್ಯರಂಗದಲ್ಲಿ ಹೊಸ-ಹಳೆಯ ಪಂಥಗಳ ಪುರಸ್ಕರ್ತರು ಸಮನ್ವಯದಿಂದ ನಡೆಯಬೇಕೆಂಬ ಅವರ ಸೂಚನೆ ಸಮಯೋಚಿತವಾಗಿದೆ. ಕರ್ನಾಟಕದಲ್ಲಿ ಕನ್ನಡವೇ ಬೋಧಭಾಷೆ—ರಾಜಭಾಷೆಯಾಗಬೇಕೆಂಬ ಅವರ ಒತ್ತಾಯವಾದರೂ ಎಷ್ಟು ಸಲ ಅಂದರೂ ಇನ್ನೂ ಅನ್ನಬೇಕಾದ ಮಾತೇ ಸರಿ. ವಿಚ್ಛಿನ್ನ ಕರ್ನಾಟಕದ ರಾಜಕೀಯ ಸಮಸ್ಯೆಗೆ ಅವರು ಹೇಳಿದ "ಸಬ್-ಫೇಡರೇಶನ್" ಅಥವಾ ಉಪ-ಸಂಯುಕ್ತ ರಾಜ್ಯದ ಪರಿಹಾರೋಪಾಯಕ್ಕೆ ಮಾತ್ರ ನಾವು ಅಷ್ಟ ಹೇಳದಿರಲಾರೆವು. ಹೆಚ್ಚು ಕಡಿಮೆ ಕರ್ನಾಟಕದ ಚಿಕ್ಕಪುಟ್ಟ ಸಂಸ್ಥಾನಿಕರೆಲ್ಲ ವಿಲೀನೀಕರಣದ ಪರಮ ಪಥ್ಯಕ್ಕೆ ಒಪ್ಪಿರುವಾಗ ಈ ಉಪಾಯ ಭೇದಭಾವವನ್ನು ಅಳಿಸುವ ಬದಲು ಶಾಶ್ವತವಾಗಿ ಮಾಡಬಹುದು. ಅದರಿಂದ ಮೈಸೂರನ್ನೂ ಕಗೊಂಡ ಅಖಿಲ ಕರ್ನಾಟಕವನ್ನು—ಉಪಾಯವಿಲ್ಲದಿದ್ದರೆ ಪ್ರಜಾತಂತ್ರಾತ್ಮಕ ರಾಜಸತ್ತೆಯ ಕೆಳಗಾದರೂ— ಒಂದೇ ಆಳಿಕೆಯಲ್ಲಿ ತರುವದೇ ಉಚಿತವೆಂದು ತೋರುತ್ತದೆ. ಇರಲಿ. ಶ್ರೀ ತಾತಾಚಾರ್ಯರಿಗೆ ತಮ್ಮ ಚಿನ್ನದ ಕನಸುಗಳನ್ನು ನನಸುಗಳಾಗಿ ಮಾಡಿತೋರಿಸಲು ಅವಶ್ಯಕ ಸಂಧಿಯನ್ನು ಪರಿಷತ್ಸದಸ್ಯರು ಒದಗಿಸಿಕೊಟ್ಟಿದ್ದಾರೆ. ಈ ವರೆಗೆ ಉತ್ಸವ ಮೂರ್ತಿಯಾಗಿ ಒಂದು ದಿನ ಮೆರೆದು ೩೬೪ ದಿನ ಅದನ್ನು ಮರೆತು ಇರುತ್ತಿದ್ದ ಸಮ್ಮೇಲನಾಧ್ಯಕ್ಷನಿಗೆ ಆ ವರ್ಷಕ್ಕೆ ಪೂರ್ಣಾಧಿಕಾರ ಕೊಡುವ ಮತ್ತು "ಗರ್ಭಗುಡಿಯ ಮೂರ್ತಿ"ಯಾಗಿದ್ದ ನಿಜವಾದ ಅಧಿಕಾರಿ ಉಪಾಧ್ಯಕ್ಷನ ಪದವಿಯನ್ನು ರದ್ದುಗೊಳಿಸುವ ಗೊತ್ತುವಳಿ ಸ್ವೀಕೃತವಾಗಿದೆ. ಈ ಹೊಸ ವ್ಯವಸ್ಥೆಯ ಔಚಿತ್ಯವನ್ನು ಶಂಕಿಸುವವರಿರಬಹುದು. ದೈನಂದಿನ ಆಡಳಿತೆ ಇದರಿಂದ ಕಠಿಣ ಹೋಗಬಹುದೆಂದು ಅನುಮಾನಿಸಲು ಕಾರಣವಿಲ್ಲದಿಲ್ಲ. ಆದರೆ ಸಮ್ಮೇಲನಾಧ್ಯಕ್ಷ ಕಟ್ಟಿದ ಕನಸುಗಳನ್ನು ನನಸಾಗಿ ಮಾಡುವ ಅವಕಾಶವನ್ನು ಅವನಿಗೊದಗಿಸುವ ದೃಷ್ಟಿಯಿಂದ ಇದು ಸ್ಪೃಹಣೀಯವಾಗಿತ್ತು. ಪರಿಷತ್ತು ಒಬ್ಬಿಬ್ಬರ ಕೈಗೊಂಬೆಯಾಗಿಯೆ ಉಳಿವ ಸಂಭವವೂ ಇದರಿಂದ ಕಡಿಮೆಯಾಗುತ್ತದೆ. ಶ್ರೀ ಶರ್ಮರಿಗೆ ಅಂಥ ಸಂಧಿ ಮೊಟ್ಟಮೊದಲು ದೊರಕಿದೆ. ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಬಳಕೆಗೆ ತಂದು ಅವರು ಈ ಬದಲಾವಣೆ ಬೇಕಾಗಿತ್ತೆಂಬುದನ್ನು ಸಿದ್ಧಗೊಳಿಸಲಿ. ಶುಭಾಸ್ತೇ ಪಂಥಾನಃ!

ಯುದ್ಧ ಪಥದಲ್ಲಿ--ಏಕೀಕರಣ ?

ಕಾಸರಗೋಡಿನಲ್ಲಿ ಸೇರಿದ ಏಕೀಕರಣ ಕ್ರಿಯಾ ಸಮಿತಿಯಲ್ಲಿ ಪ್ರಾಂತೀಕರಣದ ಹೋರಾಟಕ್ಕೆ ಪೂರ್ವಭಾವಿಯಾಗಿ ಕೇಂದ್ರ ಸರಕಾರದ ಧೋರಣದ ನಿಷೇಧಾರ್ಥ ಅ. ಭಾ. ಕಾಂಗ್ರೆಸ್ ಸಮಿತಿಯಲ್ಲಿಯೂ ಕೇಂದ್ರ, ಮದ್ರಾಸ್ ಮತ್ತು ಮುಂಬಯಿ ಪ್ರಾಂತಗಳ ಶಾಸನ ಸಭೆಗಳಲ್ಲಿಯೂ ಇರುವ ಕರ್ನಾಟಕದ ಸದಸ್ಯರು ರಾಜೀನಾಮೆ ಕೊಡಬೇಕೆಂಬಾಶಯದ ಗೊತ್ತುವಳಿ ಸ್ವೀಕೃತವಾಗಿರುವದು. ಕರ್ನಾಟಕ ಪ್ರಾಂತದ ನಿರ್ಮಾಣದಲ್ಲಿ ಆಗುತ್ತಿರುವ ವಿಲಂಬ ಮತ್ತು ಕೇಂದ್ರ ಸರಕಾರದ ವಿಚಿತ್ರ ನೀತಿ ಕನ್ನಡಿಗರನ್ನೆಷ್ಟು ನೋಯಿಸಿವೆಯೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಅಲ್ಲಿಯೇ ನೆರೆದ ೧೧ ನೆ ಏಕೀಕರಣ ಪರಿಷತ್ತಾದರೂ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತ ಕೊಡದಂಥ ರಾಜ್ಯಘಟನೆಯನ್ನು ಕನ್ನಡಿಗರು ಒಪ್ಪಲಾರರೆಂಬಾಶಯದ ಗೊತ್ತುವಳಿ ಮಾಡಿದೆ. ೨೭ ವರ್ಷಗಳಿಂದ ಕನ್ನಡಿಗರು ಕಟ್ಟಿಕೊಂಡಿದ್ದ ನ್ಯಾಯ್ಯವಾದ ಆಶೆಯನ್ನು ಮುಖ್ಯ ಮಂತ್ರಿ ಜವಾಹರಲಾಲರು ಒಮ್ಮಿಂದೊಮ್ಮೆ ನೆಲಕ್ಕೆ ಅಪ್ಪಳಿಸಿದ್ದರಿಂದ ಕನ್ನಡಿಗರಲ್ಲಾದ ಆಕ್ರೋಶದ ತೀವ್ರತೆ ಇನ್ನೂ ಉಗ್ರರೂಪದಲ್ಲಿ ಸಭೆಯಲ್ಲಿ ವ್ಯಕ್ತವಾಯಿತೆಂದೂ ಕೇಳುತ್ತೇವೆ. ಪ್ರತ್ಯೇಕ ಪ್ರಾಂತ ರಚನೆ ಕನ್ನಡಿಗರಿಗೆ ಜೀವಾಳ ಪ್ರಶ್ನೆಯಾಗಿದ್ದು ಅದರ ಬಗ್ಗೆ ತಮ್ಮ ಭಾವನೆಯನ್ನು ಸ್ಪಷ್ಟಗೊಳಿಸಲು ತಮ್ಮ ಶಾಸನ ಸಭಾ ಸದಸ್ಯರನ್ನು ಹಿಂತೆಗೆದುಕೊಳ್ಳುವ ಹಕ್ಕು ಅವರಿಗಿದ್ದೇ ಇದೆ. ಆದರೆ ಈ ಬಗ್ಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸು ಕೊನೆಯ ನಿರ್ಣಯ ಮಾಡಬೇಕಾಗಿದ್ದು ಅದು ಅನವಶ್ಯಕವಾಗಿ ರಾಗದ್ವೇಷಗಳಿಗೊಳಗಾಗದೆ ಶಾಂತಚಿತ್ತದಿಂದ ಕೊನೆಯ ಉಪಾಯವೆಂದು ಮಾತ್ರ ಈ ಕ್ರಮವನ್ನು ಕೈಕೊಳ್ಳುವದು ವಿಹಿತ. ಈ ನಡುವೆ ಅನೇಕ ಹೊಸಗೇಡಿಗಳೂ ಅವಿವೇಕಿಗಳೂ "ಹೋರಾಟ" "ಕರನಿರಾಕರಣೆ" ಮೊದಲಾದ ದೊಡ್ಡ ದೊಡ್ಡ ಮಾತುಗಳಿಂದ ಜನರನ್ನು ಅಡ್ಡದಾರಿಗೆಳೆಯುತ್ತಿದ್ದಾರೆ. ಅವರಲ್ಲಿಯೂ ಆಶ್ಚರ್ಯದ ಮಾತೆಂದರೆ ಇಂಥವರಲ್ಲಿ ಕೆಲ "ಹೋರಾಟಗಾರ"ರು ಬ್ರಿಟಿಶರೊಡನೆ ರಾಷ್ಟ್ರ ಹೋರಾಡುತ್ತಿದ್ದಾಗ ಸುಖವಾಗಿ ಮನೆಯೊಳಗೆ ವಿಶ್ರಮಿಸಿದ್ದವರಿರುವರು ಅವರಿಗೆ ಒಮ್ಮಿಂದೊಮ್ಮೆ ಈಗ ಹೋರಾಟದ ಆವೇಶ ಬಂದುಬಿಟ್ಟದ್ದರ ಅರ್ಥವನ್ನು ಜನರು ಗ್ರಹಿಸಿಕೊಳ್ಳಬೇಕು. ಈಗ ಅನವಶ್ಯಕವಾಗಿ ಅತಿರೇಕದ ಮಾರ್ಗವನ್ನು ಹಿಡಿಯುವದು ಅಪಾಯಕರವಾಗಿದೆಯೆಂದು ಎಚ್ಚರಿಸದಿರಲಾರೆವು. ಸ್ವತಂತ್ರ ಪ್ರಾಂತಾಂಕಾಂಕ್ಷಿಗಳಾದ ಇತರ ನೆರೆನಾಡಿನವರೊಡನೆ ನಾವು ಸಮೀಪದ ಸಖ್ಯಸಂಬಂಧವಿಟ್ಟುಕೊಳ್ಳದಿದ್ದರೆ ಭಾಷಾನ್ವಯ ಪ್ರಾಂತಕ್ಕೆ ವಿರೋಧಿಗಳಾದವರಿಗೆ-ಆಂಧ್ರರನ್ನೂ ಉಳಿದವರನ್ನೂ ಬೇರ್ಪಡಿಸಿದಂತೆ— ಇನ್ನೂ ಒಡಕು ಹುಟ್ಟಿಸುವ ಸಂಧಿ ಸಿಗಬಹುದು. ಕನ್ನಡಿಗರು ಇನ್ನೂ ಸಂಘಟಿತರಾಗಬೇಕಾಗಿದೆ. ತುಳು, ಕೊಂಕಣಿ, ಕೊಡವ ಭಾಷೆಗಳನ್ನಾಡುವ ಪ್ರದೇಶಗಳ ಜನರನ್ನು ಪರಿಣಾಮಕರವಾಗಿ ನಮ್ಮ ಕಡೆಗೆ ಎಳೆದುಕೊಳ್ಳುವ ಕೆಲಸ ಸಾಕಷ್ಟು ಆಗಿಲ್ಲ. ನಮ್ಮಷ್ಟೇ ಅಸಂತೋಷಗೊಳ್ಳಲು ಕಾರಣವುಳ್ಳ ಮರಾಟಿಗರು ಅನುಸರಿಸಿದ ಎಚ್ಚರಿಕೆಯ ನೀತಿಯನ್ನು ನೋಡಿ ನಾವೂ ಕಲಿಯಬೇಕು. ಹೊರತು "ಹೋರಾಟ ಹೋರಾಟ" ವೆಂದರೆ ಏನು ಬಂತು? ಈಗಿನ ಸ್ಥಿತಿಯಲ್ಲಿ ಉಗ್ರ ಕಾರ್ಯಗಳು ಯಾದವೀಯುದ್ಧದಲ್ಲಿಯೂ ಯಾದವಿ ಸರ್ವನಾಶದಲ್ಲೂ ಸಮಾಪ್ತವಾಗದೆ?

"ಲಖನೋ"ದ ಕೈಸನ್ನೆ

ಕಳೆದ ವಾರ ಮೌಲಾನಾ ಅಬುಲ ಕಲಮ ಆಝಾದರ ಅಧ್ಯಕ್ಷತೆಯಲ್ಲಿ ಲಖನೋದಲ್ಲಿ ನಡೆದ ಹಿಂದೀ ಒಕ್ಕೂಟ ಮುಸಲ್ಮಾನರ ಸಭೆ ಅನೇಕ ವಿಧದಿಂದ ಅಭೂತಪೂರ್ವವಾಗಿತ್ತು. ೫೦—೬೦ ಸಾವಿರ ಮುಸ್ಲಿಮರು ಸೇರಿದ ಈ ಸಭೆಯಲ್ಲಿ ಆದ ಗೊತ್ತುವಳಿಯೂ ಅಧ್ಯಕ್ಷ ಆಝಾದರು ಅಪ್ಪಣೆ ಕೊಡಿಸಿದಂತೆ ಚಿರಸ್ಮರಣೀಯವಾಗಿ ಉಳಿಯದಿರದು. ಲಖನೋ ಪರಿಷತ್ತಿನ ಕೈಸನ್ನೆಯನ್ನು—ತಾವು ಅಭ್ಯುದಯ ಹೊಂದಬೇಕೆಂಬ ನಿಜವಾದ ಅಪೇಕ್ಷೆಯಿದ್ದರೆ-ಹಿಂದೀ ಮುಸ್ಲಿಮರು ಅನುಸರಿಸುವದು ಅವಶ್ಯವಾಗಿದೆ. ಜಾತೀಯ ರಾಜಕಾರಣವೇ ಹಿಂದುಸ್ತಾನಕ್ಕೊದಗಿದ ರಾಜಕೀಯ ಸಂಕಟಗಳ ಮೂಲವಾಗಿರುವದರಿಂದ ಎಲ್ಲ ಜಾತೀಯ ಸಂಸ್ಥೆಗಳನ್ನು ಹುಗಿದುಬಿಡಬೇಕೆಂದೂ ಅವರು ಹೇಳಿದರು. ಇಲ್ಲದೆಹೋದರೆ ವಿನಾಶ ಕಟ್ಟಿಟ್ಟದ್ದು. ಮುಸ್ಲಿಂ ಲೀಗನ್ನು ಅಸ್ತಿತ್ವದಲ್ಲಿ ಉಳಿಯದಂತೆ ಮಾಡಿ ಮುಸ್ಲಿಮರು ಜಾತ್ಯತೀತ ರಾಜಕೀಯ ಪಕ್ಷಗಳಿಗೆ—ಅದರಲ್ಲಿಯೂ ಕಾಂಗ್ರೆಸ್ಸಿಗೆ ಸೇರಬೇಕೆಂಬ ಅವರ ಸೂಚನೆಯನ್ನು ಮಾನ್ಯ ಮಾಡಿ ಲಖ್ನೋ ಪರಿಷತ್ತು ಮುಸ್ಲಿಂಲೀಗನ್ನು (ಒಕ್ಕೂಟ ಹಿಂದುಸ್ತಾನದಲ್ಲಿ) ವಿಸರ್ಜಿಸಿ ಮುಸ್ಲಿಮರು ಕಾಂಗ್ರೆಸ್ಸನ್ನು ಸೇರಲೆಂದು ಗೊತ್ತುವಳಿ ಮಾಡಿತು. ಪರಿಷತ್ತಿನ ಸ್ವಾಗತಾಧ್ಯಕ್ಷ ಹಫೀಜ ಮಹಮ್ಮದ ಇಬ್ರಾಹಿಮರು ಮಹಾತ್ಮಾ ಗಾಂಧಿಯವರಲ್ಲಿಯೂ ಪಂಡಿತ ನೆಹರೂ ಅವರಲ್ಲಿಯೂ ವ್ಯಕ್ತಗೊಳಿಸಿದ ಪೂರ್ಣ ವಿಶ್ವಾಸ ಹಿಂದೀ ಮುಸ್ಲಿಮರ ಮನಸ್ಸಿನಿಂದ ಇನ್ನಾದರೂ ಎಲ್ಲ ಸಂಶಯಗಳನ್ನು ಹೊಡೆದೋಡಿಸಬೇಕು. ಪರಿಷತ್ತು ಕೇವಲ ಗೊತ್ತುವಳಿಯಿಂದ ಸಂತುಷ್ಟವಾಗದೆ ಅದನ್ನು ಆಚರಣೆಗೆ ತಂದು ಹಿಂದೂ ಮುಸ್ಲಿಮರಲ್ಲಿ ಸೌಹಾರ್ದವನ್ನುಂಟುಮಾಡುವಗೋಸ್ಕರ ಒಂದು ಜಾತ್ಯತೀತ ಸಮಿತಿಯನ್ನು ನೇಮಿಸುವ ಅಧಿಕಾರವನ್ನು ಮೌ. ಆಝಾದರಿಗೆ ಒಪ್ಪಿಸಿರುವದು ಸ್ವಾಗತಾರ್ಹವಾಗಿದೆ. ಹಿಂದುಗಳೂ ಇತರ ಜಾತಿಗಳೂ ಆಝಾದರು ಕೈಕೊಂಡ ಈ ಪವಿತ್ರ ಕಾರ್ಯದಲ್ಲಿ ನೆರವಾಗಿ ಜಾತೀಯ ಭೂತವನ್ನೋಡಿಸಲು ಬದ್ಧಕಂಕಣರಾಗುವದು ಅವಶ್ಯವಾಗಿದೆ. ಆದರೆ ಈ ಒಳ್ಳೆ ಸತ್ಕಾರ್ಯ ನಿರ್ವಿಘ್ನವಾಗಿ ನಡೆಯುವದು ಸಂಶಯಾಸ್ಪದವಾಗಿದೆ. ಯುಕ್ತ ಪ್ರಾಂತ ಮುಸ್ಲಿಂಲೀಗಿನವರು 'ಪರಿಷತ್ತು ಹಿಂದೀ ಮುಸ್ಲಿಮರ ಸದ್ಯದ ದುಃಖಗಳನ್ನು ಲಕ್ಷಿಸಲು ಸಿದ್ಧವಿಲ್ಲ' ಎಂಬ ಕ್ಷುಲ್ಲಕ ಕಾರಣವನ್ನು ಕೊಟ್ಟು ಪರಿಷತ್ತನ್ನು ಬಹಿಷ್ಕರಿಸಿದರು. ಕರಾಚಿ ಗೊತ್ತುವಳಿಯಂತೆ ಇಬ್ಬಾಗವಾದ ನಿಮಂತ್ರಕರಾದ ಲೀಗಿನ ಹಿಂದೀ ವಿಭಾಗದ ವ ... ಯಿಲರು ಮೊನ್ನೆ ಮೊನ್ನೆ ಹೊರಡಿಸಿದ ಹೇಳಿಕೆಯನ್ನು ನೋಡಿದರೆ — ಅವರು ಲೀಗನ್ನು ವಿಸರ್ಜಿಸಗೊಡುವವರಲ್ಲವಂತೆ — ಮುಸ್ಲಿಂ ಮುಂದಾಳುಗಳೆಲ್ಲರಿಗೆ ಜಾತೀಯತೆಯ ವಿಷಪ್ರಸಾರ ಇನ್ನೂ ಸಾಕಾಗಿಲ್ಲವೆಂದೂ ಹಿಂದೀ ಮುಸ್ಲಿಮರನ್ನು ಪೂರ್ಣ ಅಧಃಪಾತಕ್ಕೊಯ್ಯದಲ್ಲದೆ ಅವರಿಗೆ ಸಂತುಷ್ಟಿಯಿಲ್ಲವೆಂದೂ ಕಾಣಿಸುತ್ತದೆ. ಜಿನ್ನಾ ಸಾಹೇಬರು ಇಂಥ ಕೈಗೊಂಬೆಗಳ ಮೂಲಕ ಹಿಂದೀ ರಾಷ್ಟ್ರದ ಎದೆಗೆ ಇನ್ನೂ ಗುಂಡಿನ ಗುರಿ ಹಿಡಿಯಬೇಕೆಂದಿರುವಂತೆ ತೋರುತ್ತದೆ. ಏನಾದರೂ ಮುಸ್ಲಿಮರು ಈಗ ನಿರ್ಧರಿಸಬೇಕಾದ ಗಳಿಗೆ ಬಂದಿದೆ—ಹಿಂದೀ ರಾಷ್ಟ್ರದ ಪ್ರಜೆಗಳಾಗಿ ಎಲ್ಲರಂತೆ ಬೆರೆತು ಬಾಳಬೇಕೋ ಪ್ರತ್ಯೇಕ ಬಿಡಾರ ಬೇರೆಂದು ಎಲ್ಲರ ಬಹಿಷ್ಕಾರಕ್ಕೆ ಸಂಶಯಕ್ಕೆ ಗುರಿಯಾಗಬೇಕೋ ಎಂದು ಅವರು ಈಗ ನಿರ್ಣಯಿಸಬೇಕು, ತಡಮಾಡಿದರೆ ಅಥವಾ ಇನ್ನೂ ಪಾಕಿಸ್ತಾನದ ಮುಖ ನೋಡಿದರೆ ಮುಂದಿನ ಪೀಳಿಗೆಗಳು ಅವರನ್ನು ಶಪಿಸದಿರವು.

ಭದ್ರತಾ ಮಂಡಳಕ್ಕೆ ಕಾಶ್ಮೀರ ಪ್ರಶ್ನೆ

ಅತಿ ಲಾಲನೆಯಿಂದ ಬೆಳೆದ ಮಕ್ಕಳಂತೆ ಹಟಮಾರಿತನದಿಂದ ಸೊಕ್ಕಿಕೊಂಡ ಪಾಕಿಸ್ತಾನದೊಡನೆ ಯಾವುದೊಂದು ಪ್ರಶ್ನೆಯನ್ನೂ ಪರಸ್ಪರ ಮಾತುಕತೆಯಿಂದ ಬಗೆಹರಿಸುವದು ಸಾಧ್ಯವಿಲ್ಲವೆಂದು ಈಗೀಗ ನಿಚ್ಚಳವಾಗುತ್ತಿದೆ. ಕಾಶ್ಮೀರ ಪ್ರಶ್ನೆಯನ್ನು ಸಂಧಾನದಿಂದ ಬಿಡಿಸಲು ಮಾಡಿದ ಪ್ರಯತ್ನವೆಲ್ಲ ವಿಫಲವಾಗಿ ಹಿಂದುಸ್ತಾನ ಸರಕಾರ ಈಗ ಈ ವಿಷಯವನ್ನು ಯುಕ್ತರಾಷ್ಟ್ರ ಭದ್ರತಾ ಮಂಡಲದ ಮುಂದೆ ಒಯ್ಯಲು ನಿರ್ಧರಿಸಿದೆಯೆಂದು ತಿಳಿಯುತ್ತದೆ. ಲಿಯಾಕತ ಅಲ್ಲಿಖಾನರು ಕಾಶ್ಮೀರದ ವಿಷಯದಲ್ಲಿ ಹಾಕಿದ ಅಸಾಧ್ಯ ಕರಾರುಗಳು ಹಿಂದುಸ್ತಾನ ಸರಕಾರದ ಈ ನಿರ್ಣಯಕ್ಕೆ ಕಾರಣವಾದವು. ದಾಳಿಗಾರರಿಗೆ ಪಾಕಿಸ್ತಾನ ಸರಕಾರ ಸಹಾಯ ಮಾಡಿಲ್ಲವೆಂದು ಲಿಯಾಕತರು ಹೇಳುತ್ತಾರೆ. ಆದರೆ ಪಾಕಿಸ್ತಾನದೊಳಗಿಂದ ಬರುವ ದಾಳಿಗಾರರ ಸಮಾಚಾರ ತೆಗೆದುಕೊಳ್ಳಲು ಹಿಂದೀ ಸೈನಿಕರಿಗೆ ತಮ್ಮ ಗಡಿಯಲ್ಲಿ ಪ್ರವೇಶ ಕೊಡಲಿಕ್ಕೂ ಅವರು ಸಿದ್ಧರಿಲ್ಲ. ಆದರೆ ಶೇಖ ಅಬ್ದುಲ್ಲಾರ ರಾಜ್ಯ ಕೂಡಲೆ ಕೊನೆಗೊಂಡು ಹಿಂದೀ ಸೈನಿಕರನ್ನು ಅಲ್ಲಿಂದ ಒಡನೆ ಹಿಂದೆ ಕರೆಸಿ ಮತಗಣನೆ ನಡೆಯಬೇಕಂತೆ! ಮತಗಣನೆಗೆ ಹಿಂದುಸ್ತಾನ ಸರಕಾರ ಯಾವಾಗಲೂ ಸಿದ್ಧವಿತ್ತು. ಆದರೆ ದಾಳಿಗಾರರನ್ನು ಹೊರಗಟ್ಟಿ ಶಾಂತಿ ಸ್ಥಾಪಿಸಿದಲ್ಲದೆ ಅದು ಸಾಧ್ಯವಿಲ್ಲ. ಆ ಶಾಂತಿ ಸ್ಥಾಪನೆಗೆ ನೆರವಾಗಲು ಪಾಕಿಸ್ತಾನಕ್ಕೆ ಮನಸಿಲ್ಲ. ಅಂದ ಮೇಲೆ ಭದ್ರತಾ ಮಂಡಲದ ಮುಂದೆ ಈ ಪ್ರಶ್ನೆ ಹೋಗದೆ ಗತ್ಯಂತರವಿಲ್ಲ. ಈ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದೆಯೆಂಬ ಬಗ್ಗೆ ಬೇಕಾದಷ್ಟು ಪ್ರಮಾಣಗಳು ಹಿಂದೀ ಸರಕಾರದ ಹತ್ತಿರ ಇದ್ದು ಅವನ್ನೆಲ್ಲ ಭದ್ರತಾ ಮಂಡಲದ ಮುಂದೆ ಇರಿಸಲಾಗುವದು. ಇದರಲ್ಲಿ ಪ್ರಬಲ ರಾಷ್ಟ್ರಗಳ ಅಂಗವಿಲ್ಲದಿರುವದರಿಂದ ಇದು ನೆನೆಗುದಿಗೆ ಬೀಳದೆ ಬೇಗನೆ ಇತ್ಯರ್ಥವಾಗಿ ದಾಳಿಗಾರರಿಗೆ ಸೌಕರ್ಯ ಕೊಡದಿರಲು ಭದ್ರತಾಮಂಡಲ ಪಾಕಿಸ್ತಾನಕ್ಕೆ ಆಜ್ಞಾಪಿಸಬಹುದೆಂದು ನಂಬಲಾಗಿದೆ. ಆದರೆ ಪಾಕಿಸ್ತಾನ ಇದರೊಡನೆ ಜುನಾಗಡ, ಕಪುರ್ಥಲಾ ಮೊದಲಾದ ಸಂಸ್ಥಾನಗಳ ಪ್ರಶ್ನೆಯನ್ನೂ ಎತ್ತುವದಂತೆ. ಇದು ವಿಲಂಬಕ ಗತ್ತೇ ಸರಿ. ಅದರಿಂದ ಹಿಂದೀ ಸರಕಾರ ತನ್ನ ಮುಂಗೈ ಕಸುವಿನ ಮೇಲೆ ಭರವಸೆಯಿಟ್ಟೇ ನಡೆಯಬೇಕು. ಬಾಲ್ಕನದಲ್ಲಿ ಭದ್ರತಾ ಮಂಡಲದ ನೀತಿಯನ್ನು ನೋಡಿದ ನಾವು ಅಲ್ಲಿ ಪೂರ್ಣ ಭರವಸೆಯಿಡುವಂತಿಲ್ಲ. ಮೇಲಾಗಿ ವಿಭಜನೆಯ ಹೊಸ ಹುಚ್ಚು ಹಿಡಿದ ಪ್ರಮುಖ ರಾಷ್ಟ್ರಗಳು ಕಾಶ್ಮೀರವನ್ನೂ ವಿಭಜಿಸುವ ಕೆಲ ಬ್ರಿಟಿಶ ವರ್ಗಗಳ ಮತಿಗೆ ಸೈಗುಟ್ಟುವ ಸಂಭವವೂ ಇದೆ. ಇದಕ್ಕೆ ಹಿಂದುಸ್ತಾನ ಎಂದಿಗೂ ಒಪ್ಪದು. ಆದರಿಂದ ಭದ್ರತಾ ಮಂಡಲದ ಮುಂದೆ ಈ ಪ್ರಶ್ನೆ ಹೋಗಿದೆಯೆಂದು ಕಾಶ್ಮೀರದಲ್ಲಿ ಕೈ ಸಡಿಲಿಸದೆ ಎಲ್ಲ ಬಲವನ್ನು ಪ್ರಯೋಗಿಸಿ ದಾಳಿಗಾರರನ್ನು ಓಡಿಸುವ ಪ್ರಯತ್ನವನ್ನು ಮುಂದೆ ಸಾಗಿಸಲೇಬೇಕು. ಇಲ್ಲದಿದ್ದರೆ ಪಾಕಿಸ್ತಾನದ ನೀತಿಗೇಡಿತನಕ್ಕೆ ಕಾಶ್ಮೀರಿಗಳು ಇನ್ನೊಮ್ಮೆ ಬಲಿಯಾಗಬೇಕಾದೀತು. ಕಾಶ್ಮೀರ ಪ್ರಶ್ನೆ ಬಗೆಹರಿದಲ್ಲದೆ ಈಚೆಗೆ ಆದ ಒಪ್ಪಂದದನ್ವಯ ಪಾಕಿಸ್ತಾನಕ್ಕೆ ಕೊಡಬೇಕಾದ ೫೫ ಕೋಟಿ ರೂಪಾಯಿ ಕೊಡಬಾರದೆಂದು ಹಿಂದುಸ್ತಾನ ಸರಕಾರ ನಿರ್ಣಯಿಸಿದ್ದು ಯಥಾಯೋಗ್ಯವೇ ಆಗಿದೆ. ಮೂಗ ಹಿಡಿ...ದೆ ಬಾಯಿ ತೆರೆಯದು.

ಕರ್ಮವೀರ
ಹರಿಜನ ಪುರವಣಿ

ಸೀಖ ಗೆಳೆಯರಿಗೆ

ಈ ದೇಶಕ್ಕೆ ಇಸ್ಲಾಮಿನ ಪ್ರವೇಶವಾಗಿ ಏಳು ಶತಮಾನಗಳು ಕಳೆದಿದ್ದವು. ಅದರ ಪ್ರಸಾರದ ಪ್ರಥಮ ಪರ್ಯಾಯ ಮುಗಿದುಹೋಗಿತ್ತು. ಅದು ಮೊದಲಿನ ಪರಿಶುದ್ಧತೆ ಸರಳತೆಗಳಲ್ಲಿ ಅಧಿಕಾಂಶವನ್ನು ಕಳೆದು ಕೊಂಡಿತ್ತು. ಜಗತ್ತಿನ ಬೇರೆ ಎಲ್ಲ ಧರ್ಮಗಳು ಹೇಗೋ ಹಾಗೆಯೆ ಅದೂ ಧರ್ಮಾಂಧತೆ, ಅಂಧಶ್ರದ್ಧೆಗಳ ಆಗರವಾಗಿ ಬಿಟ್ಟಿತು. ಅದೇ ಪ್ರಕಾರ ಹಿಂದೂ ಧರ್ಮವೂ ನೂರು ಜಾತಿಭೇದ, ಅಸ್ಪೃಶ್ಯತೆ, ನಾನಾ ಕುರುಡು ನಂಬಿಕೆಗಳಿಂದಲೂ ದುಷ್ಟ ಆ[illegible]ಗಳಿಂದಲೂ ಕಿಕ್ಕಿರಿದು ಹೋಗಿತ್ತು. ಹಿಂದುಗಳೂ ಮುಸ್ಲಿಮರೂ ಪರಸ್ಪರರಲ್ಲಿ ತಂತಮ್ಮ ಶುಷ್ಕ ವಿಧಿವಿಧಾನ, ಸಿದ್ಧಾಂತ ರಾದ್ಧಾಂತಗಳ ಮೇಲೆಯೆ ವಾದ ವಿವಾದಗಳನ್ನು ಬೆಳೆಸುತ್ತಿದ್ದರಲ್ಲದೆ ತಂತಮ್ಮ ಧರ್ಮದ ನಿಜವಾದ ತಿರುಳನ್ನು ಕಣ್ತೆತ್ತಿ ನೋಡುತ್ತಿರಲಿಲ್ಲ. ಕಬೀರನು ಈ ಕೆಳಗಿನ ಪಂಕ್ತಿಗಳಲ್ಲಿ ಆಗಿನ ಧಾರ್ಮಿಕ ಪರಿಸ್ಥಿತಿಯನ್ನು ಮಾರ್ಮಿಕವಾಗಿ ಬಣ್ಣಿಸಿದ್ದಾನೆ.

ಹಿಂದುಗಳೆಂಬರು "ರಾಮನೆ ಪ್ರಿಯನು!"
ಮುಸ್ಲಿಮರೆಂಬರು "ರಹಮಾನ್ ಶರಣು!"
ಕಚ್ಚಾಡ ಯುದ್ಧದಿ ಮಡಿಯುವರವರು ಎರಡರ
ತಿರುಳನೊ ಒಂದೊಂಬರನು.

ಇಂಥ ವ್ಯರ್ಥ ವಿಧಿವಿಧಾನಗಳ ಮತ್ತು ಅಂಧಶ್ರದ್ಧೆಗಳ ಕಳೆಯನ್ನು ಕಿತ್ತು ಎರಡೂ ಧರ್ಮಗಳ ಮೂಲಭೂತ ಐಕ್ಯವನ್ನು ಎತ್ತಿ ತೋರಿಸಿ ಎರಡನ್ನೂ ಒಂದುಗೂಡಿಸುವ ಹತ್ತಿರ ತರಲೋಸುಗ ಈ ದೇಶದಲ್ಲಿ ಅನೇಕ ಮಹಾತ್ಮರು ಅವತರಿಸಿದರು. ಈ ಮಹಾತ್ಮರಲ್ಲಿ ಗುರು ನಾನಕರು ಅತ್ಯಂತ ಆದರಣೀಯರಲ್ಲೊಬ್ಬರು. ಮಾನವ ಧರ್ಮವನ್ನು ಅರ್ಥಾತ್ ಪ್ರೇಮ ಧರ್ಮವನ್ನು ಪ್ರಚುರ ಗೊಳಿಸಿದವರಲ್ಲಿ ಗುರು ನಾನಕರು ಅತ್ಯುಚ್ಚ ಶ್ರೇಣಿಗೆ [illegible] ಅನೇಕರು ಭಾವಿಸುತ್ತಿರುವುದು ಉಚಿತವೇ ಆಗಿದೆ.

ಗುರು ನಾನಕರು [illegible] ದಕ್ಷ್ಯ [illegible]ದರು. ಅವರ ಇಡಿ ಜೀವನವೇ ಹಿಂದೂ ಮುಸ್ಲಿಮ ಇವೆರಡೂ ಪದ್ಧತಿಗಳಿಂದ ಬೇರಾಗಿತ್ತು; ಇಲ್ಲವೆ ಎರಡರ ಸಮ್ಮಿಶ್ರಣವಾಗಿತ್ತೆಂದು ಹೇಳಲು ಅಡ್ಡಿಯಿಲ್ಲ. ಸೀಖರ ಮುಖ್ಯ ಗ್ರಂಥವಾದ "ಗ್ರಂಥಸಾಹೇಬ"ದಲ್ಲಿ ಗುರು ನಾನಕರು ಉಪದೇಶಿಸಿದ [illegible] ಧರ್ಮದ ನಿಜವಾದ ಚಿತ್ರವನ್ನು ಕಾಣಬಹುದು. ಅವರ ಧರ್ಮವೆಂದರೆ ಐಕ್ಯದ ಧರ್ಮ, ಪ್ರೇಮದ ಧರ್ಮ; ಹಿಂದೂ ಧರ್ಮ, ಇಸ್ಲಾಂ ಇವೆರಡರ ಪರಿಪೂರ್ಣ [illegible]ವಾಗಿತ್ತು. ಅವರ ಕಾಲದಲ್ಲಿ ಅನೇಕ ಶತಕಗಳವರೆಗೂ ಗದ್ದುಗೆಯಾಳಿದ [illegible] ಅದಕ್ಕಿಂತ ಆಚೆಗೆ ಕೂಡ—"ನಾನಕನೆಂದರೆ ಒಬ್ಬ ಪೈಗಂಬರನೆ (ದೇವದೂತ)" ಎಂಬ ನಾಣ್ಣುಡಿ ಮುಸ್ಲಿಮರಲ್ಲಿ ಪ್ರಚಾರದಲ್ಲಿತ್ತು. ಅಂದಿನ ಹಿಂದೂ ಧರ್ಮವನ್ನು ಗಂಗೆಗೂ ಇಸ್ಲಾಮನ್ನು ಯಮುನೆಗೂ ಹೋಲಿಸಬಹುದಾದರೆ ಗುರು ನಾನಕರ ಧರ್ಮ ಪ್ರಯಾಗವಲ್ಲದೆ ಅವೆರಡು ಪುಣ್ಯನದಿಗಳ ಸಂಗಮದಂತಿತ್ತೆಂದು ಹೇಳಬಹುದು. ಮಾನವ—ಮಾನವರಲ್ಲಿ ಸಮಾನತೆಯನ್ನು ಪ್ರತಿಪಾದಿಸುತ್ತ ಅವರು ಹೇಳುವುದು:

ಮೊದಲು ಪರಮಾತ್ಮನು ಪ್ರಕಾಶವನ್ನು [illegible]ನು.

[illegible]

[illegible]
ಅದರಿಂದ ಒಬ್ಬನು [illegible]
[illegible]

ತಮ್ಮ ಕಾಲದ ಹಿಂದುಗಳಿಗೂ ಮುಸ್ಲಿಮರಿಗೂ ಇದ್ದ ವೈಷಮ್ಯಗಳನ್ನು ಅವರು ಕರುಣವಾಕ್ಯಗಳಲ್ಲಿ ಬಣ್ಣಿಸಿದ್ದಾರೆ. ಆ ವೈಷಮ್ಯಗಳ ಕಾರಣದಿಂದಲೇ ಅವರು ತಮ್ಮನ್ನು ಹಿಂದುವೆಂದಾಗಲಿ ಮುಸ್ಲಿಮನೆಂದಾಗಲಿ ಹೇಳಿಕೊಳ್ಳಲು ಅವರು [illegible] ಒಪ್ಪಲಿಲ್ಲ. ಅವರು ಹೇಳುತ್ತಾರೆ:

[illegible]
[illegible]
[illegible]

[illegible]
[illegible] ಹೇಳುವವರು ರಾಮನೆಂದು ಕೆಲವರು
[illegible]
[illegible], ನಾವು ಮುಸ್ಲಿಮರಲ್ಲ;
ಅವರಿರ್ವರೆಡೆಯಲ್ಲಿ ಕಾಣೆಯುತಿಹ ಕಾಸ
ಪುರುಷ.

"ಗ್ರಂಥ ಸಾಹೇಬ"ದ ಭಾಷೆಯೂ ಮೊದಲಿಂದ ಕೊನೆ ವರೆಗೆ ಮಿಶ್ರ ಭಾಷೆ. ಪುಸ್ತಕದ ಹೆಸರಲ್ಲಿ ಗ್ರಂಥವೆಂಬುದು ಸಂಸ್ಕೃತ ಶಬ್ದವಾದರೆ ಸಾಹೇಬ ಎಂಬುದು ಅರಬಿ ಶಬ್ದ. ಈ ದೃಷ್ಟಿಯಿಂದ ನೋಡಿದರೆ ಗ್ರಂಥ ಸಾಹೇಬದ ಭಾಷೆ ನಿಜವಾದ ಹಿಂದುಸ್ತಾನಿ. ಗ್ರಂಥ ಸಾಹೇಬದಲ್ಲಿ ಉಲ್ಲೇಖಿಸಲ್ಪಟ್ಟ ಪರಮಾತ್ಮನ ನಾಮಾವಲಿಯಲ್ಲಿ "ಅಲ್ಲಾ" ನಾಮ ಮತ್ತೆ ಮತ್ತೆ ಕಾಣಿಸುತ್ತದೆ. ಪರ್ಶಿಯನ್ ಮತ್ತು ಅರಬ್ಬಿ ಭಾಷೆಗಳ ಪದನಾಮ ವಾಚಕಗಳನೇಕವನ್ನು ಅದರಲ್ಲಿ ನೋಡಬಹುದು. ಸೀಖ ಗುರುಗಳ ಕೃತಿಗಳಲ್ಲದೆ ಬೇರೆ ಸಾಧು ಸಂತರೆನಿಸ್ಸೋ [illegible] ಜನರ ಕೃತಿಗಳು ಅದರಲ್ಲಿವೆ. ಅವರಲ್ಲಿ ಕನಿಷ್ಠ [illegible]ರೂ ಮುಸ್ಲಿಮರಿರುವರು. ಅಮೃತಸರದ ಸುವರ್ಣ ಮಂದಿರದ ಅಡಿಗಲ್ಲನ್ನಿಕ್ಕಲು ಗುರು [illegible] ಮಿಯಾಮೀರನೆಂಬ ಮುಸ್ಲಿಂ [illegible]ನನ್ನು ಕರಿಸಿದನು. ಈ ಉದಾತ್ತ [illegible] ಸ್ವರೂಪವನ್ನು ಸೀಖ ಪಂಥ ಕೊನೆವರೆಗೂ ಉಳಿಸಿಕೊಂಡಿತು. ಹತ್ತನೆಯ ಗುರುವಾದ ಗುರುಗೋವಿಂದ ಸಿಂಗನ ಕೃತಿಗಳನ್ನೊಳಗೊಂಡ ದರ್ಶನ ಗ್ರಂಥವನ್ನು ಅಭ್ಯಸಿಸಿದರೆ ಈ ವಿಷಯದಲ್ಲಿ ಗುರುಗೋವಿಂದ ಸಿಂಗನ ಅಭಿಪ್ರಾಯಕ್ಕೂ ಪೂರ್ವ ಗುರುಗಳ ವಿಚಾರಕ್ಕೂ ಏನೂ ಭೇದವಿಲ್ಲವೆಂದು ಸ್ಪಷ್ಟವಾಗುತ್ತದೆ. ಹತ್ತನೆ ಗುರು ಒಂದೆಡೆಯಲ್ಲಿ ಹೀಗೆ ಹೇಳಿದ್ದಾನೆ:

ಒಬ್ಬನೆಂಬ ತಾ [illegible]
[illegible]
[illegible]
[illegible]
ತಲೆಸ್ಸೊಬ್ಬ ಸುರಿವ ತಾ ಯತಿಯೆಂದು;
ಒಬ್ಬ ಹಿಂದುವೆಂದೆಂಬ ತಾನು, ಇನ್ನೊಬ್ಬ
ನೆಂಬ ತಾನಿಹೆ ಮುಸ್ಲಿಮ್
ಒಬ್ಬ ರಫಜಿ ಪಂಥಾನುಯಾಯಿ,
ಇನ್ನೊಬ್ಬ ಸಿಮಾಮ್ ಶಫಿ
ಪಂಥದವನು;
[illegible]ರೆದು ನೋಡಿದವರೊ ಎಲ್ಲರವರು ಒಂದೇ
ಮನುಜ ಕುಲದ ಸಂತಾನ.
ಒಬ್ಬ ಕರ್ತನಿಗೆ ಹಲವು ಹೆಸರಿಟ್ಟು
ಕರೆಯುತಿಹರು ಜನರು.
ಕ್ರಿಸ್ತನಂತೆ ಮೋಸ್ ಕರಿಮನಂತೆ
[illegible]!
[illegible]—[illegible] ನೋಡಿ
ಮೋಸ ಹೋಗದಿರು!
[illegible]—
ಆವನೆ ಎಲ್ಲರಿಗು ದಾರಿ ತೋರುವನು.
ಆವನ ಮೂರ್ತಿಯು ಪ್ರತಿಮೂರ್ತಿಗಳೆಲ್ಲರು,
ಎಲ್ಲ ಕಣ್ಗಳಲಿ ಹೊಳೆವುದವನ ಬೆಳಕೇ.
[illegible] ಒಂದೆ;
[illegible] ಮುಸ್ಲಿಮರ ನಮಾಜಿಗು
ಇರುವುದೊಂದೆ ಅರ್ಥ.
[illegible]ಪೊಂದೆ—ಭೇದ ಭಾವ
ಬರಿ ಮಾಯೆ.
[illegible]
[illegible]
[illegible]
ಎಲ್ಲರಿಗಿರುವದು ಒಂದೆ [illegible] ಕಣ್,
[illegible], ಒಂದೆವಾಗಿಂದ್ರಿಯ;
[illegible] ಸೃಷ್ಟಿಯೊಳವೇ ಭೂತಗಳು
—ಪೃಥ್ವಿ ವಾಯು ತೇಜಸ್ಸು ನೀರು
[illegible] ಶತನಾಗೇ ಎರಡು ಹೆಸರು—
[illegible]
[illegible] ಎರಡರುಪವೇಶಕೊಂಡೆ
ಸತ್ಯ [illegible].
[illegible] ಒಂದೇ [illegible] ಒಂದೇ [illegible].

ಇಷ್ಟೆಲ್ಲ ಇದ್ದರೂ ಇಂದು ಅದೇ ಗ್ರಂಥ ಸಾಹೇಬದ, ಸೀಖ ಗುರುಗಳ ಅನುಯಾಯಿಗಳಲ್ಲನೇಕರು ಅಲ್ಲಾ ನಾಮೋಚ್ಚಾರಕ್ಕೂ ಕುರಾಣ ಪಠನೆಗೂ ಆಕ್ಷೇಪವೆತ್ತುತಿದ್ದಾರೆ.

ಬೇರೆ ಯಾರಾದರೂ ಮಾಡಿದ ದುಷ್ಕೃತ್ಯವನ್ನು ನೋಡಿ ಸೀಖ ಗುರುಗಳು ತಮ್ಮ ಧರ್ಮದ ಸರ್ವಾಂಕಷ ಗುಣವನ್ನು ಬದಲಿಸಲಿಲ್ಲ. ಹಾಗೆ ಮಾಡುವದು ಅವರಿಗೆ ಸಾಧ್ಯವೇ ಇದ್ದಿಲ್ಲ. ಹಾಗೆ ಮಾಡಿದ್ದರೆ ಸೀಖ ಧರ್ಮ ಹೀಗೆ ಉಳಿಯುತ್ತಲೂ ಇರಲಿಲ್ಲ. ಗ್ರಂಥ ಸಾಹಿಬವನ್ನು ಬದಲಿಸುವದು ಸಾಧ್ಯವಿದ್ದಿಲ್ಲ. ಜಗತ್ತಿನ ಪವಿತ್ರ ಗ್ರಂಥಗಳಲ್ಲಿ ಉನ್ನತ ಸ್ಥಾನವನ್ನು ಪಡೆದು ಮನುಷ್ಯನಿಗೆ ಸರ್ವದಾ ದಾರಿ ತೋರುವ ಸತ್ಯ ಸನಾತನ ಪ್ರಕಾಶವನ್ನು ಬೀರುವ ಗ್ರಂಥ ಸಾಹಿಬವನ್ನು ಬದಲಿಸುವದು ಅಶಕ್ಯವಾಗಿತ್ತು.

ಹೆಚ್ಚು ಕಡಿಮೆ ಎಲ್ಲ ಸೀಖ ಗುರುಗಳೂ ಪರ್ಶಿಯನ್ ಭಾಷೆಯಲ್ಲಿ ಪಾರಂಗತರಾಗಿದ್ದರು. ಅವರು ಆ ಭಾಷೆಯಲ್ಲಿ ಅನೇಕ ಸುಂದರ ಕವಿತೆಗಳನ್ನು ಬರೆದಿದ್ದಾರೆ. ಸ್ವತಃ ಗ್ರಂಥ ಸಾಹಿಬವೇ ಅಂದಿನ ಕಾಲದಲ್ಲಿ ಈ ದೇಶದಲ್ಲಿ ಪ್ರಚುರವಾಗಿದ್ದ ವಿವಿಧ ಭಾಷೆಗಳ ಕೃತಿಗಳ ರತ್ನಭಾಂಡಾರವಾಗಿದೆ. ಪ್ರೇಮ, ಐಕ್ಯ, ಸಾಮರಸ್ಯಗಳ ಅವಿಚಲ, ನಿರ್ವಿಕಾರ ಪಾರಾವಾರವೇ ಅದು. ಹೀಗಿದ್ದಾಗ್ಯೂ ಅನೇಕ ಸೀಖ ಗೆಳೆಯರಿಂದು ಉರ್ದು [illegible], ಪರ್ಶಿಯನ್ ಲಿಪಿಯೆಂದರೆ [illegible].

"ಬಂಗ್ಲಾ ಸಾಹಿಬ" ಎಂಬ ದಿಲ್ಲಿಯ ಸೀಖ ಗುರುದ್ವಾರದ ಮಹಾದ್ವಾರದಲ್ಲಿ ಕೊರೆಯಲ್ಪಟ್ಟಿದ್ದ "ಕಾಯಂ ಕಿಯಾ" ಎಂಬ ಉರ್ದು ಶಬ್ದಗಳನ್ನು "ಪ್ರವೇಶ ಕಿಯಾ" ಎಂದು ಹಿಂದೀಗೆ ಬದಲಿಸಿ ಬರೆದದ್ದನ್ನು ಕಂಡು ನನಗೆ ಸಂಕಟ ಆಶ್ಚರ್ಯಗಳೆರಡೂ ಒಮ್ಮೆಲೇ ಆದವು. ಉರ್ದು ಅಥವಾ ಇಂಗ್ಲೀಷ ಶಬ್ದಗಳನ್ನೋದಿದವರು ಹಿಂದೀ ಅನುವಾದವನ್ನಷ್ಟೆ ನೋಡುವವರು ಸುಲಭವಾಗಿ ಅದರ ಅರ್ಥವನ್ನು ತಪ್ಪು ತಿಳಿದುಕೊಳ್ಳಬಹುದು. "ಕಾಯಮ ಕಿಯಾ" "ಆರಮ ಕಿಯಾ" ಅಥವಾ "ತಮರ" ಎಂಬೀ ಶಬ್ದಗಳು ಎಲ್ಲರಿಗೂ ತಿಳಿಯುವಂತಿವೆ. "ಪ್ರವೇಶ ಕಿಯಾ" ಎಂಬ ಶಬ್ದಗಳು ತಪ್ಪು ಅಭಿಪ್ರಾಯವನ್ನುಂಟು ಮಾಡುವ ಸಂಭವವುಂಟು. ಉರ್ದೂ ಭಾಷೆ ಉರ್ದೂ ಲಿಪಿ ಅಥವಾ ಯಾವದೇ ಭಾಷೆಯಲ್ಲಿ ಪ್ರಚಲಿತವಾಗಿರುವ ಸರ್ವಗ್ರಾಹ್ಯವಾದ ಸಾಮಾನ್ಯ ಶಬ್ದಗಳ ಬಹಿಷ್ಕಾರವೇ ಮೊದಲಾದ ಅನುಚಿತ ಪೂರ್ವಗ್ರಹಗಳು ಗ್ರಂಥ ಸಾಹೇಬಕ್ಕೂ ಸೀಖ ಸಂಪ್ರದಾಯಕ್ಕೂ ಉದಾತ್ತ ಸೀಖ ಪಂಥದ ತಿರುಳಿಗೂ ಒಪ್ಪದ ಸಂಗತಿಗಳೇ ಸರಿ.

ಬರಿ ಪೂಜಾವಿಧಿ ಮೊದಲಾದ ಬಾಹ್ಯಾಚಾರಗಳಿಗಿಂತಲೂ ನ್ಯಾಯ, ಸಜ್ಜನಿಕೆ, ಕ್ಷಮೆ, ದಯೆ, ಔದಾರ್ಯ ಮೊದಲಾದ ಸತ್‌ಶೀಲಗಳನ್ನೇ ಸೀಖ ಧರ್ಮ ಒತ್ತಿ ಹೇಳಿದೆ. ಆದರೆ ಇಂದು ಸೀಖ ಧರ್ಮದ ಅನುಯಾಯಿಗಳು ನಮ್ಮನ್ನು ಜಗತ್ತಿನ ತುಚ್ಛೀಕಾರಕ್ಕೆ ಗುರಿ ಮಾಡಿದ ಅತ್ಯಂತ ಕರಾಳ ದುಷ್ಕರ್ಮಗಳನ್ನು ಮಾಡಿ ತೋರಿಸುವಲ್ಲಿ ಹಿಂದು ಇಲ್ಲವೆ ಮುಸ್ಲಿಮರಿಗಿಂತ ಹಿಂದುಳಿದಿಲ್ಲವೆಂದು ನಾವು ವಿಷಾದದಿಂದಲೂ ನಾಚಿಕೆಯಿಂದಲೂ ಒಪ್ಪಿಕೊಳ್ಳಬೇಕಾಗಿದೆ. ಓಡುತ್ತಿರುವ ರೇಲುಗಾಡಿಗಳಿಂದ ನಿಸ್ಸಹಾಯ ಜನರನ್ನು ಹೊರಗೊಗೆಯುವದು ಈ ತಿಂಗಳ ಆರಂಭದವರೆಗೂ ಅವಿರತವಾಗಿ ನಡೆಯುತ್ತ ಬಂದಿದೆ. ಈ ಹೀನ ಕೃತ್ಯದಲ್ಲಿ ಸೀಖರ ಕೈ ಇಲ್ಲದಿಲ್ಲ. ಮದ್ಯಪಾನ ಮತ್ತು ಅದರ ಬೆನ್ನುಹತ್ತಿ ಬರುವ ಕೆಟ್ಟ ಚಾಳಿಗಳಿಂದಲೂ ಸೀಖರು ಅಲಿಪ್ತರಾಗಿ ಉಳಿದಿಲ್ಲ. ಇದನ್ನೆಲ್ಲ ನಾವು ಬಹಳ ಸಂಕೋಚದಿಂದಲೂ ಸಂಕಟದಿಂದಲೂ ಬರೆಯುತ್ತಿದ್ದೇವೆ. ಈ ದುರಾಚಾರಗಳ ವಿರುದ್ಧ ಸೀಖ ನಾಯಕರು ದನಿ ಎತ್ತಬೇಕೆಂದು ನಾವು ವಿನಯ ಪೂರ್ವಕವಾಗಿ ಅರಿಕೆಮಾಡುತ್ತೇವೆ. ಶಸ್ತ್ರ ವಿರೋಧಿಯ ಮೇಲೆ ಆಯುಧವನ್ನು ಉಪಯೋಗಿಸುವ ಮಾತು ಬೇರೆಯೆ. ಹಿಂಸಾಕೃತಿಗಳಲ್ಲಿಯೂ ಶೌರ್ಯ ಪ್ರದರ್ಶನ ಸಾಧ್ಯವುಂಟು. ಆದರೆ ಹೆಂಗಸರನ್ನು, ಮಕ್ಕಳನ್ನು, ಮುದುಕರನ್ನು, ನಿಸ್ಸಹಾಯರನ್ನಾಗಲಿ ಯಾವದೇ ಪ್ರತಿಭಟನೆಯನ್ನು ತೋರಿಸಲು ಅವಕಾಶವಿಲ್ಲದಂಥ ನಡುವೆ ಸಿಕ್ಕಿಬಿದ್ದ ಅಲ್ಪಸಂಖ್ಯಾಕ ಗುಂಪುಗಳನ್ನಾಗಲಿ [illegible]ಸುವದೆಂದರೆ ಹೇಡಿತನವಲ್ಲದೆ ಬೇರಲ್ಲ. ಪಾತಕಗಳೂ ದೌರ್ಜನ್ಯವೂ ಯಾವ ರಾಷ್ಟ್ರವನ್ನೂ ಉದ್ಧರಿಸಲಾರವು.

"ನೆರೆಮನೆಯೊಳಗೊಬ್ಬ ಜರೆಯುವನ[illegible]ಟ್ಟುಕೊ, ನಿನ್ನಂಗಳದಲ್ಲೆ ಅವನಿಗೊಂದು ಗುಡಿಸಲು ಕಟ್ಟಿಕೊಡು" ಎಂಬುದು ಸೀಖರಲ್ಲಿ ಪ್ರಸಿದ್ಧವಾದ ಉಪದೇಶ. ಆದರೆ ಆ ಉದಾತ್ತ ಧರ್ಮದ ಅನುಯಾಯಿಗಳಲ್ಲಿ ಕೆಲವರು [illegible] ತಮ್ಮ ತಪ್ಪುಗಳನ್ನು ತೋರಿಸಿಕೊಡಬೇಕೆಂಬ ಗೆಳೆಯರಿಗೆ ಕೂಡ ಬೆದರಿಕೆ ಹಾಕುತ್ತಿದ್ದಾರೆ.

ಇಂದಾದರೂ ಸೀಖರು ಪ್ರಯತ್ನಿಸಿದರೆ ಅವರು ಹಿಂದೂ ಮುಸ್ಲಿಮರ ನಡುವೆ ನಿಜವಾದ, ಶಾಶ್ವತವಾದ ಸೌಹಾರ್ದವನ್ನು ಸ್ಥಾಪಿಸುವ [illegible] ಬಲ್ಲರು. ನಮ್ಮಲ್ಲಿನ ಪರಸ್ಪರ ಸಂಪರ್ಕದ ಕ್ಷೇತ್ರ[illegible] ಅವರು ಪ್ರೇಮ ಬಾಂಧವ್ಯ, ಸಾಮರಸ್ಯದ ಅಮೃತ ಧಾರೆಯನ್ನು ಎರೆದು [illegible] ಬಲ್ಲರು. ಅವರೆಲ್ಲರೂ, ಅದರಲ್ಲಿಯೂ [illegible] ಗುರುನಾನಕರ ಉಪದೇಶವನ್ನು [illegible] ಅನುಸರಿಸಿದರೆ, ಅವರಿಗೆ ಬೇರಾವ ಮಾರ್ಗದರ್ಶನದ ಅವಶ್ಯಕತೆಯೂ ಇಲ್ಲೆಂದು ನಾವು [illegible] ಹೇಳುತ್ತ ಬಂದಿದ್ದೇವೆ. ಏಕೆಂದರೆ ಆ ಉಪದೇಶಗಳಿಗಿಂತ [illegible], ಉನ್ನತವಾದುದು ಬೇರೊಂದು ಸಿಗಲಾರದು. ಇಂದಿನ [illegible] ಸೀಖ ಜಾತಿ [illegible] ಮಾಡಿದರೆ [illegible] ಪಥಕನಂತೆ [illegible]ಬಲ್ಲದು. ಆದರೆ, [illegible]ಗಳು ನಿಜವಾದ [illegible] ತೋರಿದರೆ ಮಾತ್ರ ಅದು ಸಾಧ್ಯ.

ನೋಖಾಲಿ, [illegible]
[illegible] ಮೋಹನದಾಸ

ಜನ[illegible]ಗ್ರಹ ಚೈತನ್ಯ [illegible] [illegible]

ನಾನೂ ನನ್ನ ಜೊತೆಗಾರರೂ [illegible] [illegible] ಪ್ರಾರಂಭಿಸಿದೆವು. ಮೊದಲು [illegible] ಶಾರದಾ ಮತ್ತು ನೊಗರ[illegible] ಹುಡುಗ ಹುಡುಗಿಯರು, [illegible] ಕೆಲ ಗಂಡಸರು ಅಲ್ಲಿದ್ದರು. [illegible] ಕಡಿಮೆ ಅನಾಥರೇ ಆಗಿದ್ದರು. [illegible] ನಡುಗಿಸುವ ಭಯದ ನೆರಳಲ್ಲಿ [illegible] [illegible]. ನಾವು ಸಂಕೀರ್ತನ ಮತ್ತು [illegible] ಅವರನ್ನು ಆದರಿಂದ ರಕ್ಷಿಸಿದ ಮಂತ್ರ[illegible].

ಮೊದಲನೆಯದರ ಕತೆಯನ್ನು [illegible] ದರೂ ಹೇಳುತ್ತೇನೆ. ಅದು [illegible] ತರ್ಜೀಡನೆ ಮತ್ತು ಸರಳಾಂಬದಿಂದ [illegible] ನಿಸಿದ ಅನುಭವವೆಂದರೆ ಸದ್ಯಕ್ಕೆ [illegible] ಅದು ಅತ್ಯಂತ ವೈಯಕ್ತಿಕ ಮತ್ತು [illegible] ರೂಪದ್ದು! ಆದುದರಿಂದ ಅದನ್ನು [illegible]ವುದು ದುಷ್ಕರ. ಆದರ ಪರಿಣಾಮವು [illegible] ಪವಾಡಪ್ರತಿಮವಾಗಿತ್ತು.

ನೂಲಿಗರು ತಾವೇ ಕೈಯಿಂದ [illegible] ಬಿದಿರು ಕದಿರುಗಳಿಂದ ದಾಳಿಯಿಂದ [illegible] ದೇಗುಲವೊಂದರ ಮುಂದೆ ನೂಲುತ್ತಿದ್ದರು. [illegible]ಯನ್ನು ಕೈಯಿಂದ ಹಿಂಜಿ (ಹಸಿಯು) [illegible] ಬೀಜದ ಹತ್ತಿಯನ್ನು ಬಳಸಿದಾಗ [illegible] ಕರಣಗಳಿಲ್ಲದೆ ಕೈಯಿಂದಲೆ ನೋಡುತ್ತಿದ್ದ[illegible]. ಆಗ ಯಾರಿಗೂ ನೂಲನ್ನು ಏನು ಮಾಡುತ್ತಾರೆಂಬುದು ತಿಳಿದಿದ್ದಿಲ್ಲ. ಅದು ಕೇವಲ ಸ್ವಸಂತೋಷದ ಕೆಲಸವಾಗಿತ್ತಲ್ಲದೆ ಅದರಿಂದ ಬರುತ್ತಿದ್ದ ನಿಶ್ಯಸ್ಥಾಯಿಯಾದ ಒಂದು ಆನಂದ.

ತಮ್ಮ ದೇಗುಲದಲ್ಲಿ ವಿಗ್ರಹವೊಂದನ್ನು ಪ್ರತಿಷ್ಠಿಸಲು ಜನರು ನಿರ್ಧರಿಸಿದಾಗ [illegible] ಸಂದರ್ಭವು ತಾನೇತಾನಾಗಿ ಲಭಿಸಿತು. ಸರಕಾರದ ಸಂಕಟ ಪರಿಹಾರಕ ಅಧಿಕಾರಿಯಿಂದ [illegible] ಕೊಳ್ಳಲಿಕ್ಕೆ ಅಗತ್ಯವಾದ ಬಂದು [illegible] ಒರಟುಬಟ್ಟೆ) ಪಡೆಯಲು ನನ್ನಿಂದ [illegible] ಶಿಫಾರಸು ಪತ್ರವನ್ನು ಅಪೇಕ್ಷಿಸಿದರು. [illegible] ಬೇಡಿಕೆ ನನ್ನನ್ನು ಬಹಳ [illegible] 'ನಮ್ಮ ಗತಿ ಇಲ್ಲಿಗೆ ಮುಟ್ಟಿತೆ? ದೇವರ [illegible] ಸರಕಾರಿ ಅಧಿಕಾರಿಗಳ ಕೃಪೆಯಿಂದ [illegible] ಬೇಕೆ?' ಎಂದುಕೊಂಡೆ. "ಇಲ್ಲ, ಇದನ್ನು ಸುಧಾರಿಸಬೇಕು. ನಾನು ನಿಮಗೆ [illegible]ತ್ತೇನೆ" ಎಂದೆ. 'ನಾವು ನೂತ [illegible] ಕಲಿಯಾರೆ?' ಎಂದು ಅವರಿಗೆ ಹೇಳಿದೆ. ಅವರು ನಾಲ್ಕು ಮೊಳ [illegible] ಮತ್ತು [illegible] ಅಗಲದ ಒಂದು ಬಟ್ಟೆ ತಯಾ[illegible]. ಅದನ್ನು ಒಬ್ಬ ಹಿಂದುಳಿದ ಜಾತಿಯ ಭಕ್ತನು ಬೆಳಗಾಗುವುದರೊಳಗೆ ಸಿದ್ಧಮಾಡಿದ್ದನು. ಹೊಸೆಳೆ ಮಾಡಿದ್ದರಿಂದ ಅಷ್ಟು ಬೇಗ [illegible] ಸಾಧ್ಯವಾಯಿತು. ಈ ಹೊಸಬರು [illegible] ಮೊದಲ ನೂಲೆಳೆ ಕೂಡ ಅವನ್ಯ[illegible].

[೧೧ನೆಯ ಪುಟಕ್ಕೆ]

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

[illegible] ಭವನ, ಹೊಸದಿಲ್ಲಿ, [illegible]

ಸುರಂಗಾವಿನ ಒಂದು ಹಳ್ಳಿಯ ಸಂದರ್ಶನ

[illegible] ಒಂದು ಚಿಕ್ಕ ಸ್ಟೇಶನ್ನಿಗೆ ಬಂದು ನಿಂತಿತ್ತು. ಒಬ್ಬ ಹಿಂದುವು ಬಂದು ಡಬ್ಬಿಯಲ್ಲಿ ಕತ್ತಲು. ಹೊರಟಿದ್ದ ಅದೇ ನಿರಾಶ್ರಿತ ಮುಸಲ್ಮಾನನ ಡಬ್ಬಿಯುಂಬುವನ್ನರಿಯದೆ ಅವನು [illegible] ಒಬ್ಬ ಮುಸಲ್ಮಾನನ [illegible] ಯಿಂದ ಇರಿದು ಕೊಂದುಬಿಟ್ಟನು. ಹಿಂದುವನ್ನಿರಿದದ್ದು ಅದೇಕೋ ಹಿತವೆನಿಸಿದರೂ ಮನಸ್ಸು ಮತ್ತಷ್ಟು ವಿಷ್ಟಲವಾಯಿತು, ಗಾಬರಿಗೊಂಡಿತು. ಇವೆರಡರ ಅನುಭವದಿಂದ ತನ್ನ ಮಡದಿ ಮಕ್ಕಳ ಅನಿಶ್ಚಿತ ಜೀವನಕ್ಕೆ ಅಂಜಿದನು. ಕಿಟಕಿಯನ್ನು ಮುಚ್ಚಿ ಹಾಗೆಯೇ ಕುಳಿತುಬಿಟ್ಟನು. ಗಾಡಿ ಮುನ್ನಡೆಯುತ್ತಿರಲು ತಲೆಗೆ ಸ್ವಲ್ಪ ಮಟ್ಟಿಗೆ ತಣ್ಣನೆನಿಸಿತು. ಮುತುವನು ಮುಂದೊತ್ತಿದಂತೆ ಮನಸ್ಸು ಸ್ವಲ್ಪ ಹಗುರವಾಯಿತು. [illegible] ಅವನನ್ನು [illegible] ಪ್ರಶ್ನೆ ಕೇಳುತ್ತಿದ್ದರೆ ಸಮರ್ಪಕ ಉತ್ತರ ಕೊಡುವಷ್ಟು ಇವನ ಮನಸ್ಸು ಹಿಡಿತದಲ್ಲಿರಲಿಲ್ಲ. ಮಗುವು ಮಲಗಿತ್ತು. ಆ ಮಗುವನ್ನೊಮ್ಮೆ ದಿಟ್ಟಿಸಿದನು. ಆ ಮೇಲೆ ತನ್ನ ಮುಖದ ಮೇಲೆ ಮುಸುಕನ್ನು ಹಾಕಿಕೊಂಡು ಒರಗಿದನು, ಹಾಗೆಯೇ ಒಂದು ಸ್ವಲ್ಪ ನಿದ್ರೆಯ ಜಂಪು ಬರುವಷ್ಟರಲ್ಲಿ ಬಾಗಿಲು ಬಡಿದ ಶಬ್ದವಾಯಿತು. ಅದೇಕೋ ಗಾಬರಿಯೆನಿಸಿತು. ಮನಸ್ಸನ್ನು ಗಟ್ಟಿಮಾಡಿ 'ಆಗೇ ಜಾವೋ' ಎಂದಿಷ್ಟು ಕೂಡ ಅವನ ಗಂಟಲಿಂದ ಗಟ್ಟಿಯಾಗಿ ಹೊರಬರಲಿಲ್ಲ. ಬಾಯಿ ಒಣಗಿದಂತಾಯಿತು. ಅಷ್ಟರಲ್ಲಿ 'ಭಾಯಿ ಬಚಾವೊ ದರ್ವಾಜಾ ಖೋಲೋ' ಎಂಬುದು ಕೇಳಿತು. ಧೈರ್ಯದಿಂದ ಬಾಗಿಲ ತೆರೆಯುವ ಸಾಹಸವಾಗದು. ಗಾಡಿ ಓಡುತ್ತಿದ್ದಾಗ ಯಾರಾದರೂ ಬಂದು ಬಾಗಿಲ ತೆರೆ ಯೆಂದರೆ ಗಾಬರಿಯಾಗಬೇಡವೇ? ಗಾಡಿ ಹಾಗೇ ಓಡುತ್ತಿದ್ದಿತು. ಅಂತೂ ಬಾಗಿಲ ತೆಗೆದನು. ಒಬ್ಬ ಮನುಷ್ಯನು ಅವಸರದಿಂದ ಒಳಸೇರಿದನು.

ಆ ಒಳಸೇರಿದ ಮನುಷ್ಯನು ಹೋದ ಜೀವ ತಿರುಗಿದವನಂತೆ ದೀರ್ಘಶ್ವಾಸವನ್ನು ಬಿಟ್ಟನು. ಹಾಯೆಂದು ಕುಳಿತನು. ನಿನಗೆ ಒಳ್ಳೆಯದಾಗಲಿ. ಅಲ್ಲಾನು ನಿನ್ನನ್ನು ರಕ್ಷಿಸಲಿ ಎಂದು ಹರಸಿದನು. ಕೆಲವು ವೇಳೆ ಇಬ್ಬರಿಗೂ ಏನು ಮಾತಾಡಬೇಕೆಂಬುದೇ ತಿಳಿಯದೆ, ಹಾಗೇ ಕುಳಿತರು. ಆ ಮೇಲೆ ರಹೀಮನೇ—ಆ ಹೊಸಬನಿಗೆ ನೀನಾರು ಎಲ್ಲಿಗೆ ಹೊರಟಿರುವೆ, ಇಷ್ಟೇಕೆ ಗಾಬರಿ ಎಂದು ಪ್ರಶ್ನೆ ಹಾಕಿದನು. ಆಗದಕ್ಕೆ ಅವನು ಮೊದಲು ನಿನ್ನ ಕಥೆಯನ್ನಷ್ಟು ಹೇಳು. ಆ ಮೇಲೆ ನನ್ನ ವಿಷಯ ಕೇಳುವಿಯಂತೆ ಎಂದು ಮಾರುತ್ತರ ಕೊಟ್ಟನು. ರಹೀಮನು ಸ್ವಲ್ಪದರಲ್ಲಿ ತನ್ನ ಕಥೆಯನ್ನು ಹೇಳಿದನು. ಆ ಮೇಲೆ ಹೊಸಬನು ತನ್ನ ಕಥೆಯನ್ನು ಹೇಳಲು ಪ್ರಾರಂಭಿಸಿದನು. ಅವನು ತನ್ನ ಕಥೆ ಹೇಳುವ ಪೂರ್ವದಲ್ಲಿ ರಹೀಮನನ್ನುದ್ದೇಶಿಸಿ, ಮಿಯ್ಯಾ ನನ್ನ ಕತೆಕೇಳುವ ಮೊದಲು ನಿನ [illegible] ಕೊಡುತ್ತೇನೆ. ನೀನೇನೋ ತರುಣ, ಉತ್ಸಾಹಿ, ನವರಕ್ತ, ನವಶಕ್ತಿ, ನಿನ್ನಲ್ಲಿ [illegible] ಇದನ್ನು ಮತ್ತು ನಿನ್ನ ಮಡದಿ ಮಕ್ಕಳನ್ನು [illegible] ಮಾಡಬೇಡ. [illegible] ನನ್ನ ಸಂತತಿಯನ್ನು [illegible] ಅಭಿಮಾನಕ್ಕೆ [illegible] ಹೋಗಿ ಪ್ರವಾಹಕ್ಕೆ ಬಿದ್ದು ಈ ಸ್ಥಿತಿಗೆ ಬಂದಿದ್ದೇನೆ. ಇನ್ನಾದರೂ ತಿಳಿದುಕೊಂಡು ಸುಮ್ಮನೆ ನಿಮ್ಮ ಊರಿಗೆ ಕಾಲ್ತೆಗೆಯುವನು ಉತ್ತಮ.

ನಾನಾದರೂ ಮೊದಲು ನಿನ್ನಂತೆ ಲೀಗಿನ ಸಲುವಾಗಿ ಪ್ರಾಣವನ್ನು ಕೂಡ ಅರ್ಪಿಸಲು ಸಿದ್ಧನಾಗಿ ಪಾಕಿಸ್ತಾನ ಮೃಗಜಲಕ್ಕೆ ಮರುಳಾಗಿ ಅತ್ತ ಓಡಿದೆ. ಕರಾಚಿಗೆ ನಾನೊಬ್ಬನಲ್ಲದೆ ನನ್ನ ಕೂಡ ನಾಕೆಂಟುಮಂದಿ ಹೊರಟಿದ್ದೆವು. ಅಲ್ಲಿ ಹೋದರೆ ಇಳಿಕೊಳ್ಳಲು ಸ್ಥಳವಿಲ್ಲ—ಹೊಟ್ಟೆಗೆ ಗತಿ ಇಲ್ಲ. ಮೇಲೆ ನಾವು ಮುಸಲ್ಮಾನರಿದ್ದರೂ ನಮ್ಮನ್ನು ಯಾರಿಗೂ ಭದ್ರತೆ ಇಲ್ಲ. ನಮ್ಮ ಬವಣೆ ಅಲ್ಲಾನೇ ಬಲ್ಲ! ಎಲ್ಲಿ ನೋಡಿದರೂ ಹೇಣವೇ [illegible] ಯಾರು ಯಾರನ್ನು ಏನು ಮಾಡುತ್ತಾರೆಂಬ ಭರವಸೆ ಇಲ್ಲ. ಅಲ್ಲಾಗುವ ಅನ್ಯಾಯಗಳ ಲೆಕ್ಕವೇ ಇಲ್ಲ. ಪಾಕಿಸ್ತಾನವನ್ನು ಕಂಡು ಅದು ಪಾಕಿಸ್ತಾನವಲ್ಲ ಯಾಕಿಸ್ತಾನ, ಕಬರಸ್ತಾನ! ಅದು ಹಿಂದುಗಳ ನಾಡಿಗಿಂತಲೂ ಕಡೆ ಎಂದು ತಿಳಿದಿದ್ದೆ. ಆದರೆ ಅಲ್ಲಿಯ ಮುಸಲ್ಮಾನರು ಇತರ ಕಡೆಯಿಂದ ಬಂದವರನ್ನು ಬಹು ಹೀನಾಗಿ ಕಾಣುತ್ತಾರೆ. [illegible] ರಕ್ತ ಸುರಿಸಿ ಸಂಪಾದಿಸಿದ್ದನ್ನು [illegible] ಬಂದವರೆಂದು ಹೀಯಾಳಿಸುತ್ತಾರೆ. ಹೀಗೆ ಒಂದು ಪ್ರಸಂಗ ಬಂದು ಅಲ್ಲಿಯ [illegible] ನಮ್ಮಲ್ಲಿಯವನೊಬ್ಬನನ್ನು ಇರಿದು ಕೊಂದುಬಿಟ್ಟನು. ಆದರೆ ಅದಕ್ಕೆ ಯಾರಿಂದಲೂ ಏನೂ ವಿಚಾರಣೆ ಇಲ್ಲದೆ ಎಳೆದೆಸೆದು ಬಿಟ್ಟರು. ಇಷ್ಟೆಲ್ಲ ಇದೆ ಪಾಕಿಸ್ತಾನದಲ್ಲಿ. ಅದಕ್ಕಾಗಿ ನಾಚಿಕೆಯೂ ಬೇಸತ್ತೆ. ಹಿಂದುಸ್ತಾನದಲ್ಲಿಯ ಹಿಂದುಗಳಲ್ಲಿ ಇನ್ನೂ ನಾವು ನಮ್ಮ ಭ್ರಾತೃ ಭಾವ ಕಾಣುತ್ತೇವೆ. ಅವರಲ್ಲಿ ಅಭಿಮಾನವಿದೆ. ಆದರೆ ಪಾಕಿಸ್ತಾನದ ಮುಸಲ್ಮಾನರಲ್ಲಿ ಇದು ಇಲ್ಲದ ಕಾರಣ ಪಾಕಿಸ್ತಾನದಲ್ಲಿ ಬದುಕಿರುವದಕ್ಕಿಂತ ಹಿಂದುಸ್ತಾನದಲ್ಲಿ ಸಾಯುವದೇ ಮೇಲೆಂದು ತಿರುಗಿ ಹೊರಟಿದ್ದೇನೆ. ಇದೇ ಈಗ ಕೂಡ ನೀನು ಬೇಗ ಬಾಗಿಲ ತೆರೆಯದಿದ್ದರೆ ನಾನು ಇಷ್ಟು ಹೊತ್ತಿಗೆ ಅಲ್ಲಾನಲ್ಲಿ ಸೇರುತ್ತಿದ್ದೆ. ಅಂತೂ ನೀನು ನನ್ನನ್ನು ಬದುಕಿಸಿದೆ. ಅದಕ್ಕಾಗಿ ನಿನಗೆ ಬೇಡಿಕೊಳ್ಳುತ್ತೇನೆ. ಇವರನ್ನೆಲ್ಲ ಬಲಿ ಕೊಡಬೇಡ. ತಿರುಗಿ ಊರಿಗೆ ನಡೆ ಎಂದು ಬಹು ಪರಿ ಬೇಡಿಕೊಂಡನು.


ಅವನ ಹೇಳಿಕೆಯನ್ನು ಕೇಳುತ್ತಿದ್ದಂತೆ ರಹೀಮನಿಗೆ ಕ್ರೋಧ ಉಕ್ಕಿತು. ಇವನಾವನೋ ಲೀಗಿನ ಅಪಪ್ರಚಾರಕನೆಂದು ತಿಳಿದುಕೊಂಡನು. ಕ್ರೋಧಾವೇಶದಿಂದ ಇವನ ಲೀಗ ಅಭಿಮಾನವು ಮಿಡಿನಾಗರ ಹಾವಿನಂತೆ ಸಿಡಿದೆದ್ದಿತು. ಆ ಆವೇಶದ ಭರದಲ್ಲಿ ಹಿಂದಾದ ಅನುಭವ ಅಂಜಿಕೆಗಳು ಮಾಯವಾದವು. ಗಾಡಿಯು ವೇಗವಾಗಿ ಸಾಗುತ್ತಿತ್ತು. ರಹೀಮನ ಉದ್ವೇಗಗೊಂಡ ಮನಸ್ಸು ಪ್ರತೀಕಾರದತ್ತ ಮುಂದೋಡುತ್ತಿದ್ದಿತು. ಅತ್ತಿತ್ತ ನೋಡಿದನು. ನಿರಾಯುಧನಾದ ತಾನು ಹೇಗೆ ಕಾರ್ಯಪ್ರವೃತ್ತನಾಗಬೇಕೆಂಬುದೇ ತಿಳಿಯದಾಗಿತ್ತು. ಕತ್ತುಹಿಚುಕಿ ಗಾಡಿಯಿಂದ ಎತ್ತಿ ಆಚೆಗೆ ಒಗೆಯಲೇ ಎಂದು ಎಷ್ಟೋ ಯೋಚಿಸಿದನು. ಜಿನ್ನಾರ ಆದೇಶವನ್ನು ಸ್ಮರಿಸಿದನು. ತನ್ನ ಕಾರ್ಯವನ್ನು ನೆನೆದನು. ಅನನುಭವಿಕನಾದ ಇವನು ಅನುಮಾನಿಸುತ್ತಿರಲು ಗಾಡಿ ಗಕ್ಕನೆನಿಂತಿತು. 'ಅಚ್ಛಾ ಭಾಯಿ ಸಲಾಂ' ಎಂದು ಅವನು ಇಳಿದೇಬಿಟ್ಟನು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ಕೈಹಿಚುಕಿಕೊಂಡನು. ಮತ್ತೆ ಗಾಡಿ ಹೊರಟಿತು.... ಎಚ್ಚರಾಗುವದರಲ್ಲಿ ಕರಾಚಿ ಸ್ಟೇಶನ್ ಬಂದಿದ್ದಿತು.

ಅಂತೂ ತಾನು ಬಯಸಿದ ಕರಾಚಿ ಪಾಕಿಸ್ತಾನದ ಪಟ್ಟದೂರು. ಕರಾಚಿಗೆ ಬಂದು ತಲುಪಿದನು. ಅಲ್ಲಿ ರೇಲ್ವೆ ಪ್ಲಾಟಫಾರ್ಮದ ಕಟ್ಟೆಯ ಮೇಲೆ ಗಂಟು ಮೂಟೆಗಳನ್ನಿಳಿಸಿಕೊಂಡು ಲೀಗಲೀಡರನ ಉಡುಪಿನಲ್ಲಿರುವ ಅಚ್ಚ ಹಾಸದಿಂದ ನಿಂತಿರುವ ತನ್ನನ್ನು ಯಾರಾದರೂ ಕಂಡರೆ ಅಭಿಮಾನದಿಂದ ಬರಮಾಡಿಕೊಳ್ಳಬಹುದೆಂದು ಎಣಿಸಿದ್ದನು. ಆದರೆ ಅವನ ಬಯಕೆ ಬಯಲಾಯಿತು. ಅಂತೂ ಅತ್ತಿತ್ತ ನೋಡಿದನು, ಅವರಿವರನ್ನು ಕೇಳಿದನು. ಆದರೆ ಅವನಿಗೇನು ಬೇಕು, ಅವೆಲ್ಲ ವಿಷಯದ ಮಾಹಿತಿ ಸಿಕ್ಕಲಿಲ್ಲ. ಕೆಲವರು ಇವನ ಸಮೀಪಕ್ಕೆ ಬರುತ್ತಿರಲಿಲ್ಲ. ಕೆಲವರು ಮಾತನಾಡಿಸಿದರು, ಒಗವರು ಹಾಗೇ ಹೋಗುತ್ತಿದ್ದರು, ಮತ್ತೆ ಕೆಲವರು ಅರ್ಥಮರ್ಥ ಏನೇನೋ ಹೇಳುತ್ತಿದ್ದರು. ಅಂತು ಅಪರಿಚಿತ ದೇಶ—ಅಪರಿಚಿತ ಜನ ಏನು ಮಾಡಲು ದಿಕ್ಕು ತೋಚದೆ ನಿಂತುಕೊಂಡನು. ಮೇಲಾಗಿ ಇವನ ಸಂಗಡಿಗರೊಬ್ಬರಿಬ್ಬರು ಇವನ ಗೊಡವೆಯನ್ನು ಬಿಟ್ಟು ತಮ್ಮ ತಮ್ಮ ಪಾಡಿಗೆ ಹೊರಡುವವರಿದ್ದರು. ಅಷ್ಟರಲ್ಲಿ ರಹೀಮನೇ ಅವರನ್ನು ತಡೆದು ನಾವಾದರೂ ಒಟ್ಟಿಗೆ ಒಂದೇ ಕಡೆ ಉಳಿದುಕೊಳ್ಳುವಾ ಎಂದು ಹೇಳಿದ್ದರಿಂದ ಅವರು ಭಾಯಿ, ನೀನು ಸಂಸಾರಿಕ ನಾವು ಒಂಟಿಗರು, ನಿಮ್ಮ ಸಂಗಡ ಹೇಗೆ ಇರಲು ಸಾಧ್ಯ? ಎಂದು ಕೇಳಲು ರಹೀಮನು ಈ ಅಪರಿಚಿತ ದೇಶದಲ್ಲಿ ನಾವಲ್ಲದೆ ಒಬ್ಬರಿಗೊಬ್ಬರು ಇನ್ನಾರು ನಮಗೆ ಸಹಾಯಕರು ಎಂದು ಹೇಳಲು ಅದು ಒಳ್ಳೇದೇ ಎಂದು ಎಲ್ಲರೂ ಒಪ್ಪಿಕೊಂಡರು. ಇನ್ನು ತಾವು ತಂಗಲು ಎಲ್ಲಿಯಾದರೂ ಸ್ಥಳ ಪಡೆಯುವ ವರೆಗೆ ಇವರನ್ನೆಲ್ಲ ಎಲ್ಲಿ ಬಿಡಬೇಕು ಎಂದು ಯೋಚಿಸುತ್ತಿರಲು ಹತ್ತಿರದಲ್ಲಿ ಒಂದು ಸಣ್ಣ ಸಂಸಾರವನ್ನು ಕಂಡು ಅವರಲ್ಲಿ ಹೆಂಡತಿ ಮಗುವನ್ನು ಬಿಟ್ಟನು. ಅಲ್ಲದೆ ಅವರ ಹೇಳಿಕೆಯಂತೆ ರಕ್ಷಣೆಗಾಗಿ ರಹೀಮನು ಉಳಿದುಕೊಂಡು ಇನ್ನೀರ್ವರು ಉಳಿವ ವಿಷಯ ಎಲ್ಲ ಪರಿಚಯ ಪಡೆಯಲು ಊರಲ್ಲಿ ಹೊರಟರು. ಅಲ್ಲಲ್ಲಿ ಸುತ್ತಾಡಿ ಅಂತು ಒಂದು ಚಿಕ್ಕಮನೆ ಬಾಡಿಗೆಗೆ ಪಡೆದರು. ದಿನಗಳುರುಳ ಹತ್ತಿದವು.

[illegible] ಮಾಡಲ್ಪಟ್ಟರು. ಅದರಲ್ಲಿಯೇ ಚಿಕ್ಕ ಡಬ್ಬಿಯಲ್ಲಿ ತಾನೊಬ್ಬನೇ ತನ್ನ ಪರಿವಾರದೊಂದಿಗೆ ಏರಿದನು. ಗಾಡಿ ಮುನ್ನಡೆಯಿತು.

ಅಂತೂ ಕರಾಚಿ ಮುಟ್ಟಲು ಇನ್ನೂ ಕೆಲವು ಸ್ಟೇಷನ್‌ಗಳಿರಬಹುದು. ಅಲ್ಲಿ ಒಂದು [illegible] ಹತ್ತಿತು. ಅವರ ಗಾಡಿ ಹೋಗಿ [illegible] ಅತ್ತ ಒಳ್ಳಿ [illegible] ಗಾಡಿಯು [illegible] ಇವನು ಕಿಟಕಿಯಲ್ಲಿ ತಲೆ ಹಾಕಿ ನಿಂತಿರಲು ಇವನು ನಿಂತಲ್ಲಿಯೇ ಒಂದು ಡಬ್ಬಿ ಇದ್ದಿತು. ಅವನಿಗೆ ಅದೇನೋ ಭಯಂಕರ ಕಂಡಂತಾಗಿ ಕಣ್ಣು [illegible] ಮುಚ್ಚಿದನು. ಕಿಟಕಿಯಲ್ಲಿ ತಲೆ ಹಾಕಿ [illegible] ಕೇಳಿ ಬೀಳಲಿಲ್ಲ. ಬಾಗಿಲಲ್ಲಿ ನಿಂತಿ [illegible] ಸಂಭವ. ಅಷ್ಟರಲ್ಲಿಯೇ ಧೈರ್ಯ ತಂದುಕೊಂಡು ಮತ್ತೆ ನೋಡಲು ಒಬ್ಬ ಹೆಂಗಸು, ಮತ್ತೆ ಒಬ್ಬ ಗಂಡಸು, ಅಲ್ಲದೆ ಎರಡು ಚಿಕ್ಕಮಕ್ಕಳ ಮೃತದೇಹ! ಅವರು ಪಾಕಿಸ್ತಾನಕ್ಕೆ [illegible] ನಡುವೆಯೇ ಅವರ ಕೊಲೆಯಾಗಿ [illegible] ರಕ್ತವು ಮಡ್ಡಿ ಮಾನಸ [illegible] ಬಿದ್ದಂತಿತ್ತು. ಇವನು ಈ ಪರಿ ಎಂದೂ ಕಂಡಿರಲಿಲ್ಲ. ಸ್ಮೃತಿ ತಪ್ಪಿದಂತಾಯಿತು—ಹೃದಯ ಬಡಿಯಿತು. ಕಿಟಕಿಯನ್ನು ಬಂದುಮಾಡಿ ಹಾಗೆಯೇ [illegible] ಒರಗಿದನು. ಒಮ್ಮೆ ತನ್ನ ಹೆಂಡತಿ ಮಗುವನ್ನು ಕರುಣಾಪೂರಿತ ದೃಷ್ಟಿಯಿಂದ ನೋಡಿದನು. ಕಣ್ಣುಗಳು ತಾವಾಗಿಯೇ ಮುಚ್ಚಿದವು. ಆದರೆ ಕಣ್ದೆದುರಿಗೆ ಆ ಭಯಾನಕ ದೃಶ್ಯ. ತನ್ನ ಹೆಂಡತಿ ಮಗುವನ್ನೇ ಕೊಲ್ಲುತ್ತಿರುವಂತೆ ಆ ಭಾಸ. ಗಾಬರಿಯಿಂದ ಕಣ್ಣು ತೆರೆದನು. ಎದುರಿಗೆ ಸುಖವಾಗಿ ನಿದ್ರೆಹೋಗಿದ್ದ ತನ್ನವರನ್ನು ಕಂಡನು. ಆದರೂ ಧೈರ್ಯ ಸಾಲದು ಆ ಸ್ಥಿತಿ ತನಗೂ ಬಂದರೆ.... ಬಂದರೆ....

[illegible]





[illegible]

ವೃಷಭ

[illegible] ಕಾ. [illegible] ದಿನಗಳು ಒಳ್ಳೆಯವು.

ಮಿಥುನ

[illegible]

ಕರ್ಕ

[illegible] ಉದ್ಯೋಗದಲ್ಲಿ ಉತ್ತಮ. [illegible] ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ [illegible] ಪ್ರವಾಸವೂ [illegible]

ಸಿಂಹ

[illegible]

ಕನ್ಯಾ

ಪ್ರಕೃತಿಯು [illegible]

[illegible] ಕಾ. [illegible] ಈ ದಿನಗಳು ಒಳ್ಳೆಯವು.

ವೃಶ್ಚಿಕ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ಒಳ್ಳೆ ಉತ್ತಮ. ಹೆಂಡತಿ ಮತ್ತು ಮಕ್ಕಳಿಂದ ಅತ್ಯಂತ ಸಮಾಧಾನದಾಯಕ ಘಟನೆಗಳು. ಉದ್ಯೋಗದಲ್ಲಿ ಸುಖ ಇಳಿಮುಖ ಕಂಡರೂ ಪ್ರತಿಷ್ಠೆ ಮಿಗುವದಲ್ಲದೆ ಲಾಭವು ಬಯಸಿದ ದ್ದಕ್ಕಿಂತ ಹೆಚ್ಚಿಗೆ ಸಿಗುವದು. ವಾದದಲ್ಲಿಯೂ [illegible] ಉತ್ತಮ [illegible] ಸಂಭವನೆ. [illegible] ಮತ್ತು [illegible] ಕಾ. [illegible] ದಿನಗಳು ಒಳಿತು.

ಧನು

ಪ್ರಕೃತಿ ಸಾಧಾರಣವೇ. ಆದರೆ [illegible] ಉತ್ತಮವಾಗಿದೆ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಚೆನ್ನಾಗಿರುವದು. [illegible] ಹೆಚ್ಚಾಗುವ ಸಂಭವ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ [illegible] ಸಂಭವವಿದೆ. ಪ್ರವಾಸಾದಿ ಕಾರ್ಯಗಳು ಒಳ್ಳೆಯವು. [illegible] ಹೆಚ್ಚು ಚೆನ್ನಾಗಿದೆ. ಕಾ. ೫, ೭, ೧೦, ೧೧, ಈ ದಿನಗಳು ಒಳಿತು.

ಮಕರ

ಪ್ರಕೃತಿಯು ಸಾಧಾರಣವೇ. ಹೆಂಡತಿಗೂ ಮತ್ತೆ ಮತ್ತೆ [illegible]. ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೇ. ಉದ್ಯೋಗದಲ್ಲಿ ಪ್ರಗತಿ ಚನ್ನಾಗಿದೆ. [illegible] ಆದರೆ [illegible] ದಲ್ಲಿ ಮತ್ತು ಸ್ಪರ್ಧೆಯಲ್ಲಿ ತಿಳಿದುಕೊಂಡುದಕ್ಕಿಂತ ಹೆಚ್ಚು ಬಲ. ಪ್ರವಾಸ [illegible] ಗಳಿಗಿಂತ ಹೆಚ್ಚು ಸೆಟ್ಟಿಗೆ. ಪ್ರವಾಸ [illegible] ಕಾ. [illegible] ದಿನಗಳು ಒಳಿತು.

ಕುಂಭ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ಸಾಧಾರಣವೇ. ಹೆಂಡತಿ ಮಕ್ಕಳೊಡನೆ ಮೇಲಿಂದ ಮೇಲೆ [illegible]. ಉದ್ಯೋಗದಲ್ಲಿ ಪ್ರಗತಿ ಕಂಡು ಬರದಿದ್ದರೂ ಪ್ರತಿಷ್ಠೆಯೂ ಲಾಭವೂ ಉತ್ತಮವಾಗಿದೆ. ವಾದದಲ್ಲಿ ಸ್ಪರ್ಧೆಯಲ್ಲಿ ಒಳ್ಳೆ ಅನು [illegible] ಉತ್ತಮ. [illegible] ಕೊಂಡರೆಯಿಂದ ಯಶ. ಕಾ. [illegible] ಈ ದಿನಗಳು ಒಳಿತಾಗಿವೆ.

[illegible]

...ನೋಡಿ ಸತ್ತುಬಂದಿತು. [illegible] ಜನ ಜಾಸ್ತಿ ನೆರೆಯಿತು. [illegible] ದುರಂತ ಕತೆಯು ಬಣವಿಯನ್ನು ಸುಡುವ ಬೆಂಕಿಯಂತೆ ಎಲ್ಲರ ಹೃದಯವನ್ನು ಸುಡಹತ್ತಿತು. ಎಲ್ಲರೂ ಕಣ್ಣೀರು ಹಾಕಿದರು, ಎಲ್ಲರೂ ಸಂತೈಸಿದರು. 'ನೀ ಬದುಕಿ ಬಂದೆ ಹೋದದ್ದು ಹೋಯಿತು, ಆದದ್ದು ಆಯಿತು, ದೈವವಿದ್ದರೆ ಮತ್ತೆ ಹೆಂಡತಿ ಮಗುವನ್ನು ಕಾಣಬಲ್ಲೆ' ಎಂದು ಸಮಾಧಾನ ಮಾಡಿದರು. ಎಲ್ಲರಿಗೂ ಮುಖ ತೋರಲಾರದೆ [illegible] ಕುಳಿತ್ತಿದ್ದನು. ಅದರ [illegible] ಹೃದಯಗಳು [illegible] ಭಾಗಿಗಳಾಗಿ [illegible] ಅವನ [illegible] ಭಾರ ಕಡಿಮೆಯಾಯಿತು. ಮತ್ತೆ [illegible] ಅನಂದವಾಯಿತು. ಮತ್ತೆ ತನ್ನ [illegible] ಮಡಿಲಲ್ಲಿ ಮಲಗಿದಷ್ಟು ಸಮಾಧಾನವಾಯಿತು. ಅದೇನೋ ಒಂದು ವಿಚಿತ್ರ ಸುಖವನ್ನು ಅನುಭವಿಸಿದನು. ಅದನ್ನು ಅವನೇ ಬಲ್ಲ. [illegible] ಸುಖದ [illegible] ಜೀವನದಲ್ಲಿ ನನ್ನವರು ತನ್ನವರೆಂದು ತನಗಾಗಿ ತನ್ನ ನೋವಿಗಾಗಿ ಮರುಗುವವನ್ನು [illegible] ಆ ಜನ ಯಾವ ಜಾತಿಯವರಾದರೇನು? [illegible] ನೋವಿಗೆ ಮರುಗುವ ಗುಣ ಅದು ನಮ್ಮ ಪವಿತ್ರ

ಪಾಕಿಸ್ತಾನ

[illegible] ಪ್ರಜಾಪ್ರಭುತ್ವ ವಿದೆಯೆಂದೂ [illegible] ಪಾಕಿಸ್ತಾನವನ್ನು ವಿಶೇಷಾಜ್ಞೆಗಳೇ ಆಳುತ್ತಿವೆ. ಶಾಸನ ಸಭೆಗಳಿಂದೂ [illegible] ಘಟನೆ ಬೇಕೆಂದು ಹೇಳುತ್ತಿದ್ದರೂ ಪಾಕಿಸ್ತಾನದ ಘಟನಾ ಸಮಿತಿಯು ಗಾಢನಿದ್ರೆಯಲ್ಲಿದೆ ಎಂದು ಪಾಕಿಸ್ತಾನದ ಮುಖಂಡರು [illegible] ಹಲವೆಬ್ಬಿಸಿ ಇನ್ನೊಂದು ಯುದ್ಧವ [illegible] ಜನರನ್ನು [illegible] ತ್ತಿದ್ದಾರೆ ಇತ್ಯಾದಿ.

ಪಾಕಿಸ್ತಾನವು ಯಾಕಿಸ್ತಾನ ಅಂದರೆ ಅರಾಜಕ ದೇಶವಾಗಿದೆಯೆಂದು [illegible] ದಿಂದ ಬಂದ ಓರ್ವ ಖುದಾಯಿ ಖಿದ್ಮದ್ಗಾರರು ಸುದ್ದಿಗಾರನಿಗೆ ಹೇಳಿದರು. ಕಾಶ್ಮೀರ ಮತ್ತು ಪೂರ್ವ ಪಂಜಾಬಗಳ ಮೇಲೆ ದಾಳಿಮಾಡಲು ಬಂದ ದಾಳಿಗಾರರಿಂದ [illegible] ರುವದಾಗಿಯೂ ತಾವು ಮುಜಾಹಿದ ಅಂದರೆ ಪವಿತ್ರಯೋಧರೆಂದು ಹೇಳಿಕೊಳ್ಳುತ್ತ ಇವರು ಸಿಕ್ಕಾಬಟ್ಟೆ ಸುಲಿಗೆ ಮಾಡುತ್ತಾರೆಂದೂ ಅವರು ಹೇಳಿದರು.

ಅಲ್ಪಸಂಖ್ಯಾಕರ ಬಗ್ಗೆ ಪಾಕಿಸ್ತಾನದ ಧೋರಣವೇನು ಎಂಬುದನ್ನು ಅರಿಯಲು [illegible] ಹಿಂದಿದ ಅರ್ಥಸಚಿವ ಮೊಹರ ಚಂದ ಖನ್ನಾ ಇವರು ಪಾಕಿಸ್ತಾನ ಮುಖ್ಯಮಂತ್ರಿ. ಲಿಯಾಕತ ಅಲಿಖಾನರನ್ನು ಕಂಡರಾಗಿಯೂ ಅಲ್ಪಸಂಖ್ಯಾಕರು ಗಡಿನಾಡಿಗೆ ತಿರುಗುವಂತೆ ಮಾಡಬೇಕೆಂದು ಪಾಕಿಸ್ತಾನ ಸರಕಾರದ ನಿಶ್ಚಿತ ಧೋರಣವಿರುವದಾಗಿ ಲಿಯಾಕತರ ಹೇಳಿಕೆಯಿಂದ ತಿಳಿಯುತ್ತದೆ.

ಪಾಕಿಸ್ತಾನದಲ್ಲಿಯ [illegible] ಪರಿಸ್ಥಿತಿ [illegible] ಗಿದ್ದರಿಂದ ಹಿಂದುಸ್ತಾನಕ್ಕೆ [illegible] ಜನ [illegible] ಗೋದಿಯನ್ನು [illegible] ಪಾಕಿಸ್ತಾನ ಬೇಡುತ್ತಿದೆ. ಪೂರ್ವ ಬಂಗಾಲದಲ್ಲಿ ೩, ೩೦, ೦೦೦ ಟನ್ ಅಕ್ಕಿ ಕೊರತೆ [illegible] ಗಿದೆ.

ಪಾಕಿಸ್ತಾನದ [illegible] ಸೇನಾಪತಿಗಳಾದ ಫ್ರಾಂಕ ಮ್ಯಾಸರ್ವಿಯವರು ಜಾನೇವರಿಯಿಂದ ತಮ್ಮ ಸ್ಥಗವನ್ನು ಮೇ. ಜ. ಸರ್. ಫ್ರಾನ್ಸಿಸ ಟಕ್ಕರರಿಗೆ ಬಿಟ್ಟುಕೊಡುವರಾಗಿ ಪಾಕಿಸ್ತಾನ ಟಾಯಿಮ್ಸ ವರದಿಮಾಡುತ್ತದೆ.

ಹೈದರಾಬಾದ

ಹಿಂದೀ ನಾಣ್ಯಗಳ [illegible] ಹೈದರಾಬಾದ ಸರಕಾರವು ನಿರ್ಬಂಧಹೆ [illegible] ನಾಣ್ಯಗಳ [illegible] ಹಿಂದೀ ನಾಣ್ಯದಲ್ಲಿ [illegible] ಗಿದೆ. ವ್ಯಾಪಾರಸ್ಥರು ಹಿಂದೀ ನಾಣ್ಯ [illegible] ದಾಗಿದ್ದಾರೆ ಬ್ಯಾಂಕಗಳಲ್ಲಿ ಜನರು ವಿನಿಮಯ

ಭರತಖಂಡದಲ್ಲಿ ಅನಂತವಾಗಿದೆ. [illegible] ಭಾರತ ಮಾತೆ ಧನ್ಯೆ. ಅದಕ್ಕಾಗಿ ತಾನು ತನ್ನವರಿಗಾಗಿ [illegible] ಅನುಭವಾನ್ವಿತ "ಸತ್ತರ ಸಾಯಿ, ಬದುಕಿದರೆ ಬದುಕು ಇರು ಈ ಭಾರತನನಾಡಿನ ಉಡಿ ಯಲ್ಲಿ" ಎಂದಿತು ಅವನ ಅಂತರ್ವಾಣಿ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟ ಪರವಾಗಿ ಪ. ವಾ. ಜೋಷಿಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ಬೆಲೆ ಎರಡು ಆಣೆ

ಕರ್ಮವೀರ

ಮಹಾತ್ಮರ ಮನೋರಂಗ
ಅನುವಾದಕರು:
ಶ್ರೀ. ರಂಗರಾವ ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
೩೦೮ ಪುಟ, ಬೆಲೆ: ೪-೮-೦
ಸಾಹಿತ್ಯ ಭಾಂಡಾರ ಹುಬ್ಬಳ್ಳಿ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ (H R [illegible])

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೧೨—೧—೧೯೪೮ | ಸಂ [illegible] | —

ಮಾನವ ನಾಗರಿಕತೆಗಿಂದು ಒದಗಿದ ಗಂಡಾಂತರ!

ವಿಜ್ಞಾನ ಬಲ ಪಡೆದ ಬಂಡವಾಳ ಪದ್ಧತಿ— ಸಂತೆಗಾಗಿ ಸ್ಪರ್ಧೆ— ಯುದ್ಧದ ಅನಿವಾರ್ಯತೆ— ಮಾನವನಿಂದ ಮಾನವನ ರಕ್ತ ಶೋಷಣೆ— ರಾಷ್ಟ್ರೀಯ ಸಾರ್ವಭೌಮತ್ವ ಒಡ್ಡುವ ವಿಪತ್ತು —

ಆರ್ಥಿಕ ವಿಷಮತೆಗೆ ಔದ್ಯೋಗಿಕ ಬಂಡವಲಶಾಹಿ ಕಾರಣ, ಅದಕ್ಕೆ ಸಾರ್ವಭೌಮ ರಾಷ್ಟ್ರೀಯ ಸರಕಾರ ಹೇತು, ಆದರಿಂದ ಅಂತರ್ದೇಶಿಯ ಮತ್ತು ಅಂತರ್ರಾಷ್ಟ್ರೀಯ ಕಲಹ, ಆರ್ಥಿಕ ಹಾನಿ, [illegible]; ಇದರಿಂದ ತಪ್ಪಿಸಿಕೊಳ್ಳಬೇಕಾದರೆ ಉತ್ಪಾದನ ಸಾಧನವನ್ನು ಸಾರ್ವಜನಿಕ ಅಧಿಕಾರ ಕ್ಕೊಳಪಡಿಸುವುದು, ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಸಾರ್ವಭೌಮತ್ವವನ್ನು ಬಿಟ್ಟು ಕೊಡುವುದು ಮತ್ತು ಪ್ರಾದೇಶಿಕ ಇಲ್ಲವೆ ರಾಜನಿಷ್ಠ ಉತ್ಪಾದನ-ವಿತರಣ ಪದ್ಧತಿಯನ್ನು ಬಿಡು ಕರ್ತವ್ಯ ಪ್ರಧಾನ ಇಲ್ಲವೆ ಜಾಗತಿಕ ಹಿತ ದೃಷ್ಟಿಯ ಪದ್ಧತಿಯನ್ನು ಹಿಡಿಯುವುದು ಅವಶ್ಯಕವೆಂದು ಜಗತ್ಪ್ರಸಿದ್ಧ ಬರಹಗಾರರಾದ ಪ್ರೊ. ಹೆರಾಲ್ಡ ಜೆ. ಲಾಸ್ಕಿಯವರು "ಫಾರಿನ್ ಅಫೇರ್ಸ್"ನಲ್ಲಿ ಬರೆಯುತ್ತಾರೆ.

ಕಳೆದ ಮಹಾಯುದ್ಧ ಮುಗಿವಷ್ಟರಲ್ಲಿ ಜಗತ್ತು ಪ್ರಲಯಕ್ಕೆ ಅತ್ಯಂತ ಸಮೀಪವರ್ತಿಯಾಗಿತ್ತು. ಆದರೆ ಈಗಲೂ ಅದು ಸುರಕ್ಷಿತ ದಡಕ್ಕೆ ಸರಿದಿದೆಯೆನ್ನಲಾಗದು. ಇದಕ್ಕೆ ಪಾಶ್ಚಾತ್ಯ ಬಂಡವಾಳಶಾಹಿಯ ಪರಂಪರೆಯನ್ನು ಆಸ್ತಿಯಾಗಿ ಪಡೆದವರೇ ಹೊಣೆ. ನಾವಿಂದು ಪರಸ್ಪರಾವಲಂಬಿಯಾದ ಜಾಗತಿಕ ಅರ್ಥವ್ಯವಸ್ಥೆಯನ್ನು ರಚಿಸಿದ್ದೇವೆ. ಆದರೆ ಅದನ್ನು ಕಾಯ್ದುಕೊಳ್ಳಲು ಅಗತ್ಯವಾದ ಸಂಸ್ಥೆಗಳನ್ನು ಕಟ್ಟಿಕೊಂಡಿಲ್ಲ. ನಮ್ಮ ವಿಜ್ಞಾನ ಮತ್ತು ಅದರ ಯಂತ್ರ-ತಂತ್ರಗಳು ಹಿಂದಿನ ಯಾವ [illegible] ಕಾಣದ ಭೋಗವನ್ನೊದಗಿಸಿ ಕೊಟ್ಟಿವೆ. ಆದರೆ ನಮ್ಮ ಉತ್ಪಾದನ ಸಂಬಂಧಗಳು ಸ್ವರ್ಗಸುಖದ ದಾರಿಗೆ ಅಡ್ಡಲಾಗಿ ನಿಂತುಕೊಂಡು ಬಿಟ್ಟಿವೆ. ನಮ್ಮ ನಾಗರಿಕತೆಯ ಹೃದಯಸ್ಥಲದಲ್ಲೇ ದ್ವೇಷಾಸೂಯೆಗಳು, ಅಜ್ಞಾನ ಅಂಧತೆಗಳು ಉಳಿದಿದ್ದು, ಮುಂದಿನ ಹಾದಿನ ಮೇಲೆ ಉಗ್ರವಾದೊಂದು ಭೂತಚ್ಛಾಯೆಯನ್ನು ಕೆಡಹಿವೆ. ನಮ್ಮ ಜಗತ್ತೊಂದು ತಾರತಮ್ಯ ಪ್ರಪಂಚವೆನಿಸಿಬಿಟ್ಟಿದೆ. ಇತ್ತ ಕುಬೇರರಿದ್ದರೆ, ಅತ್ತ ಕುಚೇಲರು; ಒಂದೆಡೆ ಅತ್ಯಂತ ಗೂಢತಮವಾದ ನಿಸರ್ಗ ರಹಸ್ಯಗಳನ್ನು ಬಯಲಿಗೆಳೆವ ಸಂಸ್ಕೃತಿಯಿದ್ದರೆ, ಮತ್ತೊಂದೆಡೆ ಅಜ್ಞಾನಕ್ಕೆ ಕಟ್ಟಿ ಹಾಕುವ ನಿರಕ್ಷರತೆಯಿಂದುಂಟಾದ ದುರಂತ ಅಂಧಶ್ರದ್ಧೆ, ಈಯೆಡೆ ಸ್ವಾತಂತ್ರ್ಯದ ಹೆಸರಿಗೆ ನೆನಿಸಿದ ಗಾಂಭೀರ್ಯವಿದ್ದರೆ ಅತ್ತ ಕಡೆ ಹೆಸರು ಬದಲಿಸಿ ಅಂದವಾಗಿ ತೋರುವಂತೆ ಮಾಡಿದ ದಾಸ್ಯ. ಇದು ಕೇವಲ [illegible] ಹೂಡಿರುವ ಅಕ್ಷಮ್ಯ [illegible]ಯ ಫಲವೇ ಸರಿ.

ಸಂಯುಕ್ತ ರಾಷ್ಟ್ರಗಳು ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಹೆಸರಿನಲ್ಲಿ ಮೊನ್ನೆಮೊನ್ನೆ ಮಹಾಯುದ್ಧವನ್ನು ಗೆದ್ದವು. ಶಾಂತಿರಕ್ಷಣೆಗಾಗಿ, [illegible] ಅಜ್ಞಾನದಿಂದ ಮುಕ್ತವಾಗಿ [illegible]. ದಾರಿದ್ರ್ಯ ರೋಗಾದಿಗಳಿಂದ ದೂರ ಇರಿಸುವುದಕ್ಕೆಂದು ನಾವು ಒಂದು ಅತಿ ವಿಸ್ತಾರದ ಅಂತರಾಷ್ಟ್ರೀಯ ಸಂಘವೊಂದನ್ನು ಕಟ್ಟಿದೆವು. ಆದರೆ ನಾವದನ್ನು ರಾಷ್ಟ್ರೀಯ ಸಾರ್ವಭೌಮತ್ವದ ತಳಹದಿಯಮೇಲೆ ಕಟ್ಟಿದುದರಿಂದ ಅದರ ಉದ್ದೇಶ [illegible]

[illegible]

ನಿರ್ಣಯಗಳ ಆಧಾರದ ಮೇಲೆ ಪರಂಪರಾರೂಢ ಸಂದರ್ಭದ ಹಿಡಿತದಲ್ಲಿ ತಾನು ಸಾಧಿಸುವ ಮುದ್ದೆಯನ್ನು ನ್ಯಾಯಬದ್ಧವೆನಿಸಲು ಹೆಣಗುತ್ತದೆ. ಇನ್ನೂರು ವರ್ಷಗಳ ಹಿಂದೆ ರೂಸೋ ಹೇಳಿದ: ಮಾನವ ಕುಲ ತನ್ನ ಸೆರೆಮನೆಗೆ ತಾನೇ ಓಡಿತು ಎಂದು. ಈಗ ಅತ್ಯಂತ ಅಪಾಯಕಾರಿಗಳಾದ ಮಾನವ್ಯ ಮತ್ತು ಇತರ ದುಷ್ಟಶಕ್ತಿಗಳು ಅದೇ ಪ್ರಕಾರ ತಮ್ಮ ಅಂತಃಸಂಘರ್ಷದಿಂದ ತಮ್ಮ ಭಾರದಿಂದ ನಮ್ಮನ್ನು ಬಿಡುಗಡೆ ಮಾಡಲು ಹೋರಾಡುತ್ತಿವೆ.

ಜಗತ್ತಿನ ಆಕ್ರಮಣಶೀಲರು

[illegible] ಮತ್ತು [illegible] ದಂಡನಾಯಕರಾಗಿ ಸಾಮ್ರಾಜ್ಯದತ್ತ ಕೈಚಾಚುತ್ತಿಲ್ಲ. ಅವರು ಅರ್ಥಾರ್ಥ ಸಾಮೂಹಿಕ ಶಕ್ತಿಗಳೂ ಪ್ರಬಲವಾದ ವ್ಯಾಪಾರ ಸಂಸ್ಥೆಗಳೂ ಆಗಿ ಪರಿಣಮಿಸಿದ್ದಾರೆ. ಅವುಗಳಿಗಾಗಿ ಇಂದು ಪಿಟ್ಸ್‌ಬರ್ಗ ಮತ್ತು ಕೊವೆಂಟ್ರಿಯ ಕೆಲಸಗಾರರನ್ನಾಗಲಿ, ರೂರ್ ಮತ್ತು ಸೈಲೀಶಿಯದ ಗಣಿಗೆಲಸಗಾರರನ್ನಾಗಲಿ ಸಂಘಟಿಸಿ ನ್ಯಾಯ ನಿರ್ಣಯ ಕೊಡಿಸಬೇಕಾಗಬಹುದು. ಅವರನ್ನಾದರೂ ತಾವು ಬ್ರಿಟನ್, ಜರ್ಮನಿ ಅಥವಾ ಪೋಲೆಂಡುಗಳಿಗಾಗಿ [illegible]

[illegible]

ದಿನ ಅವರ ಘಟ ಶ್ರಾದ್ಧವಾಯಿತು. ಅಂದಿನಿಂದ ಅದು Vertical Expansion— ಉದಾತ್ತ ವಿಸ್ತರಣವನ್ನು ಬಿಟ್ಟು Horizontal Expansion— ಆಕ್ರಾಮಕ ವಿಸ್ತರಣವನ್ನಾರಂಭಿಸಿ ಶ್ರೀಮಂತರು ಕುಬೇರರಾಗುವ ಮತ್ತು ದೀನರು ದಲಿತರಾಗುವ ಮಾರ್ಗವನ್ನು ಮೆಟ್ಟತೊಡಗಿತು. ವಿಶ್ವರೂಪದಲ್ಲಿರುವ ಯುರೋಪಿನ ಸ್ವರೂಪವಾದರೂ ಅದೇ ರೀತಿಯಾಯಿತು. ಐತಿಹಾಸಿಕ ಮತ್ತು ಸಾಮಾಜಿಕ ಕಾರಣಗಳಿಂದ ಅದರ ಉತ್ಪಾದಕ ಶಕ್ತಿಯು ಹೀಗೆಯೇ ಕುಂಠಿತವಾಯಿತು. ಅಲ್ಲಿಂದು ನ್ಯಾಯವಿಲ್ಲ, ವಶೀಲಿ ಹಚ್ಚುವುದು, ಲಂಚ ವಂಚನೆ ಮಾಡುವುದು, ಖಾಸಗಿ ಆಸ್ತಿಯನ್ನು ಬೆಳೆಸುವುದು— ಇವೇ ರೂಢಿಯಲ್ಲಿ ಬಂದು ಬಿಟ್ಟವೆ.

ಅಮೇರಿಕದ ಉದಾಹರಣೆ

ಅಣುಬಾಂಬಿನ ಸಂಶೋಧದಿಂದ ಇಂದು [illegible], ತನ್ನ [illegible] ವಿನಾಶಗೊಳಿಸದಲ್ಲದೆ ತನ್ನ ಉದ್ಯೋಗ ವ್ಯಾಪಾರಾದಿಗಳನ್ನು ವೃದ್ಧಿಗೊಳಿಸಲಾರದೆಂಬ ಹುಚ್ಚು ಹಿಡಿದುಬಿಟ್ಟಿದೆ. ಆ ಪ್ರಯತ್ನದಲ್ಲಿ ಅದು ತನ್ನನ್ನೇ ತಾನು ನಾಶ ಮಾಡಿಕೊಳ್ಳುವ ವರೆಗೆ ಹೋಗುತ್ತದೆ. ಇದಕ್ಕೆ ಅಮೇರಿಕವೇ ಒಂದು ಉತ್ತಮ ಉದಾಹರಣೆ. ಮಿತಿಮೀರಿದ ಉದ್ಯೋಗ, ಕೈಗಾರಿಕೆ, ಕಾರಖಾನೆಗಳ ಉತ್ಪಾದನದಿಂದ ಹೇರಳ ಸಾಮಗ್ರಿಗಳನ್ನು ನಿರ್ಯಾತಕ್ಕಾಗಿ ತಯಾರಿಸಿಕೊಂಡು ಮಾರಾಟಕ್ಕಾಗಿ ಸಂತೆ ಹುಡುಕಲು [illegible]

[illegible]

ದಾಸ್ಯ ಇಲ್ಲದೆ ಅರ್ಧ ದಾಸ್ಯದಲ್ಲಿರುವ ರಾಷ್ಟ್ರಗಳಿಗೆ ಈ ಕಾರಣದಿಂದ ತಮ್ಮ ಭವಿತವ್ಯವನ್ನು ನಿರ್ಣಯಿಸಿಕೊಳ್ಳುವ ಸ್ವಾತಂತ್ರ್ಯ [illegible] ಅವು [illegible] ಬಡಿಯುತ್ತಲೇ [illegible].

ದುರ್ಬಲ ರಾಷ್ಟ್ರಗಳ ದಾಸ್ಯ

ಪರದೇಶದ ಬಂಡವಾಳ ತಮ್ಮಲ್ಲಿ [illegible] ಆರ್ಥಿಕ ದಾಸ್ಯ ಪ್ರಾಪ್ತಿಯಾದೀತೆಂಬ ಭಯದಿಂದಲೇ, ೨ನೆಯ ಮಹಾಯುದ್ಧ ಪ್ರಾರಂಭವಾಗುವ ಮೊದಲು ರಶಿಯವು ತನ್ನ [illegible] ಕೆಳತರಗತಿಯದಿದ್ದರೂ ಅಲ್ಲಿಂದಲೇ ಬಂಡವಾಳವನ್ನು ಕಲೆಹಾಕಿ ತನ್ನ ಉದ್ಯೋಗಿಕ ಬೆಳವಣಿಗೆಯನ್ನು ಸಾಧಿಸಿಕೊಂಡಿತು. ಪರ ಬಂಡವಾಳದ Market Economy ಸಂತೆಯ ಅರ್ಥ ನೀತಿಯು ಮೊದಲೇನೋ ಪ್ರಗತಿಗೆ ಕಾರಣವಾಗಿತ್ತು. ಅದರಿಂದು ವಿಜ್ಞಾನ ಬಲದಿಂದ ಅದು ಮೊದಲಿದ್ದ ತನ್ನ ತತ್ವದಂತೆ ಉನ್ನತ ಸ್ಥಾನದಿದರೆ ಎಷ್ಟೋ ದುರ್ಬಲ ರಾಷ್ಟ್ರಗಳು ಪ್ರಬಲ ರಾಷ್ಟ್ರಗಳ ದಾಸ್ಯದಲ್ಲಿ ಬಿದ್ದು ಕಡೆತನಕ ದರಿದ್ರ [illegible] ಬಾಳುವಂತಾಗುತ್ತದೆ. ವೈಜ್ಞಾನಿಕ ಮತ್ತು ರಾಷ್ಟ್ರೀಯ ಸಿದ್ಧಿಯಿಂದ ನಾವಿಂದು ಬಂದು ಮುಟ್ಟಿದ ಮಟ್ಟದ ಪ್ರಕಾರ ಉತ್ಪಾದನ ಸಾಧನಗಳೆಷ್ಟರ ಮಟ್ಟಿಗೂ ಖಾಸಗಿ [illegible] ವಶದಲ್ಲಿರದೆ ಸಾರ್ವಜನಿಕರ ಅಧಿಕಾರದಲ್ಲಿರಬೇಕೆಂದುದು ಜನಹಿತದ ದೃಷ್ಟಿಯಿಂದ ಅತ್ಯವಶ್ಯಕ. ಇಲ್ಲದಿದ್ದರೆ Industrial Feudalism— ಔದ್ಯೋಗಿಕ ಉತ್ತರೋತ್ತರ ಬಲಿಷ್ಠ ವರ್ಗತ್ವವು ಉಂಟಾಗಿ ಜಮೀನದಾರರಿಂದ ಕೃಷಕರು ಅಧೋಗತಿಗಿಳಿದಂತೆಯೇ ಕೆಲಸಗಾರರು, [illegible] ಬಹುಸಂಖ್ಯಾಕ ಪ್ರಜೆಗಳು 'ದೀನ ನಾನು ಸಮಸ್ತ ಲೋಕಕೆ' ಎಂದು ಹಾಡುವುದು [illegible] ಬರಿಸುವ ಭಯವಿದೆ. ಇದರಿಂದ ಸ್ವಾತಂತ್ರ್ಯವೂ ಉಳಿಯಲಾರದು, ಪ್ರಜಾಸತ್ತೆಯೂ ಬದುಕಲಾರದು!

ಇದೇ ಇಂದು ನಾವು ಆರ್ಥಿಕ ನೆಲೆಯ ಮೇಲೆ [illegible] ಸಂದರ್ಭದಿಂದ ಅವಿಭಾಜ್ಯವಾಗಿದೆ. ಜಾಗತಿಕ ಅರ್ಥವ್ಯವಸ್ಥೆಯೆಂದರೆ ಅದರ ಹಿಂದೆಯೇ ಜಾಗತಿಕ ಸರಕಾರ ಎಂಬುದು ಬರುವದಿರುತ್ತದೆ ಮತ್ತು ಸಾರ್ವಭೌಮ ರಾಷ್ಟ್ರೀಯ ಸರಕಾರಗಳು [illegible] ಜಾಗತಿಕ ಸರಕಾರ ರಚನೆ ಸಾಧ್ಯವಿಲ್ಲ. ಅದರಿಂದ ರಾಷ್ಟ್ರಗಳಿಂದು ತಮ್ಮ ರಾಷ್ಟ್ರೀಯತೆಯ ಸಾರ್ವಭೌಮತ್ವವನ್ನು [illegible]

[illegible]

[illegible] ಸಾರ್ವಭೌಮತ್ವವನ್ನು [illegible]

[illegible] ಜಾಗತಿಕ ಸರಕಾರ, ಸರಕಾರ, [illegible] ಸಾಧಿಸಬಹುದು. ಈ ಕಾರಣದಿಂದಲೇ ಹಿಂದಿನ ರಾಷ್ಟ್ರ ಸಂಘ (League of Nations) [illegible]

ಲಂಬಾಣಿಗರು ಮತ್ತು ದೀಪಾವಳಿ

(ಲೇಖಕರು:— ಎಚ್. ಎನ್. ಕಲಿಗನೂರ)

[illegible] ಶ್ರೀ ಡಿ. ಎಲ್. ಪಾಟೀಲರು ಅಧ್ಯಕ್ಷರಾಗಿದ್ದರು. [illegible] ಉದಾಹರಣೆಗಳೊಂದಿಗೆ ಲಮಾಣಿ ಜನರ ಪರಿಚಯ [illegible] ಕಾರ್ಯಕರ್ತರು ಶ್ರೀ ಲಕ್ಷ್ಮಣ [illegible] ಆ ಸಮಿತಿಯಲ್ಲಿ ಸದಸ್ಯರಿದ್ದಾರೆ.

ಈ ಕೆಳಗೆ ಕೊಟ್ಟ ಲೇಖನವು ಹಬ್ಬ ಹುಣ್ಣಿಮೆಗಳನ್ನು ಲಮಾಣಿಗಳು ಹೇಗೆ ಆನಂದವಾಗಿ ಆಚರಿಸುತ್ತಾರೆಂಬುದನ್ನು ತಿಳಿಸುವ ಮೂಲಕ ಆ ಜನಗಳ ರಸಿಕ ಜೀವನವನ್ನು ಚಿತ್ರಿಸುತ್ತದೆ. ಅವರ ದಿನದ ಇರವೇ ಬಣ್ಣ ಬಣ್ಣದ್ದಾಗಿ ತಾಳಬದ್ಧ ಕುಣಿತವಾಗಿ ಕಾವ್ಯವಾಗಿ ನೆಗೆಸಲಿಪಿನಲ್ಲಿ ನುಸುಳ ನೋವನ್ನು ಮರೆತು ಸಾಗುತ್ತದೆ. ಬಡತನವೇ ಅವರಿಗೆ ಭಾಗ್ಯವಾಗಿ ಪರಿಣಮಿಸಿದೆ. ಇನ್ನುಳಿದ ಸಮಾಜದವರು ಇವರಂತೆ ತಮ್ಮ ನೋವನ್ನೆಲ್ಲ ನಕ್ಕು ತೊಲಗಿಸಬಹುದಾದರೆ ಅದೆಷ್ಟು ಒಳ್ಳೆಯದು!

[illegible]

[illegible] ಅವರ ಅಕ್ಕಳ್ಕೆ ಶಾಂತಿ ಕೊಡ ಲೆಂದು ದೇವರನ್ನು ಪ್ರಾರ್ಥಿಸದೆ ಬರಿದೆ ಕೋರು ಸುವದೇಕೆ. ಇಲ್ಲಿಯ ನಿಮ್ಮ ಮನೆಯ ಸಂದಾ ದೀಪವೇನೂ ನಂದಿಲ್ಲ” ಎಂದು ಮೊದಲಾದ ಅನೇಕ ವಿವೇಕದ ಮ [illegible] ಸಮಾಧಾನದ ಮಾತಾಡುವರು. ಈ ಹೆಣ್ಣುಮಕ್ಕಳು ಆ ಮನೆ ಯಲ್ಲಿ ದೀಪಾವಳಿ ದೀಪವನ್ನು ಹಚ್ಚಿ ಆ ಮನೆಯ ತರುಣಿಯರನ್ನೂ ತಮ್ಮ ಜೊತೆಗೆ ಕರೆದು ಕೊಂಡು ಎಲ್ಲರಿಗೂ ಶುಭವಾಗಲೆಂದು ದೀಪಾ ವಳಿ ದೇವಿಯನ್ನು ಪ್ರಾರ್ಥಿಸುವಳು.

ಆ ಸಂತೋಷದ ಸುಗ್ಗಿಯಲ್ಲಿ ತಮ್ಮ ಗುಂಪಿನಲ್ಲಿ [illegible] ದುಃಖದಲ್ಲಿದ್ದರೆ ಅವರಿಗೆ ಸಮಾಧಾನವಿಲ್ಲ. ದುಃಖದಲ್ಲಿದ್ದವರನ್ನೂ ಸಮಾಧಾನ ಮಾಡಿ, ತಮ್ಮೊಡನೆ ಬಂದು ಆನಂದ ಸಾಗರದಲ್ಲಿ ವಿಹರಿಸುವಂತೆ ಎಲ್ಲರನ್ನೂ ಪ್ರೇರೇಪಿಸುವರು. ಹೀಗೆ ಎಲ್ಲರನ್ನೂ ಕೂಡಿಸಿಕೊಂಡು ದೇವ ಸ್ಥಾನದತ್ತ ಧಾವಿಸುವರು.

ಲಂಬಾಣಿಗರಿಗೆ ಕೃಷ್ಣನೇ ದೇವರು. ಅತನನ್ನು ಬಾಲಾಜಿ ಭಗವಾನ್ ಎಂತಲೂ ಕರೆಯುತ್ತಾರೆ. ದೇವಸ್ಥಾನಕ್ಕೆ ಈ ಹೆಣ್ಣುಮಕ್ಕಳು ಹಾಡುತ್ತ ಬಂದು, ಆರತಿ ಎತ್ತುವರು. ಸಾಮಾನ್ಯವಾಗಿ ಒಂದು ಬಗೆಯ ನೃತ್ಯವು ಇವರ ಹಾಡನ್ನು ಅನುಸರಿಸುತ್ತದೆ.

ಲಂಬಾಣೀ [illegible] ನೃತ್ಯ [illegible] ಹರದಿನಗಳಲ್ಲಿಯೂ [illegible] ಮದುವೆಗಳಲ್ಲಿಯೂ ಎಲ್ಲ ಕಾರ್ಯಗಳನ್ನೂ [illegible] ಹಾಡನ್ನವಲಂಬಿಸುವ ಬಗೆಬಗೆಯ ನೃತ್ಯದಿಂದ ನೆರವೇರಿಸುತ್ತಾರೆ. ಅವರು ಹಾಡುವ ಹಾಡುಗಳೇ ಅವರಿಗೆ ಜ್ಞಾನವನ್ನುಂಟು [illegible] ಸಾಹಿತ್ಯವೆಂದು ತೋರುತ್ತದೆ ಏಕೆಂದರೆ ಇವರು ಹಾಡುವ ಹಾಡುಗಳಲ್ಲಿ ಕೆಲವು ಅವರ [illegible] ಯು ಕೊಟ್ಟು ಹೋದವುಗಳು ಮತ್ತೆ ಕೆಲವು ಹೆಣ್ಣುಮಕ್ಕಳೇ ಸ್ವಂತ ರಚಿಸಿದುವು. [illegible] ಬಿಟ್ಟು ಹೋಗಿರುವ ಹಾಡುಗಳ [illegible] ಲಂಬಾಣೀ ಸಾಹಿತ್ಯ ಸಿದ್ಧವಿದೆ.

ಇವನ್ನುಳಿದು ಇತರ ನವೀನ ಕವನಗಳೂ ವಿಪುಲವಾಗಿವೆ. ಅವುಗಳಲ್ಲಿ ಸ್ತ್ರೀತಿರಸದಿಂದ [illegible] ಜೀವನವನ್ನು ಹೋಲುವ, ದುರಂತ ದಲ್ಲಿ ಕೊನೆಯಾಗುವ 'ವಚನ್' ಎಂಬ ಒಂದು ಕವನವು ಉಂಟು. ಇತ್ತೀಚೆಗೆ ಬಸ್ಸು ರೈಲು, [illegible] ಮತ್ತು ಲಂಬಾಣಿಗರ ಅಲೆದಾಟ ಮತ್ತು ಕಾರ್ಖಾನೆ ಜೀವನದ ಮೇಲೆ ಅನೇಕ ಕವ [illegible].

ಯಾವ ಕವನಗಳನ್ನೇ ಹಾಡಲಿ ಸಾಮಾನ್ಯ ವಾಗಿ ಪಾಲ್ಗೊಳ್ಳುವರು, ಆ ಹಾಡಿನ ತಾಳಕ್ಕನು [illegible] ನೃತ್ಯ ಮಾಡುವರು. [illegible] ಒಂಟಿಗರಾಗಿ ನೃತ್ಯಮಾಡುವುದಿಲ್ಲ. [illegible] ಸಮತ್ತು ತರುಣಿಯರ ತಂಡ ಒಂದೇಸಲ ಒಂದು ವೃತ್ತದಾಕಾರದಲ್ಲಿ ನಿಂತು ಹತ್ತಾರು ಬಗೆಯ ನೃತ್ಯಗಳನ್ನು ಹಾಡುತ್ತ ಮಾಡುವರು. ನಮಗೆ ಸಾಹಿತ್ಯ ಹೇಗೋ ಹಾಗೆ ಲಂಬಾಣಿಗರಿಗೆ ಹಾಡ ಮತ್ತು ನೃತ್ಯ ಅವರ ಕವನಗಳೇ ಅವರ ಸಾಹಿತ್ಯ. ಅದ್ದರಿಂದಲೇ ಅವರು ರಾಮಾಯಣ, ಮಹಾಭಾರತ, ಮುಂತಾದ ಅನೇಕ ಸಾಹಿತ್ಯದಲ್ಲಿಯ ರತ್ನಗಳನ್ನು ತಮ್ಮ ಲಂಬಾಣೀ ಭಾಷೆಯಲ್ಲಿ ಪಡೆದಿಸಿಕೊಂಡಿರುವರು.

ನಾವು ಹೇಗೆ ರಾಮಾಯಣ ಮಹಾಭಾರತಗಳ ನ್ನೋದಿ ಸಾಹಿತ್ಯದ ಸವಿಯನ್ನು ಸವಿಯುತ್ತೇವೆಯೋ ಹಾಗೆ ಅವರು ತಮ್ಮ ಹಾಡುಗಳಲ್ಲಿ ಆ ಸವಿಯನ್ನು ಸವಿಯುವರು. ಈ ತರುಣಿಯರ ತಂಡ ಹಾಡುತ್ತ ನೃತ್ಯ ಮಾಡುತ್ತಿರುವಾಗ ಅವರ ಸುತ್ತಲೂ ಇತರ ಜನರು ಅದನ್ನು ಕೇಳಲು ನೆರೆದಿರುತ್ತಾರೆ “ಸೀತೆಯನ್ನು ರಾವಣನು ಅಪಹರಿಸಿದಾಗಲೂ ನಳದಮಯಂತಿಯನ್ನು ಕಾಡಿನಲ್ಲಿ ಬಿಟ್ಟಾಗಲೂ ಲಕ್ಷ್ಮಣನು ಸೀತಾದೇವಿಯನ್ನು ಕಾಡಿನಲ್ಲಿ ಬಿಡುವಾಗಲೂ ನೋಡಬೇಕು ಲಂಬಾಣೀ ಸ್ತ್ರೀಯರ ಕಣ್ಣಲ್ಲಿ ನೀರನ್ನು.” “ಅಯ್ಯೋ ಅಬಲೆಗೆ ಅಂತಹ ಕಷ್ಟಬರಬಾರದು” ಎಂದು ಮುದುಕಿಯರು ಅನ್ನುವರು. 'ವಚನ್' ಎಂಬ ದುರಂತ ನಾಟಕದಂತಿರುವ ಕವಿತೆಯನ್ನು ಹಾಡ ಬೇಕಾದರೆ ಎಲ್ಲರ ಕಣ್ಣಲ್ಲೂ ನೀರೇ. ಹೀಗೆ ಲಂಬಾಣೀ ಜನರು ಸಂತೋಷ ದುಃಖ [illegible] ಮುಂತಾದ ಎಲ್ಲಾ ಭಾವನೆಗಳನ್ನೂ ತಮ್ಮ ಹಾಡುಗಳಲ್ಲಿ ತುಂಬಿದ್ದಾರೆ. ಇವರ ಕವಿತೆಗಳಲ್ಲಿ ಭಕ್ತಿರಸವಿದೆ, ಶೌರ್ಯವಿದೆ, ಪ್ರೇಮವಿದೆ, [illegible] ಯ ಆಶಾವಾದ, ಬೈರನ್ ಕವಿಯ ಸ್ವಾತಂತ್ರ್ಯ ಪ್ರೇಮ, ಹಾಸ್ಯರಸ ಎಲ್ಲವೂ ಕಾಣುತ್ತವೆ. ಈ ಕವಿತೆಗಳನ್ನು ಲಂಬಾಣಿ ಹೆಣ್ಣುಮಕ್ಕಳೇ ರಚಿಸಿದ್ದಾರೆ. ಅದ್ದರಿಂದ ನನಗನಿಸಿತು ಪ್ರತಿಯೊಬ್ಬ ಲಂಬಾಣೀ ಯುವತಿಯೂ ಒಬ್ಬೊಬ್ಬ ಚಿಕ್ಕ ಕವಿಯೇ ಎಂದು. ಆ ರಾತ್ರಿ [illegible]

ಮರುದಿನ ಬೆಳಿಗ್ಗೆ ಇವರಿಗೆ ಬಹಳ [illegible] ದಿನ ಎಲ್ಲರೂ ಸ್ನಾನಮಾಡುವರು. ಮನೆಯಲ್ಲಿಯ ಎಲ್ಲ ವಸ್ತುಗಳಿಗೂ ದನಕರುಗಳಿಗೂ ಕೆಂಪುಬಣ್ಣ ಹಚ್ಚುವರು. ಆದಿನ ಎಲ್ಲರ ಮನೆಯಲ್ಲೂ ಸಿಹಿ ಅಡಿಗೆ. ಆ ಅಡಿಗೆಗೆ ತುಪ್ಪಬೆರಸಿ ಅದನ್ನು ಬಾಳದೆಹೋದ ತಮ್ಮ ಹಿರಿಯರಿಗಾಗಿ ಬೆಂಕಿಯಲ್ಲಿ ಅರ್ಪಿಸುವರು. ತಮ್ಮ ತಂಡದ ದೇವರಿಗೂ ಆ ಸಿಹಿ ಅಡಿಗೆಗೆ ತುಪ್ಪ ಬೆರಸಿ ಬೆಂಕಿಯಲ್ಲಿ ಇಡುವರು.

ಬಾಲಕಿಯರು ಅಂದು ಬೆಳಿಗ್ಗೆ ಒಂದೊಂದು ಬುಟ್ಟಿ ಹಿಡಿದು ಹಾಡುತ್ತ ನೃತ್ಯ [illegible] ಕಾಡಿಗೆ ಹೋಗುವರು. ಕಾಡಿನಲ್ಲಿ ಸಂತೋಷದಿಂದ ಹಾಡುತ್ತ ನಾನಾವಿಧದ ಹೂ ಹಣ್ಣು ತೆನೆ ಮುಂತಾದುವನ್ನು ಹರಿದುಕೊಂಡು ಹಿಂದಿರುಗುವರು. ಆ ಹೆಣ್ಣುಮಕ್ಕಳಲ್ಲಿ ನವರು ಉಪವಾಸವಿರಬೇಕಂತೆ. ಆ ತರುಣಿಯರ ತಂಡ [illegible] ಬಂದಕೂಡಲೇ ಪ್ರತಿಮನೆಗೂ ಹೋಗಿ ಹಸುವಿನ ಗೊಬ್ಬರದಿಂದ ದೀಪಾವಳಿ ದೇವಿಯನ್ನು ನಿರ್ಮಿಸಿ ಅವರು ತಂದಿರುವ ಹೂಗಳಿಂದ ಗಂಧ ಸೂಸುವ ವಸ್ತುಗಳಿಂದ ಶೃಂಗರಿಸಿ ಮನೆಯವರಿಗೂ ದನಕರುಗಳಿಗೂ ಮಾನವಕೋಟಿಗೂ ಶುಭವಾಗಲೆಂದು ಪ್ರಾರ್ಥಿಸುವರು. ಹೀಗೆ ಪ್ರತಿ ಮನೆಗೂ ಹೋಗಿ ಸಂಜೆ ದೇವಸ್ಥಾನಕ್ಕೆ ಹಿಂದಿ[illegible] ಹಿಂದಿರುಗುವರು. ಅದು ದೀಪಾವಳಿ ಹಬ್ಬದ ಕೊನೆಯ ತರಕ.

ಹೀಗೆ ಲಂಬಾಣೀ ಯುವತಿಯ ಪಾತ್ರ ದೊಡ್ಡದು, [illegible] ಲಂಬಾಣೀ ಯುವಕನ ಪಾತ್ರ [illegible] ಹಬ್ಬದಲ್ಲಿ ಅತಿ ಚಿಕ್ಕದು. ಆದರೆ ಆ ಸಂತೋಷದ ಸುಗ್ಗಿಯಲ್ಲಿ ತಾನೇಕೆ ಸುಮ್ಮನಿರಬೇಕೆಂದು ಅವನು ಅನೇಕ ಹಳ್ಳಿಯ ಆಟುವಟಿಕೆಗಳಲ್ಲಿ ಮಗ್ನನಾಗಿರುತ್ತಾನೆ.

ಈ ಲಂಬಾಣೀ ಜನರ ವಿಷಯದಲ್ಲಿ ಅನೇಕ ತಪ್ಪು ಅಭಿಪ್ರಾಯಗಳು ಹರಡಿವೆ. ಇವರು ಹಿಂದುಗಳೇ ಅಲ್ಲವೆಂದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ಇವರು ಒಂದು ಜನಾಂಗವಲ್ಲ. ಕೇವಲ ಸುತ್ತಿನ ಜನ “Lambanies are a heterogenous lot.” ಇವರು ಬೇರೆ ಬೇರೆ ಜನರ ಒಂದು ತಂಡ ಎಂಬ ತಪ್ಪುಭಾವನೆ ಅನೇಕರಲ್ಲಿದೆ ಆದರೆ ಇವರು ಖಂಡಿತವಾಗಿಯೂ ಒಂದು ಜನಾಂಗ, ಭಾರತ ವರ್ಷದ ಯಾವೆಡೆಯಲ್ಲಿದ್ದರೂ ಇವರ ಭಾಷೆ ಒಂದೇ, ಆಚಾರ ವ್ಯವಹಾರಗಳೆಲ್ಲವೂ ಒಂದೇ ದೇವರು ಒಬ್ಬನೇ ಅಷ್ಟೇ ಒಂದೇ ವೇಷಭೂಷಣಗಳೂ ಒಂದೇಯಿದೆ. ಇವರು ಹಿಂದೂ ಮತದ ಒಂದು ಶಾಖೆ ಹಿಂದೂ ದೇವರೇ ಇವರದೇವರು ಹಿಂದುಗಳ ಸಾಹಿತ್ಯವನ್ನೇ ತಮ್ಮ ಸಾಹಿತ್ಯವನ್ನಾಗಿ ಮಾಡಿಕೊಂಡಿರುತ್ತಾರೆ ಆದರೆ ಉಡುಪು ಮಾತ್ರ ಬೇರೆಯದು. ಅದಕ್ಕೆ ಕಾರಣ ಹಿಂದುಳಿದಿರುವ ಅವರ ಸ್ಥಿತಿ. ಇವರು ಉತ್ತರ ಹಿಂದುಸ್ತಾನದಿಂದ ಬಂದವರು ಅದ್ದರಿಂದ ಉತ್ತರ ಹಿಂದುಸ್ತಾನದ ಮಾದರಿಯ ಉಡುಪು ಇನ್ನೂ ಬಿಡಲಿಲ್ಲ. ಈಗೀಗ ನಾಗರಿಕರ ಸಂಪರ್ಕದಿಂದ ಅವರಲ್ಲಿಯ ಸಂಕುಚಿತಭಾವನೆಗಳು ಮಾಯವಾಗಹತ್ತಿವೆ. ಇವರಿಗೆ ದಾರಿದ್ರ್ಯ ಒಂದು ದೊಡ್ಡ ಕೊಡಕು. ಅಲ್ಲಲ್ಲಿಯ ಸರಕಾರವು ಮನಸ್ಸುಮಾಡಿದರೆ ಈ ಜನಾಂಗವನ್ನು ಇತರ ಜನಾಂಗಗಳಂತೆ ನಗುಮುಖದ ಜನಾಂಗವನ್ನಾಗಿ ಮಾರ್ಪಡಿಸಬಹುದರಲ್ಲಿ ಸಂಶಯವಿಲ್ಲ.

ಮುಗುಳ್ನಗೆಯ ಮಂತ್ರ

ಚೆನ್ನಾಗಿ ಅರ್ಥಾತ್ ಮುಕ್ತಪ್ರಸನ್ನ ಮುಗುಳ್ನಗೆ ನಗಬಲ್ಲರಾದರೆ ಜಗತ್ತಿನ ಮಂತ್ರಗಳು ಅಸಾಧ್ಯವನ್ನು ಸಾಧಿಸಬಲ್ಲವು [illegible] ... ಇದು ಮನಸ್ಸಿನ [illegible] ವಿದೆ. ಮುಗುಳ್ನಗೆ ಮನಸ್ಸನ್ನು [illegible] ಸುತ್ತದೆ. ನಿಮ್ಮನ್ನೂ ಅನ್ಯರನ್ನೂ ಪ್ರಸನ್ನಗೊಳಿಸುತ್ತದೆ. [illegible] ಇನ್ನೊಬ್ಬರನ್ನು ಪ್ರಸನ್ನಗೊಳಿಸುವಂತೆ ನಗಲೂ ಬರದೆಂಬುದು ಅನುಭವ ಸಿದ್ಧವಾದುದು. ನಟ-ನಟಿಯರು ಕನ್ನಡಿಯ ಎದುರು ನಿಂತು ಮುಗುಳ್ನಗೆ ನಗುವುದನ್ನು ಅಭ್ಯಾಸಿಸುತ್ತಾರೆ—ದೊಡ್ಡ ದೊಡ್ಡ ವಾಗ್ಮಿಗಳು ಕನ್ನಡಿಯೆದುರು ನಿಂತು ಭಾಷಣ ಭಂಗಿಯನ್ನು ಹೇಗೆ ತಿದ್ದಿಕೊಳ್ಳುವರೋ ಹಾಗೆ.

ಕೆಲವು ವರ್ಷಗಳ ಹಿಂದೆ ಅಮೇರಿಕದ ಒಂದು ಅತಿದೊಡ್ಡ ವ್ಯಾಪಾರ ಸಂಸ್ಥೆಯ ಮಾರಾಟದ ಕಂಪನಿಯು ತನ್ನ ಮಾರಾಟದ ಅಧಿಕಾರಿಗಳನ್ನೆಲ್ಲ ನ್ಯೂಯಾರ್ಕಿನ ರಂಗಸ್ಥಳದ ದಿಗ್ದರ್ಶಕನಾದ ಜಿ. ... ಈಟನ್ನನ ವಶಕ್ಕೆ ಕೊಟ್ಟಿತು. ಅವರಿಗೆ ಈತನಿಂದ ಮುಗುಳ್ನಗೆ ನಗಲು ಕಲಿಸಬೇಕೆಂದು! ಈತನು ಅವರಲ್ಲಿ ಒಬ್ಬೊಬ್ಬನನ್ನು ಹಿಡಿದು ಅವನ ಮಂದಹಾಸವನ್ನು ಟೀಕಿಸಿದನು. ಬಹಳ ಜನರು ತಮಗೆ ಮಂದಸ್ಮಿತ ಬೀರಲು ಗೊತ್ತಿದೆಯೆಂದುಕೊಂಡಿದ್ದರು. ಆದರೆ ಈತನು ಅವರು ಸುಮ್ಮನೆ ತುಟಿ ಅಗಲ ಮಾಡುತ್ತಿದ್ದರಷ್ಟೆ ಎಂಬುದನ್ನು ತೋರಿಸಿಕೊಟ್ಟನು. ನಿಜವಾದ ಕಿರುನಗೆಯಲ್ಲಿ ಕಣ್ಣುಗಳೂ ಕಿರುನಗೆ ನಗುತ್ತವೆ. ತುಟಿತೆರೆದಾಕ್ಷಣ ಅದು ಮುಗುಳ್ನಗೆಯಾಗಲಿಲ್ಲ. ಕಣ್ಣುಗಳು ಕಡೆದಂತೆ, ಅಸ್ನಿಗ್ಧವಾಗಿ ನಿಂತಿದ್ದರೆ ಅದೆಂಥ ಹಾಸ? ೨ ವಾರಗಳ ಶಿಕ್ಷಣದಿಂದ ಅವರು ಈ ನಗೆವೈದ್ಯನ ಚಿಕಿತ್ಸಾಲಯದಿಂದ ಹೊರಬಿದ್ದು ೬ ತಿಂಗಳಲ್ಲಿ ನೂರಕ್ಕೆ ೧೫ರಷ್ಟು ಹೆಚ್ಚು ವ್ಯಾಪಾರ ಮಾಡಲು ಶಕ್ತರಾದರು.

ಆದುದರಿಂದ ಜೀವನದಲ್ಲಿ ಯಶಸ್ವಿಗಳಾಗಿ ಬಾಳಬೇಕೆಂಬವರು ಚಿಕ್ಕಂದಿನಿಂದಲೂ ಚೆನ್ನಾಗಿ ಮುಗುಳ್ನಗೆ ನಗಲು ಕಲಿಯಬೇಕು. ಅದಕ್ಕೆ ಮನಃಪ್ರಸಾದವಿರಬೇಕು—ಹೀಗಿರಲು ಮಂಗಲ ಭಾವಗಳಿಂದ ಹೃದಯವು ತುಂಬಿರಬೇಕು. ಅದರಿಂದ ಪುಣ್ಯಮಯ ಮಂದಹಾಸ ಬೀರಲು ಬರುತ್ತದೆ. ಕಪಟವಿದ್ದಾದರೆ ಎಂದಾದರೂ ಗುಟ್ಟು ರಟ್ಟಾಗಿಯೇ ತೀರುವುದು.!

ಕುಮಾರೀ ಮಾತೆ

ಹೆಂಗಸರು ಮತದಾನದ ಹಕ್ಕನ್ನು ಪಡೆಯಲು ಇಂಗ್ಲೆಂಡಿನಲ್ಲೊಮ್ಮೆ ತೀವ್ರ ಹೋರಾಟ ನಡೆಸಿ ಜಯಶೀಲರಾದರು. ೨೧ ನೆಯ ವರ್ಷ ಮುಟ್ಟಿದ ಎಲ್ಲ ತರುಣಿಯರಿಗೂ ಮತದಾನದ ಹಕ್ಕು ಲಭಿಸಿತು. ಆದರೆ ಅವರಿಗೆ ತಮಗೆ ೨೧ ವರ್ಷ ವಯಸ್ಸು ಎಂದು ಹೇಳಿಕೊಳ್ಳಲು ನಾಚಿಕೆ, ಅವಮಾನ! ಈ ಕಾರಣದಿಂದ ಚುನಾವಣೆಯಲ್ಲಿ ಎಷ್ಟೋ ಹುಡುಗಿಯರು ಮತದಾನಕ್ಕೆ ಹೋಗಲಿಲ್ಲ. ಇದ್ದ ವಯಸ್ಸಿಗಿಂತ ನಂಬಬಹುದಾದಷ್ಟು ವರ್ಷಗಳನ್ನು ಕಡಿಮೆ ಹೇಳುವುದು ಇಂದೂ ನಮ್ಮಲ್ಲಿ ಅನೇಕರು ಒಂದು ಬುದ್ಧಿವಂತಿಕೆ, ಚೆನ್ನು ಎಂದೇ ತಿಳಿದುಕೊಂಡಿದ್ದಾರೆ. ಯಾವಾಗಲೂ ಮಿಸ್–ಕುಮಾರಿ ಎನ್ನಿಸಿಕೊಳ್ಳಬೇಕೆಂಬ ಚಪಲಕ್ಕೆಂದು ವಿಜ್ಞಾನಿಗಳು ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ.

ದ್ರೋಣಾಚಾರ್ಯರ ಹೆಂಡತಿ ಮಕ್ಕಳಾಗಬೇಕೆಂದು ಪರಮೇಶ್ವರನಿಂದ ಬೇಡಿ ಪಡೆದ ಪ್ರಸಾದ ದ್ರವ್ಯವನ್ನು ಒಂದು ಕುದುರೆ ತಿಂದು ಅಶ್ವತ್ಥಾಮ ಹುಟ್ಟಿದನಂತೆ! ಹನುಮಂತನು ಲಂಕೆ ಸುಟ್ಟ ನಂತರ ಬಾಲದ ತುದಿಯನ್ನು ಸಮುದ್ರದಲ್ಲಿ ಅದ್ದಿದಾಗ ಅವನ ಬೆವರ ಹನಿಯೊಂದು ಅಲ್ಲಿ ಉದುರಿತು. ಅದನ್ನು ತಿಂದ ಹೆಣ್ಣುಮೀನೊಂದು ಪಾತಾಳ ಲೋಕದಲ್ಲಿ ಮತ್ಸ್ಯಹನುಮನೆಂಬ ಮಹಾಕಾಯಕಪೀಶ್ವರನನ್ನು ಪಡೆಯಿತಂತೆ! ಅರ್ಥಾತ್ ತಂದೆಯ ನೇರವಾದ ಸಂಬಂಧವಿಲ್ಲದೆ ಕುಮಾರೀ ಮಾತೆಯಿಂದ ಹುಟ್ಟುವ ಮಕ್ಕಳಿಗಿಂದು Test-Tube Babies ಕುಮಾರೀಜಾತರೆನ್ನುತ್ತಾರೆ. ಅಮೇರಿಕದಲ್ಲಿಂದು ಅಂತಹ ೧೦ ಸಾವಿರ ಮನುಷ್ಯರಿದ್ದಾರಂತೆ! ..

ನ್ಯಾಯವಾದ ಕುಟುಂಬದಲ್ಲಿ ಹುಟ್ಟಿದ ಮಕ್ಕಳಿಗಿರುವ ಸಾಮಾಜಿಕ ಹಕ್ಕುಬಾಧ್ಯತೆಗಳು ತಮಗೂ ಇರಬೇಕೆಂದು; ಆ ಬಗ್ಗೆ ನ್ಯಾಯಾಲಯ ತೀರ್ಪನ್ನು ಕೊಡಬೇಕು–ಎಂದು ಆ ಕುಮಾರೀಜಾತರಿಂದು ಅಮೇರಿಕದಲ್ಲಿ ಆಂದೋಲನವನ್ನೆಬ್ಬಿಸಿದ್ದಾರೆ. ಈ ಆಂದೋಲನದ ಮುಖಂಡರಾದ ...

ವಿವಿಧ ಪ್ರಪಂಚ

[illegible] ಧಾರ್ಮಿಕ [illegible] ಸರ್ಕಾರವು ಅವರ [illegible] ... ತ್ತಾರೆ. ಅವರ ಜನನಕ್ಕೆ ಸಮಾಜವೇ ಕಾರಣವಾದುದರಿಂದ ಅವರ ಪಾಪ ತಪ್ಪೆಂದು ಹೇಳಲು ಬರದು. ವಿಚಿತ್ರವನ್ನು ಕಾಣಹೋದ ಮಾನವನ ಬುದ್ಧಿ ಆ ವಿಚಿತ್ರದ ಫಲವನ್ನು ಭೋಗಿಸದಿದ್ದೀತೇ?

ವಿಜಾತಿಜಾತರು

ರಕ್ತ ಮಿಶ್ರವಾಗಬಾರದು, ಕುಲಶುದ್ಧಿಯನ್ನು ಕಾಯ್ದುಕೊಳ್ಳಬೇಕು– ಎನ್ನುವುದು ನಾಜೀವಾದ ಮಿತ್ರಕುಲೋತ್ತಮನ್ನರು ಪ್ರಾತ್ಯಕ್ಷಿಕವಾಗಿ ಬೋಧಿಸಿದ ದಿನಗಳಲ್ಲಿ ವಿಲಕ್ಷಣವಾಗಿ ಕುಲಕ್ಕೆ ಶಕ್ತಿಯನ್ನೀಯುವುದೆಂಬುದೆ ಈ ವಾದದ ಸಾರಾಂಶ. ಅದರಿಂದು ವಿಜ್ಞಾನಿಗಳು ವಿಜಾತಿಜಾತರೇ ಹೆಚ್ಚು ಆರೋಗ್ಯದ ಆಯುಷ್ಯದವರೂ, ಹೃಷ್ಟಪುಷ್ಟರೂ ಆಗಿರುವರೆಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದ್ದಾರೆ. ನಮ್ಮ ನಾಡಿನಲ್ಲಿ ಈ ಕಾರಣದಿಂದಲೆ ಹಿಂದಿನಿಂದಲೂ ಸಗೋತ್ರ ವಿವಾಹವನ್ನು ನಿಷೇಧಿಸಿದ್ದಾರೆ. ವಿಗೋತ್ರಜರು ಸಂತತಿಯ ಚಿರಂತನತೆಗೆ ಕಾರಣರಲ್ಲದೆ ಸಗೋತ್ರಜರಲ್ಲ.

ಮೇಲಿನ ಪ್ರಯೋಗವನ್ನು ದನಕರು, ಪಶುಪಕ್ಷಿ ಹಣ್ಣು ಹೂವು, ನರವಾನರ ಈ ಎಲ್ಲ ಸಸ್ಯ ಪ್ರಾಣಿಗಳಲ್ಲಿ ನಡೆಸಿದ್ದಲ್ಲದೆ ತರಕಾರಿಗಳಲ್ಲೂ ಅಮೇರಿಕನ್ನರು ನಡೆಸಿಬಿಟ್ಟಿದ್ದಾರೆ. ಈ ಗುಟ್ಟನ್ನರಿತುಕೊಂಡು ತಮ್ಮ ಧಾನ್ಯಾದಿ ಉತ್ಪನ್ನವನ್ನು ಹೆಚ್ಚಿಸಿಕೊಂಡಿದ್ದಾರೆ. ಇದರಿಂದ ಅವರು ಹೆಚ್ಚಿನ Vitamin ಜೀವ ಸತ್ವವುಳ್ಳ ಟೊಮ್ಯಾಟೋ (ಚಪ್ಪರ ಬದನೆ) ಬೆಳೆಯಲಾರಂಭಿಸಿದ್ದಾರೆ. ಫ್ಲೋರಿಡಾದಲ್ಲಿ ಅಗಲೆ ಮೂಲಭೂತವಾದ ೪೦ ಸಾವಿರ ಸಸ್ಯಗಳನ್ನು ವರ್ಗೀಕರಿಸಿ ತಯಾರಿಸಿಟ್ಟಿದ್ದಾರೆ. ಆಧುನಿಕ ವಿಜ್ಞಾನದ ಪ್ರಕಾರ ಅವುಗಳ ವಿಲಕ್ಷಣ ಸಂಯೋಗದಿಂದ ನಾನಾವಿಧವಾಗಿ ಉತ್ಪಾದನೆಯ ಪರಿಮಾಣ ಮತ್ತು ಗುಣವನ್ನು ಹೆಚ್ಚಿಸಲು ಅನುಕೂಲವುಂಟಾಗಿದೆ. ಭಾರತವು ಮುಖ್ಯವಾಗಿ ಒಕ್ಕಲುತನದ ದೇಶ. ಇಲ್ಲಿ ಹೂ, ಹಣ್ಣು, ತರಕಾರಿ, ಧಾನ್ಯ ಮುಂತಾದವುಗಳ ಗುಣಪರಿಮಾಣಗಳನ್ನು ವರ್ಧಿಸಲು ಅಗತ್ಯವಾದ ವೈಜ್ಞಾನಿಕ ಸಂಶೋಧನ, ಪ್ರಯೋಗಿಕ ನಡೆಯಬೇಕಾದುದು ಅತ್ಯಗತ್ಯ. ಹೀಗಿರುವಲ್ಲಿ ನಮ್ಮ ತರುಣ ವಿಜ್ಞಾನಿಗಳೂ ಬಂಡವಾಳಿಗರೂ ಸರಕಾರದವರೂ ಸಹಕರಿಸಿ ಈ ವಿಜಾತಿ ಸಂಯೋಗಕ್ರಮವನ್ನು ಬಳಕೆಗೆ ತರಲು ಆಧುನಿಕ ವಿಜ್ಞಾನದ ಸಹಾಯವನ್ನು ತೆಗೆದುಕೊಳ್ಳುವುದು ಪ್ರಗತಿಮಾರ್ಗದ ಪ್ರಥಮ ಹೆಜ್ಜೆಯಲ್ಲವೆ? ನಮ್ಮ ದನಕರುಗಳಾದರೂ ದೈಹಿಕ ಬೆಳವಣಿಗೆ ಮತ್ತು ಹಾಲು ಹೈನಗಳಲ್ಲಿ ಬಹಳ ಹೀನಸ್ಥಿತಿಯಲ್ಲಿವೆ. ಅವುಗಳ ಸಂವರ್ಧನಕ್ಕೂ ಮೇಲೆ ಹೇಳಿದ ವಿಜಾತಿ ಸಂಸರ್ಗ ಪದ್ಧತಿಯನ್ನು ರೂಢಿಯಲ್ಲಿ ತರುವುದು ಶ್ರೇಯಸ್ಕರವಲ್ಲವೆ? ಇತ್ತ ಕಡೆಗೆ ಸರಕಾರದ ಲಕ್ಷ್ಯಲುತನ ರಾಟಿ ಗಮನವೀಯುವುದೆ?

ಬೃಹಸ್ಪತಿಗಳ ಯುಗ!

ನಮ್ಮ ರಾಮಾಯಣದಲ್ಲಿ ರಾವಣನಿಗೆ ಅರೆಕೋಟಿ ವರ್ಷಗಳ ಆಯುಷ್ಯ, ರಾಮನಿಗೆ ತ್ರೇತಾಯುಗದ ಆಳಿಕೆ, ಮುಂತಾದವುಗಳನ್ನು ಕೊಡಲಾಗಿದೆ. ರಾಮಾಯಣವಾದರೂ ಪುರಾಣದೊಳಗೆ ಸೇರಿದೆಯೆನ್ನಬಹುದು. ಆದರೆ ಕಾಶ್ಮೀರದ ಕಲಿಯುಗದ ರಾಜರ ವಂಶಾವಳಿಯ ಚರಿತ್ರೆಯನ್ನು "ರಾಜತರಂಗಿಣಿ"ಯಲ್ಲಿ ವಿವರಿಸಿದ ಕಲ್ಹಣನು ಒಬ್ಬೊಬ್ಬ ಅರಸನು ಸಾವಿರಗಟ್ಟಲೆ ವರ್ಷ ಆಳಿದನೆಂದು ಬರೆದಿರುತ್ತಾನೆ. ಇದೆಲ್ಲ ಕಲ್ಪ ಪುರಾಣದೊಳಗಿನ ಬದನೆಕಾಯಿ ಎಂದು ಆಧುನಿಕರನೇಕರು ಕೈಚೆಟ್ಟಿ ನಗುತ್ತಾರೆ. ಆದರೆ ಅಮೇರಿಕದ ಪ್ರಸಿದ್ಧ ವಿಜ್ಞಾನಿಗಳಾದ ಡೈಸನ್ ಕಾರ್ಟರರು ಏನು ಹೇಳುತ್ತಾರೆ— ಕೇಳಿ. ಮೊಟ್ಟಮೊದಲು ಹುಟ್ಟಿದ ಜೀವಿಗಳು ೧೦ ಸಾವಿರ ವರ್ಷಗಳ ಕಾಲ ಬದುಕಿ ಮುಂದೆ ತಾವು ಕುಲದೀಪಕರನ್ನು ಹುಟ್ಟಿಸಿ ಕಾಲವಾದುವು!

Bio-Cemists–ಜೀವ–ರಸಾಯನ ಶಾಸ್ತ್ರಜ್ಞರ ಸಂಶೋಧನೆಯ ಫಲವಾಗಿ ಇಂದು ಜೀವಕಣವು ಮೂಲರೂಪದಲ್ಲಿ "ಜೆನಿ" ಎಂಬ ಬೀಜವಾಗಿರುತ್ತದೆಂದು ತಿಳಿದು ಬಂದಿದೆ. ಅನೇಕ ಶತಶತ ಸ್ತ ವರ್ಷಗಳ ಹಿಂದೆ ಜಗತ್ತಿನಲ್ಲಿ ರಾಸಾಯನಿಕ ದ್ರವ್ಯಗಳ ಯೋಗ ವಿಯೋಗಗಳು ನಡೆಯುತಿದ್ದಾಗ ಒಂದು ಜೀವಕಣ [illegible] ಬೆಳೆಯಲಾರಂಭಿಸಿದವು; ಕ್ರಮೇಣ ಅವು ಸುತ್ತಮುತ್ತಲಿನ ರಾಸಾಯನಿಕ ದ್ರವ್ಯಗಳನ್ನು ತಮ್ಮ ಜೊತೆಗೆ ಸೇರಿಸಿಕೊಂಡು ತಮ್ಮ ಬಿಂಬವನ್ನು ತಯಾರಿಸಿದವು. ಅಂಥಹ ಮೊದಲ ಜೆನಿಯೇ ಜೀವಿಗಳ ಪ್ರಪಿತಾಮಹ, ಹಿರಣ್ಯಗರ್ಭ The Golden Germ), ಇಲ್ಲವೆ ಅಜ (The Unborn) ಎಂದು ಕರೆಯಲ್ಪಡುವ ಸೃಷ್ಟಿಕರ್ತನು.

ಈ ಅಜಕಣವೊಂದು ವಿಶಿಷ್ಟ ರಾಸಾಯನಿಕ ಪರಮಾಣು (Molecule.) ಅನುಕೂಲ ಸನ್ನಿವೇಶದಲ್ಲಿ ಒಂದು ಹೋಗಿ ಎರಡಾಗಿ ತನ್ನ ಸಂತತಿಯನ್ನು ಚಿರಂತನಗೊಳಿಸುತ್ತ ನಡೆಯಿತು.

ರಾಸಾಯನಿಕ ಪರಮಾಣುಗಳಲ್ಲಿ ಅರ್ಜಿನೈನ್ (Arginine) ಮತ್ತು ಸಿಟ್ರುಲೈನ್ (Citrulline) ಎಂಬವು ಮುಖ್ಯವಾದವು. ಡಾ. ಬೀಡಲ್ಲರ ಪ್ರಕಾರ ಇವು ಮೊದಲ ಸೃಷ್ಟಿಯಲ್ಲಿ ಅತಿ ಪ್ರಮುಖ ಪಾತ್ರವಹಿಸಿರಬಹುದೆಂದು ಹೇಳಲಾಗುತ್ತದೆ. ಅಜಕಣವೊಂದು ಈ ಅರ್ಜಿನೈನನ್ನು ಅರಗಿಸಿಕೊಂಡಾಗ ತನ್ನ ಪ್ರತಿಕೃತಿಯನ್ನು ಸೃಷ್ಟಿಸಿತು; ಅಜನಿಂದ (Living Cells) ಪ್ರಜೆಗಳಾದರೂ ಈ ರಾಸಾಯನಿಕ ಕ್ರಿಯೆ ಜ್ವಾಲಾಮುಖಿಯಿಂದಲೋ ರೇಡಿಯೋ ಕ್ರಿಯೆಯಿಂದಲೊ ನಡೆದಿರಲು ಶಕ್ಯವಿದೆ. ಇದರ ಜ್ಞಾನದಿಂದ ಬದುಕಿರುವ ಜೀವಕಣಗಳ ಪ್ರವೃತ್ತಿಯನ್ನು ಬದಲಾಯಿಸಿ, ದೇಹ ಬುದ್ಧಿಗಳ ಆರೋಗ್ಯ ಆಯುಷ್ಯ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಬಹುದೆಂದು ಸಂಶೋಧಕರಿಂದು ನಂಬಿದ್ದಾರೆ. ಶಿವಶಕ್ತಿಯಂತೆ ಜೆನಿ ಮತ್ತು ವೈರಸ್ಸುಗಳೆಂಬ ಮೂಲದ್ರವ್ಯಗಳಿವೆ. ಒಂದರಂತೆಯೇ ಇನ್ನೊಂದಿದ್ದರೂ ವೈರಸ್ಸು ಜಡ, ಜೆನಿ ಜೀವ! ರಾಸಾಯನಿಕ ಕ್ರಿಯೆಯಿಂದ ಒಂದು ಹೋಗಿ ಇನ್ನೊಂದಾಗಬಹುದು; ಎರಡೂ ಹೋಗಿ ಮೂರನೆಯದಾದರೂ ಆಶ್ಚರ್ಯಪಡುವಂತಿಲ್ಲ!

ಕೆಟ್ಟ ವೈರಸ್ಸುಗಳನ್ನು ಪ್ರತಿಭಟಿಸುವಂಥ, ಅಪಾಯಕರ ಕಣಗಳು ಮರಿಹಾಕದಂತೆ ತಡೆಯಲು ಇಲ್ಲವೆ ಆರೋಗ್ಯಕರ ಕಣಗಳು ಸಂತತಿವೃದ್ಧಿ ಮಾಡುವಂತೆ ಮತ್ತು ತನ್ಮೂಲಕ ಒಳ್ಳೆಯ ದೇಹ ಮತ್ತು ಸುಕಾಬುದ್ಧಿಯನ್ನು ಬೆಳೆಸಲು ಅನುಕೂಲವಾಗುವಂತೆ ಮಾಡಲು ಈ ಜೀವವಿಜ್ಞಾನ ಸಹಾಯಕಾರಿಯೆಂದು ತಜ್ಞರ ಮತ. ರೋಗಪ್ರತಿಬಂಧ, ಆರೋಗ್ಯವರ್ಧನ–ಇವನ್ನು ಸಾಧಿಸಲು ಈ ಅಜಾದಿಕಣಗಳ ಪ್ರಜೋತ್ಪತ್ತಿಯನ್ನು ಹಿಡಿತದಲ್ಲಿ ತರುವುದೇ ಮೂಲೋಪಾಯ. ಹೀಗೆ ಹಿಡಿತದಲ್ಲಿ ತಂದುಕೊಂಡು ಮಿದುಳನ್ನು ವರ್ಧಿಸುವಂಥ ಕಣಗಳ ಸಂತತಿ ಹೆಚ್ಚುವಂತೆ ತತ್ಪ್ರತ್ಯೇಕಗಳ ಸೃಷ್ಟಿಯನ್ನು ಸರಾಗಗೊಳಿಸಿ ಅತಿಮೇಧಾವಿಗಳ ಕುಲವೊಂದನ್ನು ಭವಿಷ್ಯತ್ತು ಕಾಣಬಹುದೆಂದು ವಿಜ್ಞಾನಿಗಳ ಕನಸು. ಆ ಅತಿಬುದ್ಧಿ ಮನ್ವಂತರದಲ್ಲಿ ಮಾನವನು ದೇವರೆ ಆಗದಿದ್ದರೂ ಪುರಾಣದ ದೇವತೆಗಳ ಪಟ್ಟಗಳನ್ನು ಕಸಿದುಕೊಳ್ಳುವಷ್ಟು ಸಮರ್ಥನಾಗಬಹುದಲ್ಲವೆ? ನೋಡೋಣ; ನಡೆಯಲಿ ವಿಜ್ಞಾನ, ಸಂಶೋಧನ, ನವನಿರ್ಮಾಣ!

ನಿದ್ದೆಯಲ್ಲಿ ಕದ್ದು ಕಂಡದ್ದು!

ಎಲ್ಲರೂ ನಿದ್ದೆ ಮಾಡುವವರೇ, ಆದರೆ ನಿದ್ದೆ ಬರುವುದಕ್ಕೇನು ಕಾರಣ, ಬರದಿದ್ದರೇನಾಗುತ್ತದೆ, ಬಂದಾಗ ಹೇಗಿರುತ್ತದೆ–, ಇತ್ಯಾದಿಗಳನ್ನು ಬಲ್ಲವರು ವಿರಳ. ನಿದ್ದೆ ಮಾಡಿದವನನ್ನು 'ಹೇಗಿತ್ತಯ್ಯ ನಿದ್ದೆ?'– ಎಂದು ಕೇಳಿದರೆ ಅವನು "ಸಿಹಿಯನು ತಿಂದಿಹ ಮೂಕನ ಪೊಲು ಇದೆ ಗಹನವು ಅದರ ವಿಚಾರ" ಎನಬೇಕಾಗುತ್ತದೆ!

Sweet is sleep, death is better, but best of all is it never to be born ನಿದ್ದೆ ಮಧುರವಾದದ್ದು, ಸಾವು ಅದಕ್ಕಿಂತಲೂ ಮಧುರ, ಆದರೆ ಎಂದೂ ಹುಟ್ಟದಿರುವುದು ಸರ್ವೋತ್ತಮ ಎಂದ ಒಬ್ಬ ತತ್ವಜ್ಞ. ಹಾಗಾದರೆ ಅಂತಹ ಸಿಹಿನಿದ್ದೆಯಿಂದೇನಾಗುತ್ತದೆ? ಮನುಷ್ಯನ ನಡತೆ ಮತ್ತು ಆರೋಗ್ಯಗಳು ಸುಧಾರಿಸುತ್ತವೆಂದು ಪ್ರೊ. ರೆಸ್ನಾರವರೆನ್ನುತ್ತಾರೆ.

ಬಹಳ ಬಿರುಬಾದ ಹಾಸಿನ ಮೇಲೆ ಮಲಗಿದರೆ ನಿದ್ದೆ ಬರದು, ಬಂದರೂ ಅದರಿಂದ ಮೈಗೆ ನೋವು ಸಂಭವಿಸುವುದೆಂಬುದು ಹೊಸ ಅನುಭವವಲ್ಲ, ಆದರೆ ಅತಿ ಮೆತ್ತಗಿನ ಹಾಸಿನ ಮೇಲೆ [illegible] ... ಕನಸು [illegible] ... ಕಾಣುವುದು ... ನಿದ್ದೆ ... ಹೆಚ್ಚು ಕಾಲ ಹಾಗೇ ... ಫೆಬ್ರುವರಿ ಮತ್ತು ಮಾರ್ಚಗಳಲ್ಲಿ ... ಸುಮ್ಮನೆ ಮಲಗಿದರೆ ... ಒಂದು ಕಡೆ ... ವುದು.

ನಿದ್ದೆ ಮಾಡುವುದೆಂದರೆ, ನಿದ್ರಾದೇವಿ ಬಂದು ಮೊದಲು ನಮ್ಮ ಎಚ್ಚರವನ್ನು ವಶಪಡಿಸಿಕೊಳ್ಳುತ್ತಾಳೆ, ಅನಂತರ ನಮ್ಮ ಸಕಲಾಂಗಗಳನ್ನು ಒಂದೊಂದನ್ನೇ "ಅತಿಮುಖ್ಯಗಳಿಂದ ಮಿದುಳು" ಎಂಬಂತೆ ಹಿಡಿಯುತ್ತ ಕಡೆಯಲ್ಲಿ ಶಬ್ದ ಗ್ರಹಣಶಕ್ತಿಯನ್ನು ಹ್ರಾಸಗೊಳಿಸುತ್ತಾಳೆ. ಎಚ್ಚರವಾಗ ಈ ಕ್ರಮವು ವಿರುದ್ಧವಾಗಿ ಸಂಭವಿಸುತ್ತದೆ.

ಅನಿದ್ರರಿಗೆ ವಿಚಿತ್ರವಾದ ತಲೆನೋವು ಅಂಟಿಕೊಂಡು ಬಿಡುತ್ತದೆ. ಅಂಥವರ ಸಂಖ್ಯೆ ಅಮೇರಿಕದಲ್ಲಿ ಹೆಚ್ಚು, ಅಲ್ಲಿ ಪ್ರತಿವರ್ಷ ೨೫ ರಿಂದ ೩೦ ಸಾವಿರಗಳಷ್ಟು ನಿದ್ರಾಕಾರಕ ಮಾತ್ರೆ Phenobarbital Rose ಮಾರಾಟವಾಗುತ್ತದಂತೆ, ಅವರ ಸೇವನೆಯಿಂದ ಕುಂಭಕರ್ಣಯೋಗ ಕೂಡಲೆ ಒದಗುವುದೆಂದು ಅನಿದ್ರರ ಅಭಿಪ್ರಾಯ. ಚಿಂತೆ ಆಯಾಸ, ಕಾಹಿಲೆಗಳಿಂದ ನಿದ್ರಾದೇವಿ ಅಪ್ರಸನ್ನಳಾಗುತ್ತಾಳೆ. ಅವಳ ಅಪ್ರಸನ್ನತೆಯಿಂದ ಹೃದಯ ದೌರ್ಬಲ್ಯ, ಶೀಘ್ರಕೋಪ, ಜಡತೆ, ಮರೆವು ಮುಂತಾದವು ಸಂಭವಿಸುತ್ತವೆ. ಅಮೇರಿಕೆಗೆ ಕೆಲವರ ಅತಾಸಕ್ತಿ ಇಲ್ಲವೆ ಸ್ವಾಂತರ್ಪ್ರವೇಶನ, ಆತ್ಮಹತ್ಯಾ, ಅತಿನಿದ್ರಾವರ್ತ್ತಿ ಇವೇಕಾರಣ.

ಮಿದುಳಿನ ಒಂದೆಡೆ ಒಂದು ಮಡಿಕೆ Fold ಇರುತ್ತದೆ. ಅದು ನಿದ್ದೆಯ ಬೀಗದ ಕೈ. ಅದಕ್ಕೆ ವಿದ್ಯುತ್ತನ್ನು ಸಂಬಂಧಿಸಿದರೆ ನಿಮಿಷಾರ್ಧದಲ್ಲಿ ನಿದ್ದೆ ಬರುವುದೆಂದು ವಿಯನ್ನದ ಇಕಾನೋಮೋ ಎಂಬ ಮಿದುಳಿನ ತಜ್ಞ ಪರೀಕ್ಷಿಸಿದ್ದಾನೆ. ನಮ್ಮಲ್ಲಿಯ ಸೋಮಾರಿಗಳು ಈ ಉಪಾಯವನ್ನು ಕೇಳಿ ತಮಗಿಂಥ ಅನುಕೂಲ ದೊರಕಬಾರದೇ! ಎಂದು ತವಕಪಡುವುದು ಆಶ್ಚರ್ಯಕರವೇನಲ್ಲ.

[illegible]

[illegible] ಎಂದು ಅವರು [illegible] [illegible]ದ್ದಾರೆ.

ಶಾಂತತೆ ನೆಲೆಗೊಂಡ ನಂತರ ಕಾಶ್ಮೀರದಲ್ಲಿ ಸಾರ್ವತ್ರಿಕ ಜನಮತಗಣನೆಗೆ ಭಾರತವು ಸಿದ್ಧವಿದ್ದರೂ ಪಾಕಿಸ್ತಾನಕ್ಕೆ ತನ್ನ ಗೆಲುವಿನ ಬಗ್ಗೆ ಅನುಮಾನವಾಗಿ ಆ ಮೊದಲೇ ಮುಂಗೈ ಕಸುವಿನಿಂದ ಕಾಶ್ಮೀರವನ್ನು ಸ್ವಾಧೀನಪಡಿಸಿಕೊಳ್ಳುವ ಉಪಕ್ರಮದಲ್ಲಿ ತೊಡಗಿದ್ದು ಒಡೆದು ಕಾಣುತ್ತಿದೆ. ಏಕೆಂದರೆ ಅದು ಕಾಶ್ಮೀರದಲ್ಲಿ ತೀಟು ಆಟ್ಟುಳ್ಳಾರ ಆಳಿಕೆ ಕೊನೆಗೊಳ್ಳಬೇಕೆಂದೂ ಹಿಂದುಸ್ತಾನ ಸೈನಿಕರನ್ನು ಹಿಂದೆಗೆದುಕೊಳ್ಳಬೇಕೆಂದೂ ಭಾರತ ಸರಕಾರಕ್ಕೆ ಸೂಚನೆ ಕಳಿಸಿದೆ. ಈ ದಾಳಿಯಲ್ಲಿ ತನ್ನ ಅಂಗವಿಲ್ಲವೆಂದು ಬಾಯಲ್ಲಿ ಪಾಕಿಸ್ತಾನದ ಅಧಿಕಾರಿಗಳು ಹೇಳುವದು ನಿಜವಿದ್ದರೆ ತೀಟು ಆಟ್ಟುಳ್ಳಾರ ಆಳಿಕೆ ಬೇಡವೆಂದೇಕೆ ಆಗ್ರಹಪಡಬೇಕು?

ಕಾಶ್ಮೀರದ ಸಮಸ್ಯೆಯನ್ನು ಭದ್ರತಾಮಂಡಲವು ಕೈಕೊಳ್ಳಬೇಕಾಯಿತು ಎಂಬ ಬಗ್ಗೆ ಪಂ. ಜವಾಹರಲಾಲರು ತಮ್ಮ ಇತ್ತೀಚಿನ ಒಂದು ಹೇಳಿಕೆಯಲ್ಲಿ ಹೀಗೆ ಹೇಳಿದ್ದಾರೆ.

"ಕಾಶ್ಮೀರವು ಸಮರ ನೀತಿಯ ದೃಷ್ಟಿಯಿಂದ ಮಹತ್ವದ ಸಂಸ್ಥಾನವಾಗಿದೆ. ಅಲ್ಲಿ ಸ್ವಾತಂತ್ರ್ಯ [illegible] ನಡೆಸಿದ ಮುಸ್ಲಿಂ ಬಾಂಧವರ ಕೋರಿಕೆ [illegible] ಹಿಂದುಸ್ತಾನ ಸರಕಾರವು ಸಹಾಯ ಕಳಿ[illegible] ಕಾಶ್ಮೀರದ ಮಹಾರಾಜರು ಅಲ್ಲಿಯ [illegible] ಪರಿಷತ್ತು ನಮ್ಮ ಸಹಾಯ ಯಾಚಿಸಿದರು. ತಮ್ಮ ಸೈನ್ಯ ಸಹಾಯ ಕಳಿಸಿದ್ದಾದರೂ ಕಾಶ್ಮೀರದ ಭವಿತವ್ಯವನ್ನು ಅಲ್ಲಿಯ ಪ್ರಜೆಗಳೇ ಕೊನೆಗೆ ನಿರ್ಧರಿಸಬೇಕೆಂಬ ಕರಾರಿನಿಂದ.

ಕಾಶ್ಮೀರದ ದಾಳಿಗಾರರಿಗೆ ಪಾಕಿಸ್ತಾನ ನೆರವಾಗುತ್ತಿದೆ ಎಂಬುದು ನಮಗೆ ಖಂಡಿತವಾಗಿದೆ. ಕಾಶ್ಮೀರದಲ್ಲಿ ನೂರಕ್ಕೆ ೯೦ ರಷ್ಟು ಮುಸ್ಲಿಂರಿದ್ದರೂ ಅವರು ನಮ್ಮ ಪಕ್ಷದವರಿದ್ದಾರೆ. ಅವರಿಗೆ ನೆರವಾಗಲೆಂದೇ ನಾವಲ್ಲಿಗೆ ಹೋಗಿದ್ದೇವೆ. ಅಲ್ಲಿಯ ಮುಸ್ಲಿಂರೇ ಪಾಕಿಸ್ತಾನ ಸೇನೆಯನ್ನು ಎದುರಿಸಿ ಹೊಡೆದಟ್ಟುತ್ತಿದ್ದಾರೆ. ಪಾಕಿಸ್ತಾನದ ಅಪಪ್ರಚಾರಕ್ಕೆ ಇದು ಒಳ್ಳೆಯ ಉತ್ತರವಾಗಿ[illegible]

ನಮ್ಮ ಕ್ಷತಿಗಳೆಲ್ಲ ನಾಗರಿಕ ರೀತಿ ನೀತಿಗಳಿಗೆ ಅನುಸರಿಸಿಯೇ ಇರಬೇಕೆಂಬ ಹವಿಚ್ಛೆ ಮೊದಲೇ [illegible]

ಈ [illegible]ದಲ್ಲಿ ಹಿಂದುಸ್ತಾನ ಸರಕಾರವು, [illegible]ರಾಷ್ಟ್ರ ಸಂಘದ ಭದ್ರತಾ ಮಂಡಲಕ್ಕೆ [illegible] ತನ್ನ ಮನವಿಯನ್ನು ತಾ. ೪ ರಂದು [illegible]. ಇದರಂತೆ ಲೇಕಸಕ್ಸೆಸ್‌ದಲ್ಲಿಯ [illegible]ರಾಷ್ಟ್ರ ಸಂಘದ ಕಚೇರಿಯಿಂದಲೂ ಭಾರತ ಸರಕಾರದ ಈ ಮನವಿಯು ಪ್ರಕಟಿಸಲ್ಪಟ್ಟಿದೆ. ಇದರಲ್ಲಿ ದಾಳಿಗಾರರು ನಡೆಸಿದ ಅತ್ಯಾ[illegible] ಲೂಟಿ ಕೊಳ್ಳೆ ಇವುಗಳ [illegible]. ಗುಡ್ಡಗಾಡ ಜನರಿಗೆ ಅವಶ್ಯಕ [illegible]ಗಳನ್ನು ಹಂಚಿ ಅವರಿಗೆ [illegible] ಕೊಡಲಾಗುತ್ತಿದ್ದ ವಿಷಯವೂ [illegible] ಪಶ್ಚಿಮ ಪಂಜಾಬದಲ್ಲಿ ೧ ಲಕ್ಷದಷ್ಟು [illegible] ಪಾಕಿಸ್ತಾನದ ಆಶ್ರಯದಲ್ಲಿ [illegible] ಪಾಕಿಸ್ತಾನ [illegible] ನಾಗರಿಕರು ಅಧಿಕಾರಿ[illegible] [illegible] ಪಾಕಿಸ್ತಾನದ [illegible]

ಬಡೋದೆಯ ಗ್ರಂಥಾಲಯಗಳು

ಲೇ:— ವೆಂಕಟೇಶ ಸಾಂಗಲಿ ಮುಂಬಯಿ

[ಬಡೋದೆಯ ಗ್ರಂಥಾಲಯಗಳು ವಿದ್ಯಾಪ್ರಸಾರದ ದೃಷ್ಟಿಯಿಂದ ಬಹಳ ಉಪಯುಕ್ತವೆಂದು ಕಂಡಿವೆ. ನಮ್ಮ ಹಳ್ಳಿಗಳಲ್ಲಿ ಅನೇಕ ಹುರುಪಿನ ತರುಣರು ವಾಚನಾಲಯ ಗ್ರಂಥಾಲಯ ತೆರೆಯಬೇಕೆಂಬ ಹಂಬಲದವರಿದ್ದಾರೆ. ಅವರಿಗೆ ಈ ಲೇಖನ ಮಾರ್ಗದರ್ಶಿಯಾದೀತು. ಶ್ರೀ. ವೆಂಕಟೇಶ ಸಾಂಗಲಿ ಅವರು ಇತ್ತೀಚೆಗೆ ಗ್ರಂಥಾಲಯಗಳ ಆಡಳಿತೆಯ ವಿಷಯವಾಗಿ ಒಂದು ಪುಸ್ತಕವನ್ನೇ ಪ್ರಕಟಿಸಿದ್ದಾರೆ. ಹೆಚ್ಚಿನ ವಿವರ ಬೇಕೆನಿಸಿದವರು ಅದನ್ನು ಓದಿ ತಿಳಿಯಬಹುದು.]

ವಿದ್ಯೋಗಿಕ ಬೆಳವಣಿಗೆಗೆ ಮೈಸೂರು, ವಿದ್ಯಾಪ್ರಸಾರಕ್ಕೆ ತಿರುವಾಂಕೂರು ಹೆಸರಾದಂತೆ, ಪಶ್ಚಿಮ ಭಾರತದಲ್ಲಿಯ ದೇಶೀಯ ಸಂಸ್ಥಾನವಾದ ಬಡೋದೆಯು ವಾಚನಾಲಯ ಚಳವಳಿಯನ್ನು ಹಳ್ಳಿಗಳಿಗೆ ಮುಟ್ಟಿಸಿ ಇತರ ಪ್ರಾಂತಗಳಿಗೆ ಮಾರ್ಗದರ್ಶಿಯಾಗಿದೆ. ಕೀರ್ತಿಶೇಷ ಸಯಾಜಿ ಮಹಾರಾಜರು ದೇಶಪರ್ಯಟನೆಗೆ ಹೋದಾಗ, ಇತರ ದೇಶಗಳಲ್ಲಿ—ವಿಶೇಷವಾಗಿ ಅಮೇರಿಕೆಯಲ್ಲಿ-ಗ್ರಂಥಾಲಯವು ಜನಜೀವನದ ಮೇಲೆ ಮಾಡಿದ ಪರಿಣಾಮವನ್ನು ನೋಡಿ ಬೆರಗುಗೊಂಡರು. ಅಜ್ಞಾನದ ಉಚ್ಚಾಟನೆ ಮತ್ತು ಜ್ಞಾನಪ್ರಸಾರದಲ್ಲಿ ದೇಶದ ಅಭ್ಯುದಯಕ್ಕೆ ಗ್ರಂಥಾಲಯಗಳಿಗೆ ಮೂಲವೇಬುದನ್ನು ಅಗಲೆ ಮನಗಂಡರು. ಅದರಂತೆ ತಮ್ಮ ಸಂಸ್ಥಾನದಲ್ಲಿ ಈ ಪ್ರಯೋಗ ಮಾಡಿಯೇ ಬಿಡಬೇಕೆಂಬ ವಿಚಾರದಿಂದ, ಒಬ್ಬ ಗ್ರಂಥಾಲಯಶಾಸ್ತ್ರ ಪಾರಂಗತನಾದ ಅಧಿಕಾರಿಯನ್ನು ಕರೆತಂದರು.

ಇದೀಗ ನಮ್ಮ ಪ್ರಾಂತದಲ್ಲಿ ಉದಯವಾಗಲಿರುವ ಈ ಆಂದೋಲನವು ಯಶಸ್ವಿಯಾಗಬೇಕಾದರೆ ಬಡೋದೆಯ ಪ್ರಯೋಗದಿಂದ ಕೆಲವು ಮಾತು ತಿಳಿದುಕೊಳ್ಳುವದು ಅವಶ್ಯವಾಗಿದೆ-ಮುಖ್ಯವಾಗಿ ಸರಕಾರ, ಜನತೆ, ಹಾಗೂ ಕೆಲಸಗಾರರು ಈ ಮೂರು ಶಕ್ತಿಗಳ ಒಕ್ಕೂಟದ ಹಾದಿಯನ್ನು ನಾವಿಂದು ಹುಡುಕಬೇಕು. ಮೂರಕ್ಕೂ ಮೂರು ದಿಕ್ಕಿನ ಮುಖಗಳಾದರೆ ಸಾಧ್ಯಗೆ ಕೇಡು. ಕರ್ನಾಟಕದ ಪಾಲಿಗಂತೂ ಸರಕಾರವು ಜನತೆಯ ಭಾಷೆಯನ್ನು ಅರಿಯದಿರುವದರಿಂದ ತೊಡಕು ಇನ್ನೂ ಹೆಚ್ಚು. ಬಡೋದೆಯ ಜನತೆಗೆ ಇಂತಹ ಆತಂಕ ಇರಲೆ ಇಲ್ಲ. ಅವರಿಗೆ ಬೇಕೆನಿಸುವದಕ್ಕಿಂತ ಮುಂಚಿತವಾಗಿ, ಅಂದರೆ ಈಗ ಸುಮಾರು ೪೦ ವರ್ಷಗಳ ಮೊದಲೇ ಸರಕಾರದವರು ಪ್ರಜೆಗಳ ಜ್ಞಾನಾಭಿವೃದ್ಧಿಗೆ ಮಾರ್ಗ ಕಲ್ಪಿಸುವ ಹವಣಿಕೆಯಲ್ಲಿದ್ದರು. ೧೯೦೬ರ ಸುಮಾರಿಗೆ ಸಂಸ್ಥಾನದಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವು ಅಮಲಿನಲ್ಲಿ ಬಂದಿತು. ಇದರ ನಿಜವಾದ ಪ್ರಯೋಜನ ವಾಚನಾಲಯಗಳ ಪ್ರಸಾರದಿಂದಲೇ ಉಂಟಾದುದು.

ರಾಜ್ಯದಾಡಳಿತದಲ್ಲಿ ಗ್ರಂಥಾಲಯ ಚಳುವಳಿಗೆ ಪ್ರತ್ಯೇಕವಾದ ಖಾತೆ ಏರ್ಪಟ್ಟದ್ದು ೧೯೧೧ರಲ್ಲಿ ಆ ಮೊದಲು ಸಂಸ್ಥಾನದಲ್ಲಿ ಕೇವಲ ೨೪೭ ಗ್ರಂಥಾಲಯಗಳಿದ್ದವು. ಈ ೩೫ ವರ್ಷಗಳ ಅವಧಿಯಲ್ಲಿ ಅವುಗಳ ಪ್ರಗತಿ ಈರೀತಿ ಇದೆ:-

ಜಿಲ್ಲಾ ಹಾಗೂ ನಗರ ಗ್ರಂಥಾಲಯ	೪೬
ಗ್ರಾಮ ಗ್ರಂಥಾಲಯ	೧೨೮೯
ಮಹಿಲಾ ಗ್ರಂಥಾಲಯ	೧೮
ಮಕ್ಕಳ ಗ್ರಂಥಾಲಯ	೨೦
	೧೩೭೩

ಇದು ಅಲ್ಲದೆ, ಪಟ್ಟಣಗಳಲ್ಲಿ ೨೦, ಹಳ್ಳಿಗಳಲ್ಲಿ ೨೦೨ ಹೀಗೆ ೨೨೨ ವಾಚನಾಲಯ (Reading Room) ಗಳಿವೆ.

ಸಂಸ್ಥಾನದ ಒಟ್ಟು ಜನಸಂಖ್ಯೆ ಸುಮಾರು ೨೮ ಲಕ್ಷ; ಅಕ್ಷರಸ್ಥರು ೮ ಲಕ್ಷಕ್ಕೆ ಸ್ವಲ್ಪ ಮಿಕ್ಕುತ್ತಾರೆ. ಅದರ ನೂರಕ್ಕೆ ೮೪ ಜನರಿಗೆ ಓದುವ ಅನುಕೂಲತೆಗಳನ್ನು ಸರಕಾರದವರು ಮಾಡಿಕೊಟ್ಟಿದ್ದಾರೆ. ೨೧ ಹಳ್ಳಿಯ ಜನರಿಗೆ ಮಾತ್ರ ಗ್ರಂಥಾಲಯಗಳ ಲಾಭವಿಲ್ಲ. ಇವರಿಗೆ ಓದಿನ ಅವಶ್ಯಕತೆ ಎನಿಸಿಲ್ಲ ಮಾತ್ರವಲ್ಲ; ಅವರಿಗೆ

ಯುಕ್ತರಾಷ್ಟ್ರಗಳ ಮಧ್ಯಸ್ಥಿಕೆಯಿಂದ ಶಾಂತತೆ ನೆಲೆಗೊಳ್ಳಲೆಂದೇ ಹಿಂದುಸ್ತಾನ ಸರಕಾರದ ಹಾರೈಕೆ. ಎಂದೇ ಈ ಗಂಭೀರ ಪರಿಸ್ಥಿತಿಯನ್ನು [illegible] ಬೇಗ ಒಂದು [illegible] ಬೇಡಿಕೊಳ್ಳ[illegible] [illegible]

ಸಮಾಜ ಜೀವನದ ಪರಿಚಯೇ ಗೊತ್ತಿಲ್ಲ. ದೂರದೂರವಾಗಿ ಇರುತ್ತಾರೆ. ತೀರ ಹಿಂದುಳಿದವರು.

ಸುಶಿಕ್ಷಿತರು, ವ್ಯಾಸಂಗಿಗಳು, ಶಕ್ತಿಯ ಕಾರಣದಿಂದ ಅರ್ಧಕ್ಕೆ ಶಿಕ್ಷಣ ನಿಲ್ಲಿಸಿದವರು, ಅಕ್ಷರಜ್ಞಾನವಿಲ್ಲದವರು, ಹೀಗೆ ನಾನಾ ತರದ ಜನರಿಗಾಗಿ ಬಡೋದೆಯ ಗ್ರಂಥಾಲಯಗಳು ಸ್ಥಾಪಿತವಾಗಿವೆ ಎಂಬುದು ಒಂದು ವಿಶೇಷ. ಶಿಕ್ಷಿತರಲ್ಲದವರು ಸುಸಂಸ್ಕೃತರಾಗಬೇಕೆಂಬ ಉದ್ದೇಶದಿಂದ ಅವರಿಗಾಗಿ ಕೀರ್ತನಗಳು, ಭಾರತ-ರಾಮಾಯಣ ಪ್ರವಚನ, ಪ್ರದರ್ಶನ, ವ್ಯಾಖ್ಯಾನ ಮುಂತಾದ ಕಾರ್ಯಕ್ರಮಗಳನ್ನು ಗ್ರಂಥಾಲಯಗಳಲ್ಲಿ ವೇಳಿಂದ ವೇಳೆ ಏರ್ಪಡಿಸುತ್ತಾರೆ. ಮಹಿಳಾಗ್ರಂಥ ಭಾಂಡಾರಗಳಲ್ಲಿ ಹೆಣಿಗೆ, ಹೊಲಿಗೆ ಮುಂತಾದ ವ್ಯವಸಾಯಗಳಿಗೆ ಗಾಯನ, ನರ್ತನ ಇತರ ಕಲಾಪ್ರಯೋಗಗಳಿಗೆ ಅನುಕೂಲತೆ ಇದೆ. ಈ ಭಾಂಡಾರಗಳ ಆಡಳಿತೆಯನ್ನೆಲ್ಲ ಹೆಣ್ಣುಮಕ್ಕಳೇ ನೋಡಿಕೊಳ್ಳುತ್ತಾರೆ.

ಸರಕಾರದ ನೇತೃತ್ವದಲ್ಲಿ ಜನತೆಯು ಸುಸಂಘಟಿತವಾಗಿ ಕೆಲಸ ಮಾಡುವ ಪ್ರತ್ಯಕ್ಷ ನಿದರ್ಶನ ಈ ಯೋಜನೆಯಲ್ಲಿ ಕಂಡು ಬರುತ್ತದೆ. ಊರ ಒಳಿಯರೇ ಕಾರ್ಯಕಾರಿ ಮಂಡಳವನ್ನು ಏರ್ಪಡಿಸಿ, ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷರನ್ನು ಆರಿಸಿ ಕೆಲಸ ಸುರುವು ಮಾಡುತ್ತಾರೆ. ಒಂದು ಹಳ್ಳಿಯ ಗ್ರಂಥಾಲಯವು ಸ್ಥಾಪಿತವಾಗಬೇಕಾದರೆ ಆಸ್ಥೆಯ ಜನರಿಂದ ೭೫ ರೂಪಾಯಿಗಳನ್ನು ಕೂಡಿಸಬೇಕಾಗುವದು. ಇದರಲ್ಲಿಯ ೨೫ ರೂ. ಗಳನ್ನು ಪುಸ್ತಕಕ್ಕಾಗಿ ಬದಿಗಿಟ್ಟು ಉಳಿದ ೫೦ ರೂ. ಗಳನ್ನು ಕಪಾಟು-ಕುರ್ಚಿ ಮೊದಲಾದ ಅವಶ್ಯಕ ಸಾಮಾನುಗಳಿಗೆ ಬಳಸುತ್ತಾರೆ. ಹಳ್ಳಿಗರ ೭೫ ರೂ. ಗಳಲ್ಲಿ ಸರಕಾರದವರು ೨೫ ರೂ. ಗಳನ್ನು ಕೂಡಿಸಿ ೧೦೦ ರೂಪಾಯಿಯ ಪ್ರಸ್ತದಿಂದ ಒಂದು ಹಳ್ಳಿಯ ವಾಚನಾಲಯವು ಪ್ರಾರಂಭವಾಗುತ್ತದೆ. ಇಷ್ಟು ಹಣ ಕೂಡಿಸಲು ಸಮರ್ಥರಲ್ಲದ ಗ್ರಾಮೀಣರು ಕೇವಲ ೨೫ ರೂ. ಗಳಿಂದಲೇ ಒಂದು ವಾಚನಾಲಯವನ್ನು (Reading Room) ತೆರೆಯುತ್ತಾರೆ. ಇಂತಹ ವಾಚನಾಲಯಗಳೇ ಕೆಲವು ವರ್ಷದ ಮೇಲೆ ಗ್ರಂಥಾಲಯಗಳಾಗಿ ಮಾರ್ಪಡುತ್ತವೆ.

ಸಂಸ್ಥೆಯ ವೆಚ್ಚದ ೧/೩ ಭಾರವನ್ನು ಜನತೆಯು ವಹಿಸಲಿಕ್ಕೇ ಬೇಕು ಎಂಬುದು ಮಹತ್ವದ ಅಂಶವಾಗಿದೆ. ಈ ನಿಯಮಕ್ಕೆ ಕಟ್ಟುಬಿದ್ದು ಕಾರ್ಯಕಾರಿ ಮಂಡಳದವರು ವಿಶ್ವ ಪ್ರಯತ್ನದಿಂದ ಧನ ಸಂಗ್ರಹಿಸುತ್ತಾರೆ. ಜನರಿಂದ ಕೊಡುಗೆಗಳನ್ನು ಪಡೆಯುತ್ತಾರೆ. [illegible] ಹಬ್ಬ ಹರಿದಿನಗಳಂದು 'ಫಂಡು' ಎತ್ತುತ್ತಾರೆ. ಮದುವೆ ಇತರ ಸಮಾರಂಭಗಳ ಕಾರಣದಿಂದ ದಾನಗಳೂ ದೊರೆಯುತ್ತವೆ. ಹೀಗೆ ಕೂಡಿಸಿದ ನಿಧಿಯಲ್ಲಿ ಕೆಲವು ಭಾಗವು ಕಾದಿಟ್ಟ ನಿಧಿಗೆ ಸೇರಲೇಬೇಕೆಂಬುದು ಸರಕಾರದ ಇನ್ನೊಂದು ಬಂಧನ. ೧೯೧೬ ರಿಂದ ಈ ಕಾದಿಟ್ಟ ನಿಧಿಯು ಪ್ರಾರಂಭವಾಗಿದೆ. ಈ ನಿಧಿಗೆ ಬರುವ ಬಡ್ಡಿಯು ಪ್ರತಿ ವರ್ಷ ಆದಾಯದ ಒಂದು ಭಾಗವೇ ಎನಿಸುತ್ತದೆ. ಈ ಹಣವು ಜನತೆಯದು. ಅದರ ಸದ್ವಿನಿಯೋಗವಾಗಬೇಕೆಂದು ಮೇಲ್ವಿಚಾರಣೆ ನೋಡುವ ಕೆಲಸವಷ್ಟೇ ಸರಕಾರದ್ದು.

ಪುಸ್ತಕ ಭಾಂಡಾರಗಳಿಗೆ ಪ್ರತ್ಯೇಕ ಕಟ್ಟಡಗಳಿರುವದು ಊರವರ ಉತ್ಸಾಹದ ಹಾಗೂ ಕರ್ತೃತ್ವದ ಕುರುಹು. ತಮ್ಮ ಸಂಸ್ಥೆಯೂ ಸ್ವತಂತ್ರ ಕಟ್ಟಡವನ್ನು ಪಡೆಯಬೇಕು. ಸುತ್ತಮುತ್ತಲಿನ ಹಳ್ಳಿ-ಪಟ್ಟಣಗಳಿಗಿಂತ ಪ್ರಬಲವಾಗಬೇಕು ಎಂಬ ಸ್ವಾಭಿಮಾನ ಬಹಳ ಜನರಲ್ಲಿ ಇದ್ದೇ ಇರುತ್ತದೆ. ಬಡೋದೆಯ ಗ್ರಂಥಾಲಯಗಳಿಗೆ ಸ್ವತಂತ್ರ ಕಟ್ಟಡಗಳಾಗಲು ನಾಗರಿಕರ ಈ ಸ್ವಾಭಿಮಾನವೂ ಒಂದು ಕಾರಣ. ಶಾಲೆಯ ಒಂದು ಕೋಣೆಯಲ್ಲಿ ಬಹುತರವಾಗಿ ಗ್ರಂಥಾಲಯಗಳು ಬೀಡಾರ ಹೂಡಿರುವವು. ತೀರ ಕೆಲವೆಡೆಗೆ ಬಾಡಿಗೆಯ ಮನೆಯಲ್ಲಿ ಜಾಳ್ಗೆ ನಡೆಸಿರುವವು. ೧೯೩೧ ರಿಂದ ಸರಕಾರದವರು ಪ್ರತಿ ವರುಷದ ಅಂದಾಜು ಪತ್ರಿಕೆಯಲ್ಲಿ ೧೦೦೦೦ ರೂ. ಗಳನ್ನು ಕಟ್ಟಡ ನಿಧಿಯೆಂದು ತೆಗೆದಿಡುತ್ತಾರೆ. ಸಂಸ್ಥೆಯ ವಾರ್ಷಿಕ ವೆಚ್ಚದಂತೆ, ಕಟ್ಟಡದ ವಿಷಯವಾಗಿಯೂ ೧/೩ ಭಾಗವನ್ನು ಸ್ಥಳಿಕರು ಕೂಡಿಸಬೇಕು. ಇನ್ನುಳಿದ ೨/೩ ಸರಕಾರ ಹಾಗೂ ಸ್ಥಾನಿಕ ಸಂಸ್ಥೆಗಳ ಪಾಲಿನದು. ತಮ್ಮ ಭಾಗದ ೧/೩ ಹಣವನ್ನಲ್ಲದೆ ಇನ್ನೂ ಒಂದು ಸಾವಿರ ರೂಪಾಯಿಗಳ ನಿಧಿಯೊಂದನ್ನು ಸಾರ್ವಜನಿಕರು ಕಾದಿಟ್ಟು ಅದರ ಬಡ್ಡಿಯಿಂದ ಕಟ್ಟಡದ ದುರಸ್ತಿಯನ್ನು ನೋಡಿಕೊಳ್ಳುವರು. ಗ್ರಂಥಾಲಯದ ಕಟ್ಟಡವು ಕನಿಷ್ಟ ೩೦೦೦ ರೂಪಾಯಿಯ ಬೆಲೆಯದಾಗಿರಬೇಕು ಎಂದು ನಿಯಮವಿದೆ. ಸಂಸ್ಥಾ[illegible]

ಸುಮಾರು ೨೦೦.

ಸಂಸ್ಕೃತಿ ಪೋಷಣೆಯ ವಿಶಾಲ ದೃಷ್ಟಿಯೂ ವಿಜ್ಞಾನದ ನಿಶಿತ ದೃಷ್ಟಿಯೂ ಸಮನ್ವಯಗೊಂಡಾಗಲೇ ಈ ಚಳವಳಿಯ ಯಥಾರ್ಥ ಪ್ರಯೋಜನ ದೊರೆಯುವದು ಸಾಧ್ಯ. ಈ ಮಾತಿನ ಯಥಾರ್ಥತೆ ಬಡೋದೆಯ ಯೋಜನೆಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. 'ಹಳ್ಳಿಗೊಂದು ಗ್ರಂಥ ಭಾಂಡಾರ' ಎಂಬ ಪ್ರಚಾರ ಕೈಕೊಂಡಂತೆಯೇ ರಾಜಧಾನಿಯ ಮುಖ್ಯ ಗ್ರಂಥ ಭಾಂಡಾರವಾದ 'ಸೆಂಟ್ರಲ್ ಲಾಯಬ್ರರಿ'ಯ ಆಡಳಿತೆಯನ್ನು ಶಾಸ್ತ್ರಬದ್ಧವಾಗಿ ಮಾಡಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ. ಪರದೇಶದಲ್ಲಿ ಅನುಭವ ಪಡೆದ ಗ್ರಂಥಾಲಯ ಶಾಸ್ತ್ರ ಪರಿಣತರು ಇಲ್ಲಿ ಬಹುತರವಾಗಿ ಅಧಿಕಾರಿಗಳು. ಸಂಸ್ಥಾನದ ಗ್ರಂಥ ಭಾಂಡಾರಗಳಿಗೆಲ್ಲ ಮಾಡುತ್ತಿದ್ದ ವೆಚ್ಚದ ಸರಾಸರಿ ಅರ್ಧ ಭಾಗ ಈ ಸಂಸ್ಥೆಗೆ ಮೀಸಲು. ರಾಜ್ಯದ ಗ್ರಂಥಾಲಯ ಚಳವಳಿಗೆ ಇದು ಕೇಂದ್ರ ಸಂಸ್ಥಾನಕ್ಕೆ ಇದು ರಾಷ್ಟ್ರೀಯ ಗ್ರಂಥಾಲಯ. ಅಂದರೆ ರಾಷ್ಟ್ರಕ್ಕೆ ಸಂಬಂಧಿಸಿದ, ರಾಷ್ಟ್ರೀಯ (ಜನತೆಯ) ಭಾಷೆಯಲ್ಲಿ ಪ್ರಕಟವಾದ ಎಲ್ಲ ಸಾಹಿತ್ಯವನ್ನೂ ಈ ಗ್ರಂಥಾಲಯವು ಸಂಗ್ರಹಿಸುವದು. ಅಲ್ಲದೆ ಬಡೋದೆಯ ಇತಿಹಾಸ ಸಂಸ್ಕೃತಿಗೆ ಸಂಬಂಧಪಟ್ಟ ಇಂಗ್ಲೀಷು ಪ್ರಕಟನೆಗಳೂ ಇಲ್ಲಿ ದೊರೆಯುವಂತೆ ಮಾಡುವದು ರಾಜ್ಯಕರ್ತರ ಆಶಯವಾಗಿದೆ. ರಾಜ್ಯದಾಡಳಿತೆಗೆ ಸಂಬಂಧಪಟ್ಟ ಗ್ರಂಥಗಳು, ಕಾಯಿದೆ—ಕಾನೂನ, ಸಂಘ-ಸಮಿತಿ, ಪರಿಷತ್ತು—ಗೋಷ್ಠಿಯ ವರದಿಗಳು, ಅರ್ಥ ಶಾಸ್ತ್ರಕ್ಕೆ ಸಂಬಧಿಸಿದ ಪಟ್ಟಿ—ಪತ್ರಿಕೆ, ಅಂಕಿ—ಸಂಖ್ಯೆಗಳು ಈ ಭಾಂಡಾರದಲ್ಲಿ ಅದ್ಯಾವತ್ ಸಿದ್ಧವಾಗಿರಬೇಕು. ಕೆಲವು ದೃಷ್ಟಿಯಿಂದ ನಮ್ಮ ಪ್ರಾದೇಶಿಕ ವಾಚನಾಲಯಗಳ ಉದ್ದೇಶವು ಬಡೋದೆಯ ಕೇಂದ್ರ ಗ್ರಂಥ ಭಾಂಡಾರದಂತೆಯೇ ಇದೆ.

ನಮ್ಮ ಪ್ರಾಂತಿಕ ಸರಕಾರದ ಹೊಸ ಯೋಜನೆಯಂತೆಯೆ ಬಡೋದೆಯಲ್ಲಿಯೂ ಜಿಲ್ಲೆಗೊಂದು ಜಿಲ್ಹಾ ಗ್ರಂಥಾಲಯ, ನಾಲ್ಕು ಸಾವಿರಕ್ಕೆ ಮಿಕ್ಕಿದ ಜನವಸತಿಯುಳ್ಳ ಊರಿಗೊಂದು ನಗರ ಗ್ರಂಥಾಲಯ (ಅದು ತಾಲೂಕಿನ ಸ್ಥಳವಾಗಿದರೆ ತಾಲೂಕು ಗ್ರಂಥಾಲಯ) ಹಳ್ಳಿಯ ಗ್ರಂಥಾಲಯ, ಕೊನೆಗೆ ಪ್ರಚಾರ ಪುಸ್ತಕಾಲಯ ಎಂಬುದಾಗಿ ವಿಂಗಡಿಸಲಾಗಿವೆ. ಪ್ರಚಾರ ಪುಸ್ತಕಾಲಯಗಳು ಮುಂಬಯಿ ಸರಕಾರದ ಯೋಜನೆಯಲ್ಲಿಲ್ಲ.

ಸರಕಾರದ ಈ ಲೋಕೋಪಯೋಗಿ ಕಾರ್ಯದಲ್ಲಿ ಜನತೆಯ ಸಹಕಾರವು ಸ್ತೋತ್ರಾರ್ಹವಾಗಿದೆ. ಸ್ಥಳಿಕ ಭಾಂಡಾರಗಳನ್ನು ಯಶಸ್ವಿಯಾಗಿ ನೋಡಿಕೊಂಡು ಹೋಗುವದು ಮಾತ್ರವಲ್ಲ, ವಾಚನಾಲಯದ ಕಟ್ಟಡಗಳು ಜನತೆಯ ಬೆಂಬಲದಿಂದಲೇ ಮೂರ್ತಸ್ವರೂಪ ಪಡೆದಿವೆ. ಈ ಚಳವಳಿಯಲ್ಲಿ ಆಸಕ್ತಿಯುಳ್ಳ ಹಲವರು 'ಲಾಯಬ್ರರೀಜ ಕೋಆಪರೇಟಿವ್ ಸೋಸಾಯಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಎಲ್ಲ ಭಾಂಡಾರಗಳಿಗೆ, ಅವಶ್ಯಕ ಸಾಮಾನು ಪುಸ್ತಕ ಪತ್ರಿಕೆ ಕೊಳ್ಳುವದರಲ್ಲಿ ನೆರವಾಗುವರು. 'ಪುಸ್ತಕಾಲಯ' ಎಂಬ ಹೆಸರಿನ ಗುಜರಾಥಿಪತ್ರಿಕೆಯನ್ನು ನಡೆಸಿಕೊಂಡು ಬಂದಿರುವರು. ಹಳ್ಳಿಯ ಗ್ರಂಥ ಭಾಂಡಾರಿಗಳಿಗೆ ಶಿಕ್ಷಣ ಕೊಟ್ಟು ತರಬೇತು ಮಾಡುವದಕ್ಕಾಗಿ 'ಬಡೋದಾ ಲಾಯಬ್ರರಿ ಅಸೋಸಿಯೇಶನ್' ಎಂಬ ಬೇರೊಂದು ಸಂಸ್ಥೆಯಿದೆ. ಗ್ರಂಥಾಲಯ ಪರಿಷತ್ತು ನೆರೆಸುವದು, ಪ್ರದರ್ಶನ ಏರ್ಪಡಿಸುವದು ಇವೇ ಮುಂತಾದ-ಜನತೆಯನ್ನು ಗ್ರಂಥಾಲಯದಲ್ಲಿ ಆಸಕ್ತರನ್ನಾಗಿ ಮಾಡುವ ಯತ್ನಗಳನ್ನು ಅದು ಕೈಕೊಳ್ಳುತ್ತದೆ. ಈ ಎರಡು ಸಂಸ್ಥೆಗಳು ಸರಕಾರಕ್ಕೆ ಅತ್ಯಂತ ಸಹಕಾರ ನೀಡುತ್ತಿವೆ; ಅವರ ಕೆಲಸದ ಅರ್ಧ ಭಾರವನ್ನೇ ಕಡಿಮೆ ಮಾಡಿವೆ. ನಾನು ಮೊದಲೇ ಹೇಳಿದಂತೆ, ಜನತೆ, ಕೆಲಸಗಾರರು, ಹಾಗೂ ಸರಕಾರ ಈ ಮೂವರ ಒಮ್ಮುಖ ಕಾರ್ಯವೇ ಬಡೋದೆಯ ವೈಶಿಷ್ಟ್ಯ.

ಭದ್ರತಾಮಂಡಲದಲ್ಲಿ ಕಾಶ್ಮೀರದ ಪ್ರಶ್ನೆ

ಭದ್ರತಾ ಮಂಡಲದಲ್ಲಿ ಕಾಶ್ಮೀರದ ಪ್ರಶ್ನೆ ಚರ್ಚೆಗೆ ಬಂದಾಗ ರಶಿಯವು ಹಿಂದುಸ್ತಾನಕ್ಕೆ ಬೆಂಬಲಕೊಡುವುದೆಂದು ತಿಳಿದುಬಂದಿದೆ. ಅರ್ಜಂಟೀನದ ಹೊರತು ಉಳಿದ ಎಲ್ಲರಾಷ್ಟ್ರಗಳ ಬೆಂಬಲ ಹಿಂದುಸ್ತಾನಕ್ಕೆ ಇದೆ. ಈ ಪರಿಸ್ಥಿತಿಯನ್ನು ಪರಿಶೀಲಿಸಲು ಒಂದುಸಮಿತಿಯನ್ನು ನಿಯಮಿಸಬಹುದೆಂದು ರಶಿಯವು ಸೂಚಿಸಬಹುದು. ಇಂಗ್ಲಂಡು ಮಾತ್ರ ತಟಸ್ಥವಾಗಿ ಉಳಿಯಬಹುದೆಂದು ಊಹಿಸಲಾಗಿದೆ.

ಕೊಡಗ ಮತ್ತು ಬಂಗನಪಲ್ಲಿ ಸಂಸ್ಥಾನಗಳನ್ನು ಅಕ್ಕಪಕ್ಕದ ಜಿಲ್ಲೆಗಳಲ್ಲಿ ವಿಲೀನಗೊಳಿಸಬೇಕೆಂದು ಸಂಸ್ಥಾನ ಖಾತೆಯವರು ವಿಚಾರ ನಡೆಸಿರುವರು.

ಸರದಾರರ ಸದುಪದೇಶ

ಹಿಂದುಸ್ತಾನ ಸರಕಾರದ ಉಪ ಮುಖ್ಯ ಮಂತ್ರಿಗಳೂ ತಮ್ಮ ಆಯುಷ್ಯವನ್ನೇ ರಾಷ್ಟ್ರಸೇವೆಯಲ್ಲಿ ಸವಿಸಿದವರೂ ಆಗಿರುವ ಸರದಾರ ವಲ್ಲಭಭಾಯಿ ಪಟೇಲರು ದೇಶದ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಸ್ಪಷ್ಟವಾಗಿ ಮಾತಾಡುವವರಲ್ಲಿ ಮುಖ್ಯರೆಂದು ಹೇಳಬಹುದು. ಅವರು ತಮ್ಮ ಇತ್ತೀಚಿನ ಸಂಚಾರದಲ್ಲಿ ಕೂಲಿಕಾರರಿಗೆ ಮುಸಲ್ಮಾನರಿಗೆ ಮತ್ತು ಹಿಂದುಮಹಾಸಭೆಯವರಿಗೆ ಕೆಲ ಮಹತ್ವದ ಮಾತುಗಳನ್ನು ಹೇಳಿರುವರು. ಹಿಂದುಸ್ತಾನವು ಅಭಿವೃದ್ಧಿ ಹೊಂದಬೇಕಾದರೆ ಹಿಂದೀಯರೆಲ್ಲರೂ ಒಮ್ಮನಸ್ಸಿನಿಂದ ಅದಕ್ಕಾಗಿ ಪ್ರಯತ್ನಿಸಬೇಕಾಗುವುದು. ಯಾವುದೊಂದು ಗುಂಪಾಗಲಿ, ಜಾತಿ ಪಕ್ಷ ಪಂಗಡಗಳಾಗಲಿ ವಿರೋಧಕ, ವಿಧ್ವಂಸಕ ವೃತ್ತಿಯನ್ನು ತಾಳಿದರೆ ದೇಶವೆಂದೂ ಸುಖ ಸಮೃದ್ಧಿಗಳಲ್ಲಿ ಓಲಾಡಲಾರದು. ಅಂತೆಯೆ ಸರದಾರರಂಥ ದೇಶಭಕ್ತರು ಕರ್ತವ್ಯದ ಅರಿವನ್ನು ಎಲ್ಲರಿಗೂ ಮಾಡಿಕೊಡುತಿರುವರು. ಮುಸ್ಲಿಂ ಲೀಗಿನವರು ಛಲದಿಂದ ಪಾಕಿಸ್ತಾನವನ್ನು ಪಡೆದರು. ಆದರೆ ದೇಶದಲ್ಲಿ ಶಾಂತತೆ ನೆಲಸಲಿಲ್ಲ. ಭೀಕರ ಹತ್ಯಾಕಾಂಡಗಳು ನಡೆದೇ ಇವೆ. ಈಗ ಕಾಶ್ಮೀರದ ಪ್ರಶ್ನೆ ಹೆಚ್ಚು ಕ್ಷೋಭಕ್ಕೆ ಕಾರಣವಾಗಿದೆ. ಪಾಕಿಸ್ತಾನದಲ್ಲಿಯ ಮುಸಲ್ಮಾನರ ಮಾತನ್ನು ಸದ್ಯಕ್ಕೆ ಬಿಟ್ಟುಗೊಟ್ಟರೂ ಹಿಂದುಸ್ತಾನದಲ್ಲಿಯ ಮುಸಲ್ಮಾನರು ತಮ್ಮ ಕರ್ತವ್ಯವನ್ನು ಮಾಡಬೇಕಲ್ಲವೆ? ಕಾಶ್ಮೀರದ ಸಂಬಂಧದಲ್ಲಿ ಹಿಂದೀ ಮುಸಲ್ಮಾನರು ತಮ್ಮ ಅಭಿಪ್ರಾಯವನ್ನು ಏಕೆ ವ್ಯಕ್ತಪಡಿಸಲಿಲ್ಲ ಎಂದು ಸರದಾರರು ಕೇಳಿದ್ದು ಸಮಯೋಚಿತವಾಗಿದೆ. ದಾಳಿಗಾರರ ಹೆಸರು ಮುಂದೆ ಮಾಡಿ ಪಾಕಿಸ್ತಾನದವರು ಕಾಶ್ಮೀರದಲ್ಲಿ ನಡೆಸಿದ ದುಷ್ಕೃತ್ಯಗಳನ್ನು ಖಂಡಿಸುವದು ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವಾಗಿದೆ. ಪಾಕಿಸ್ತಾನಕ್ಕೆ ಹೋಗಬಯಸುವವರು ಹೋಗಲಿ, ಅಲ್ಲಿ ಸುಖವಾಗಿ ಬಾಳಲಿ ನಮ್ಮನ್ನು ಇಲ್ಲಿ ಸುಖವಾಗಿ ಇರಗೊಡಲಿ ಎಂದು ಸರದಾರರು ಹೇಳಿದ್ದು ಯಥೋಚಿತವಾಗಿದೆ. ಆದರೆ ಹಿಂದುಸ್ತಾನದಲ್ಲಿ ಉಳಿಯಬಯಸುವ ಮುಸಲ್ಮಾನರು ಇಲ್ಲಿನ ವಾತಾವರಣದಲ್ಲಿ ಸಂಪೂರ್ಣ ಸಮರಸವಾಗಿ ಉಳಿಯುವದು ಅವಶ್ಯ. ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸದ್ಯದಂತೆಯೆ ತಿಕ್ಕಾಟ ನಡೆದರೆ ಭವಿತವ್ಯವನ್ನು ಊಹಿಸಬಹುದು ಎಂದು ಸರದಾರರು ಮಾರ್ಮಿಕವಾಗಿ ಹೇಳಿರುವರು. ಇಷ್ಟೊಂದು ದೀರ್ಘಾವಧಿಯ ನಂತರ ಸಂಪಾದಿಸಿದ ಸ್ವಾತಂತ್ರ್ಯವನ್ನು ನಾವು ಅರಗಿಸಿಕೊಳ್ಳಲಾರೆವು. ಇದನ್ನು ನೆನೆದು ಹಿಂದೀ ಮುಸಲ್ಮಾನರು ಮತ್ತು ಪಾಕಿಸ್ತಾನದಲ್ಲಿಯ ಎಲ್ಲರೂ ತಮ್ಮ ಕರ್ತವ್ಯವನ್ನು ಪೂರಯಿಸಬೇಕು. ಹಿಂದೂ ಮಹಾಸಭೆಯವರೂ ಕಾಂಗ್ರೆಸ್ಸಿನಿಂದ ಹೊರಗುಳಿಯಬಾರದು. ಅದರಿಂದ ಏನೂ ಪ್ರಯೋಜನವಿಲ್ಲ. ಹಿಂದೂ ಧರ್ಮದ ಸಂರಕ್ಷಕರು ತಾವೇ ಎಂದು ಹಿಂದೂ ಮಹಾಸಭೆಯವರು ತಿಳಿದುಕೊಳ್ಳುವದು ತಪ್ಪು ಎಂದೂ ಸರದಾರರು ಹೇಳಿರುವರು. ಅದೇ ರೀತಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರೂ ಕಾಂಗ್ರೆಸ್ಸಿನಲ್ಲಿ ಸೇರಿ ದೇಶದಲ್ಲಿ ಶಾಂತಿಯನ್ನು ಪ್ರಸ್ಥಾಪಿಸಲು ಸರಕಾರಕ್ಕೆ ನೆರವಾಗಬೇಕು. ಇಂಥ ಸಂಘವನ್ನು ದಂಡದಿಂದ ಸದೆಬಡೆಯುವದು ಶಕ್ಯವಿಲ್ಲ, ಪ್ರೇಮದಿಂದಲೆ ಅವನ್ನು ಗೆದೆಯಬೇಕು ಎಂದು ಸರದಾರರು ಸರಕಾರಗಳಿಗೆ ಎಚ್ಚರಿಕೆ ಕೊಟ್ಟಿರುವರು. ಸರದಾರರ ಈ ಸಿಂಹವಾಣಿಯ ಮರ್ಮಾರ್ಥವನ್ನು ನೆನೆದುಕೊಂಡು ಆಯಾ ಜನರು ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿ ದೇಶದ ಸಾರ್ವಾಂಗಿಕ ಅಭಿವೃದ್ಧಿಯನ್ನು ಸಾಧ್ಯ ಮಾಡಿಕೊಳ್ಳುವರೆಂದು ನಂಬುತ್ತೇವೆ.

ಕೂಲಿಕಾರರ ಕರ್ತವ್ಯ

ಉದ್ಯೋಗಾಭಿವೃದ್ಧಿಗೆ ಬೇಕಾದಷ್ಟು ಸಾಧನ ಸಂಪತ್ತಿರುವ ಹಿಂದುಸ್ತಾನವಿಂದು ಪ್ರತಿಯೊಂದು ಪದಾರ್ಥಕ್ಕೆ ಪರಕೀಯರ ಮೋರೆ ನೋಡುತ್ತ ಕೂಡ್ರುವ ಹೊತ್ತು ಬಂದಿದೆ. ಪರಕೀಯರ ನೂರೈವತ್ತು ವರುಷಗಳ ಆಳಿಕೆಯಲ್ಲಿ ನಮ್ಮ ಉದ್ಯೋಗ ಧಂದೆಗಳೆಲ್ಲ ನಾಶವಾಡಲ್ಪಟ್ಟವು. ಇದೀಗ ಸ್ವಾತಂತ್ರ್ಯ ಸಿಕ್ಕದ್ದರಿಂದ ಉದ್ಯೋಗ ಧಂದೆಗಳನ್ನು ಅಭಿವೃದ್ಧಿ ಪಡಿಸಲು ಅವಕಾಶ ದೊರೆತಿದೆ. ಈ ಸಮಯದಲ್ಲಿ ಪ್ರತಿಯೊಬ್ಬರು ಆತ್ಮಾರ್ಪಣೆ ಮಾಡುವದು... ಅತ್ಯಗಮನಿಸುವದು ಕರ್ತವ್ಯವಾಗಿದೆ. ಸರಕಾರ, ಬಂಡವಲುಗಾರರು ಮತ್ತು ಕೂಲಿಕಾರರು ಎಲ್ಲರೂ ಕೂಡಿ ಪ್ರಯತ್ನಿಸಿದ್ದಾದರೆ ಉದ್ದೇಶವು ಬೇಗ ಸಫಲವಾಗಬಲ್ಲುದು. ಆದರೆ ನಮ್ಮ ದೇಶದಲ್ಲಿ ಸದ್ಯಕ್ಕೆ ಒಡೆಯರು- ಕೂಲಿಕಾರರಲ್ಲಿ ಆವಶ್ಯಕ ಸಹಕಾರವಿಲ್ಲದ್ದರಿಂದ ಉದ್ಯೋಗಾಭಿವೃದ್ಧಿಗೆ ತಡೆಯುಂಟಾಗಹತ್ತಿದೆ. ಅದರಲ್ಲಿಯೂ ಕೆಲವೊಂದು ಸ್ವಾರ್ಥೀ ಜನರ ಕೈಯಲಿ ನಮ್ಮ ಕೂಲಿಕಾರರು ಸಿಕ್ಕುಬಿದ್ದದ್ದರಿಂದ ಮಾತು ಮಾತಿಗೂ ಸಂಪಿನ ಬೆದರಿಕೆ [illegible] ನೆಯ ಅಭಿವೃದ್ಧಿಗೆ ಅಡ್ಡಿಯಾಗಹತ್ತಿದೆ. ಈ ಬಗೆಯ ಮನಃಪ್ರವೃತ್ತಿಯನ್ನು [illegible] ಕೂಲಿಕಾರರು ಕರ್ತವ್ಯದ ಹೊಣೆಯನ್ನರಿತುಕೊಂಡು ಕಾರ್ಯಪ್ರವೃತ್ತರಾಗಬೇಕು. ಒಡೆಯರಾದರೂ ಕೇವಲ ಬೊಜ್ಜು ಬೆಳೆಸುವದೇ ತಮ್ಮ ಧೋರಣವನ್ನಾಗಿಟ್ಟುಕೊಳ್ಳದೆ ಕೂಲಿಕಾರರನ್ನು ಸಂತೃಪ್ತಿಯಲ್ಲಿರಿಸುವದೆ ಕರ್ತವ್ಯವೆಂದು ತಿಳಿದುಕೊಳ್ಳತಕ್ಕದ್ದು. ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಮತ್ತು ಉಪಮುಖ್ಯಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಈ ಮಾತನ್ನು ಸ್ಪಷ್ಟವಾಗಿ ಹೇಳಿರುವರು. ಮುಂಬಯಿ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ಗುಲಜಾರಿಲಾಲ ನಂದಾ ಇವರು ಕಳೆದವಾರ ಕರ್ನಾಟಕದಲ್ಲಿ ಸಂಚರಿಸಿದಾಗ ಕೂಲಿಕಾರರ ಕರ್ತವ್ಯವನ್ನು ಸ್ಪಷ್ಟವಾಗಿ ನಿವೇದಿಸಿರುತ್ತಾರೆ. ಹುಬ್ಬಳ್ಳಿಯಲ್ಲಿ ಅವರು ಕೂಲಿಕಾರರ ಸುಖದುಃಖಗಳನ್ನು ವಿಚಾರಿಸಿದಾಗ ಕೆಲವರು ಸರಿಯಾದ ಉತ್ತರ ಕೊಡದೆ ಮೊದಲೆ ಕಲಿಸಿಕೊಟ್ಟ ರೀತಿಯಲ್ಲಿ ಉತ್ತರಕೊಟ್ಟರಂತೆ. ಇದು ನಿಜವಿದ್ದರೆ ಕೂಲಿಕಾರರು ತಮ್ಮ ಕಾಲಮೇಲೆ ತಾವೇ ಕಲ್ಲು ಹಾಕಿಕೊಂಡಂತೆ. ಇದರಿಂದ ಯಾರಿಗೂ ಲಾಭವಾಗಲಾರದು. ಈ ಮಾತನ್ನು ನೆನೆದು ಕೂಲಿಕಾರರು ತಮ್ಮ ಧೋರಣವನ್ನು ಸುಧಾರಿಸಿಕೊಳ್ಳಬೇಕು. ಕೂಲಿಕಾರರ ಧುರೀಣರೆನ್ನಿಸಿಕೊಳ್ಳುವವರು ಕೂಡ ಕೇವಲ ರಾಜಕೀಯ ಸ್ವಾರ್ಥಕ್ಕೆ ಬಲಿಬಿದ್ದು ಕೂಲಿಕಾರರ ನಾಶಕ್ಕೆ ಮತ್ತು ದೇಶದ ಹಾನಿಗೆ ಅವಕಾಶ ಕೊಡದೆ ದೇಶಾಭಿವೃದ್ಧಿಯ ಮಾರ್ಗವನ್ನೇ ಅನುಸರಿಸಬೇಕು. ಕೂಲಿಕಾರರಿಗೆ ಅಂತು ಉಪದೇಶಿಸಬೇಕು ಇಲ್ಲದಿದ್ದರೆ ಅವರು ದೇಶದ್ರೋಹ ಮಾಡಿದಂತಾಗುವದು. ಕೂಲಿಕಾರರ ಸಂಕಷ್ಟಗಳನ್ನು ಹೋಗಲಾಡಿಸಲು ಸರಕಾರ ಬದ್ಧಪ್ರತಿಜ್ಞವಾಗಿರುವಾಗ ಕೂಲಿಕಾರರು ಅದರ ಲಾಭ ಪಡೆಯದಿರುವದು ಆತ್ಮಘಾತಕವಾದುದು ಇನ್ನು ಮೇಲಾದರೂ ಅವರು ಸರಿಯಾದ ಮಾರ್ಗವನ್ನನುಸರಿಸಲಿ.

ಅನುಚಿತ ಧೋರಣ

ಸಾಹಿತ್ಯ ಪರಿಷತ್ತಿಗೆ ಸಹಾಯ ಸಲ್ಲಿಸುತಿರುವವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವ ಸಂಪ್ರದಾಯ ಪರಿಷತ್ತು ಸ್ಥಾಪಿತವಾದಂದಿನಿಂದ ನಡೆದುಬಂದಿದೆ. ಇದೊಂದು ಬಗೆಯ ಶಿಷ್ಟಾಚಾರ. ಆದರೆ ಈ ಸಲದ ಅಧಿವೇಶನದಲ್ಲಿ ಕೆಲವರ ಹಸ್ತಕ್ಷೇಪದಿಂದ ಶಿಷ್ಟಸಮ್ಮತವಾದ ಈ ಗೊತ್ತುವಳಿಗೆ ಅರೆವಾಳ ಬಡೆದುದು ದುರ್ದೈವದ ಸಂಗತಿ. ಈ ಸಂದರ್ಭದಲ್ಲಿ ಗೊತ್ತುವಳಿಯ ವಿರೋಧಕರು ಸಭೆ ನಿಯಮ ನಿಬಂಧನೆಗಳನ್ನು ಕೂಡ ಮೀರಿ ನಡೆದುದು ಅವಿವೇಕತನದ ಪರಮಾವಧಿ. ಅಧ್ಯಕ್ಷರಿಂದ ಮಂಡಿತವಾದ ಕೃತಜ್ಞತೆಯನ್ನು ವ್ಯಕ್ತಪಡಿಸುವ ಈ ಗೊತ್ತುವಳಿ ನಿಜವಾಗಿ ವಿಚಾರ ಮಾಡಿದರೆ ಸ್ವೀಕೃತವಾಗಲಿಕ್ಕಬೇಕು. ಏಕೆಂದರೆ ಬಹುಶಃ ಸರ್ವಸಮ್ಮತವಾದ, ವಿವಾದಾತ್ಮಕವಲ್ಲದ ಗೊತ್ತುವಳಿಗಳನ್ನೇ ಅಧ್ಯಕ್ಷಪೀಠದಿಂದ ಹಾಕುವುದುಂಟು. ವಿಷಯ ನಿರ್ಧಾರಕರ ಸಮಿತಿಯಲ್ಲಿ ಅಂತು ಗೊತ್ತುಪಡಿಸುವುದೂ ಉಂಟು. ಹೀಗಿದ್ದು ಅಧ್ಯಕ್ಷರಿಂದ ಮಂಡಿತವಾದ ಈಗೊತ್ತುವಳಿಗೆ ತಿದ್ದುಪಡಿಯನ್ನು ಸೂಚಿಸುವದು ಇಲ್ಲವೆ ವಿರೋಧ ಪ್ರದರ್ಶಿಸುವದು ಅಪೂರ್ವವೆನ್ನಿಸಿ. ಗೊತ್ತುವಳಿಗೆ ತಿದ್ದುಪಡಿ ಸೂಚಿಸಲು ಕೂಡ ಅಧ್ಯಕ್ಷರು ಅವಕಾಶಕೊಟ್ಟರು. ವಿರೋಧಿಗಳಲ್ಲಿ ಹಲವರು ತಿದ್ದುಪಡಿಗಳನ್ನು ಸೂಚಿಸಿದ್ದೂ ಆಯಿತು. ಆದರೆ ಈ ಸೂಚನೆಯೆ ಬೇಡ ಎಂದು ನೆರೆದವರಲ್ಲಿ ಹಲವರು ಕೂಗಿಕೊಂಡದ್ದರಿಂದ ಅಧ್ಯಕ್ಷರು ನಿರುಪಾಯವಾಗಿ ಗೊತ್ತುವಳಿಯನ್ನೇ ಬಿಟ್ಟುಕೊಡಬೇಕಾಯಿತು. ಗೊತ್ತುವಳಿಗೆ ಅನುಕೂಲವಿದ್ದವರ ಮತಗಳನ್ನು ತೆಗೆದುಕೊಳ್ಳುವ ಅವಕಾಶವೇ ಸಿಕ್ಕದಿದ್ದುದರಿಂದ ಎಲ್ಲರೂ ಈ ಗೊತ್ತುವಳಿಗೆ ವಿರುದ್ಧವಿದ್ದರೆಂದಾಗಲಿ ಬಹುಸಂಖ್ಯಾಕ ಪ್ರತಿನಿಧಿಗಳಾದರೂ ವಿರುದ್ಧವಿದ್ದರೆಂತಾಗಲಿ ನಿರ್ದಿಷ್ಟವಾಗಿ ಹೇಳಲು ಬರುವದಿಲ್ಲ. ಹಣಸಲ್ಲಿಸಿದವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದರೆ ಸಮ್ಮೇಳನದ ಪ್ರತಿಷ್ಠೆಗೆ ಯಾವಬಗೆಯ ಕುಂದೂ ಬರುತ್ತಿದ್ದಿಲ್ಲ. ತದ್ವಿರುದ್ಧ ಅದರ ಘನತೆ ಹೆಚ್ಚುತ್ತಿತ್ತು. ಮೈಸೂರು ಸತ್ಯಾಗ್ರಹದಲ್ಲಿ ಹುತಾತ್ಮರಾದವರಿಗಾಗಿ ದುಃಖ ಪ್ರದರ್ಶಿಸುವ ಗೊತ್ತುವಳಿಯ ಸಂಬಂಧದಲ್ಲಿ ನಡೆದ ಘಟನೆಯು ಅನುಚಿತವಾಗಿತ್ತೆಂದು ಹೇಳಬೇಕಾಗುವದು. ನಿರ್ಣಯಗಳೆಲ್ಲ ಮುಗಿದವು, ನಾನಿನ್ನು ನಾಲ್ಕು ಮಾತು ಹೇಳುತ್ತೇನೆ ಎಂದು ಅಧ್ಯಕ್ಷರು ಪ್ರಾರಂಭಿಸಿದ ನಂತರ ಹೊಸ ನಿರ್ಣಯದ ಬಗ್ಗೆ ಆಗ್ರಹ ಹಿಡಿದುದು ಸರಿಯಾಗಲಿಲ್ಲ. ಒಂದು ವೇಳೆ ಅಧ್ಯಕ್ಷರು ಈ ಸಂಬಂಧದಲ್ಲಿ ನ್ಯಾಯ್ಯವನ್ನು ಮಾಡಲಿಲ್ಲ ಎಂದು ಒಪ್ಪಿದರೂ ಸಭಿಕರು ಅವರ ಅಪ್ಪಣೆಯನ್ನು ಕೇಳದೆ ಗೊತ್ತುವಳಿಯನ್ನು ಮಂಡಿಸಿ ಪಾಸುಮಾಡಿಸಿಕೊಳ್ಳುವದು ಸಭಾಗೌರವಕ್ಕೆ ತಕ್ಕದ್ದಲ್ಲ. ಅಧ್ಯಕ್ಷರ ನಿರ್ಣಯ ತಮಗೆ ಸಮ್ಮತವಾಗಿರದಿದ್ದರೆ ನಿಷೇಧ ಪ್ರದರ್ಶಿಸಿ ಸಭಾಸ್ಥಾನವನ್ನು ಬಿಟ್ಟು ಹೋಗುವದು ಶಿಷ್ಟಸಮ್ಮತವು, ನ್ಯಾಯ್ಯವು. ಹೀಗೆ ಮಾಡದೆ ಅಧ್ಯಕ್ಷರ ಅಪ್ಪಣೆ ಮೀರಿ ವೇದಿಕೆಯನ್ನು ಆಕ್ರಮಿಸುವದು ಅವಿವೇಕತನದ ಅತಿರೇಕ. ಶಾಸನಸಭೆ ಮುಂತಾದವುಗಳಲ್ಲಿ ಹೀಗೆ ಮಾಡಿದರೆ ಅಧ್ಯಕ್ಷರು ವಿರೋಧಕರನ್ನು ಹೊರಗೆ ಹಾಕುವುದುಂಟು. ಆದದ್ದಾಯಿತು, ಇನ್ನು ಮುಂದಾದರೂ ಈ ಬಗೆಯ ಘಟನೆಗಳಾಗದಂತೆ ನೋಡಿಕೊಳ್ಳುವದು ಕರ್ತವ್ಯವಾಗಿದೆ.

ಪುಂಡಾಟಿಕೆಯನ್ನು ತಡೆಯಲಾರದೆ?

ನಾವು ಸಾಮ್ಯವಾದಿಗಳೆಂದು ಹುಯಿಲೆಬ್ಬಿಸುವದು ಇತ್ತೀಚೆಗೆ ತರುಣರಾದವರಲ್ಲಿ ಒಂದು ಬಗೆಯ ವಿಲಾಸೋಕ್ತಿಯಾಗಿ ಹೋಗಿದೆ. ಸಾಮ್ಯವಾದವೆಂಬುದು ಇಷ್ಟು ಅಗ್ಗವಾಗಿ ಹೋದದ್ದು ಹೇಗೆ? ಒಂದೆರಡು ಕೇಳಿಕೆಯ ಮಾತುಗಳಿಂದಲೋ ಓದಿದ ಪುಸ್ತಕಗಳಿಂದಲೋ ಬರೀ ಬಾಯಲ್ಲಿ ಮಾತ್ರ ಸಾಮ್ಯವಾದ ಸಾಮ್ಯವಾದವೆಂದು ಗಿಳಿಯಂತೆ ಗಳಹಿದರೆ ಅದಕ್ಕೇನು ಬೆಲೆ? ಸಾಮ್ಯವಾದವನ್ನು ಇದ್ದು ತೋರಿಸಬೇಕು. ಸಾಮ್ಯವಾದವನ್ನು ಜನಮನದಲ್ಲಿ ಬಿತ್ತಲು ಜನರ ಮನೋಭೂಮಿಕೆಯನ್ನು ಹದಗೊಳಿಸಬೇಡವೆ? ಇದಕ್ಕಾಗಿ ಪಣನಿಲ್ಲದ ದುಡಿಮೆ ಬೇಡವೆ? ಇದಕ್ಕಾಗಿ ಇಂದು ಎಷ್ಟು ತರುಣರು [illegible] ಕಾರ್ಯ ನಡೆಸಿದ್ದಾರೆ? ಸಾಮ್ಯವಾದದ ಕೇವಲ ಕೋಲಾಹಲವಲ್ಲದೆ [illegible] ಕಂಡು ಬರುವದಿಲ್ಲ. ಇಂಗ್ಲಂಡದಲ್ಲಿ ಸಾಮ್ಯವಾದದ ತತ್ವ ಅಳವಡಿಸಲು ಅದೆಷ್ಟು [illegible] ಬೇಕಾದವು ಗೊತ್ತೆ? ಅಮೇರಿಕೆಗೆ ಇದನ್ನು ಜೀರ್ಣಿಸಿಕೊಳ್ಳುವದು ಇನ್ನೂ ಆಗುತ್ತಿಲ್ಲ.

ನಾನು ನಖಶಿಖಾಂತ ಸಾಮ್ಯವಾದಿ

[illegible] ಬಂಡವಲುಗಾರರ ಕೈವಾರಿಯೆಂದೂ [illegible]. ಆದರೆ ನನ್ನ ಜೀವನದ ಪೆಟ್ಟಿಗೂ ನಾನು ಸಾಮ್ಯವಾದಿ. ಹರಿಜನರ, ಪಲಿತರ, ಕೂಲಿಕಾರರ ಮಿತ್ರನಾಗಿದ್ದೇನೆ. ಎಂದೇ ನಾನು ಸಾಮ್ಯವಾದಿಗಳ ಗೆಳೆಯನೂ ಆಹುದು. ಉಳಿದ ಸಾಮ್ಯವಾದಿಗಳಂತೆ ನಾನು ಬಾಯಲ್ಲಿ ‘ಸಾಮ್ಯವಾದ’ ‘ಸಾಮ್ಯವಾದ’ ವೆಂದು ಗಳಹಿದವನಲ್ಲ. ನಾನು ಸಾಮ್ಯವಾದವನ್ನು ಕೃತಿಗಿಳಿಸಿದವನು. ನಾನು ಗಾಂಧೀಜಿಯ ಅನುಯಾಯಿಯಾದಂದಿನಿಂದ ವೈಯಕ್ತಿಕ ಆಸ್ತಿ ಇಟ್ಟುಕೊಳ್ಳಕೂಡದೆಂದು ನಿರ್ಧರಿಸಿದ್ದೇನೆ. ಇಂದು ನನ್ನ ವೈಯಕ್ತಿಕ ಆಸ್ತಿ ಎಂಬುದು ಏನೂ ಇಲ್ಲ. ಈಗ ಸನ್ನದ್ಧರಾಗಿರುವ ಎಷ್ಟು ಜನ ತರುಣರು ಇದನ್ನು ಅನುಸರಿಸಿದ್ದಾರೆ ಹೇಳಬಹುದೆ?

ಸಂಪದವಿದ್ದರೆ ಹಂಚುವ ಮಾತು

ನೀವು ಸಾಮ್ಯವಾದದ ಮಾತನಾಡುವ ಮೊದಲು ನಿಮ್ಮ ಶ್ರಮದಿಂದ ದೇಶದಲ್ಲಿ ಹೆಚ್ಚಿದ ಸಂಪದವೆಷ್ಟು ಎಂಬುದನ್ನಷ್ಟು ಅಳೆದು ನೋಡಿಕೊಳ್ಳಿರಿ. ಈಗಿನ ಸಾಮ್ಯವಾದಿಗಳು ಸಂಪು ಹೂಡಿಸಿ ರಾಷ್ಟ್ರದ ಸಂಪದ ಕುಗ್ಗುವಂತೆ ಮಾಡುತ್ತಿರುವರಲ್ಲದೆ ಅದನ್ನು ವರ್ಧಿಸುತ್ತಿಲ್ಲ. ಈಗ ದೇಶದ ಸಂಪತ್ತು ಹೆಚ್ಚುವದು ಅಗತ್ಯ. ಆದಾಗ ಸಂಪತ್ತು ನಮ್ಮ ನಾಡಿನಲ್ಲಿ ಕೂಡಿ ಬಿದ್ದರಲ್ಲವೇ ಅದನ್ನು ಹಂಚುವ ಮಾತು? ಈಗ ನಮಗೆ ಬೇಕು ಒಕ್ಕಟ್ಟು, ಬಲ, ಉತ್ಸಾಹ, ಇವಕ್ಕೆ ಅವಿಶ್ರಾಂತ ದುಡಿವ ನಿರ್ಧಾರ. ಇವಾವೂ ಇಲ್ಲದ ಸಾಮ್ಯವಾದದ ಮಾತನಾಡಿದರೆ ಅದು ನಿರರ್ಥಕ. ಹಾಸ್ಯಾಸ್ಪದ, ಹುಡುಗಾಟಿಕೆ. ತರುಣರು ಇದನ್ನರಿತು ಹೆಜ್ಜೆ ಹಾಕಲಿ. ಇಲ್ಲದ ಹುಡುಗಾಟ ನನಗೆ ಬೇಡ.

ಸಂಸ್ಥಾನ-ವಿಲೀನೀಕರಣ

ನರೇಂದ್ರಮಂಡಲ ವಿಲೀನೀಕರಣದ ಬಗ್ಗೆ ನಾನು ಮಾಡಿಕೊಂಡ ಒಪ್ಪಂದದ ವಿಷಯದಲ್ಲಿ ನನ್ನನ್ನು ಸಿಕ್ಕಾಬಟ್ಟೆ ಟೀಕಿಸಲಾಯಿತು. ನಾನು ಸಂಸ್ಥಾನದ-ಪ್ರಜೆಗಳ ಕುತ್ತಿಗೆ ಕೊಯ್ದೆನೆಂದೂ ಜನ ಅನ್ನಲು ಹಿಂದು ಮುಂದು ನೋಡಲಿಲ್ಲ. ಇದೇ ಮಹನೀಯರು ನನಗೆ ಕೂಲಿಕಾರರ ರಾಜ್ಯಬೇಕೆಂದು ಗುಲ್ಲೆಬ್ಬಿಸಿರುವರು! ಇದೇ ತಕ ವಿಸಂಗತ ವಿಷಯ? ಕೂಲಿಕಾರರ ರಾಜ್ಯ ನನಗೂ ಬೇಕು. ಇದಕ್ಕೆ ಯಾರ ಆಕ್ಷೇಪವೂ ಇಲ್ಲ. ಬ್ರಿಟನ್ನದಲ್ಲಿಯೂ ಕೂಲಿಕಾರ ರಾಜ್ಯವಿದೆ. ಆದರೆ ಅಲ್ಲಿಯ ಕೂಲಿಕಾರರು ಅಧಿಕಾರಕ್ಕೆ ಬರಲು ಸಂಪಿನ ಪ್ರಚಾರ ಮಾಡಿ ರಾಷ್ಟ್ರದ ಉತ್ಪತ್ತಿ ಕುಂಠಿಸುವ ಮಾರ್ಗ ಅನುಸರಿಸಲಿಲ್ಲ. ಹೀಗೆ ಮಾಡಿದರೆ ನಾಡಿಗೆ ಕೇಡೆಂಬ ಅರಿವು ಅವರಿಗಿತ್ತು. ಆ ಅರಿವು ನಮ್ಮ ಸಾಮ್ಯವಾದಿಗಳಿಗಿಲ್ಲ.

ಈ ಮೋಸವೇಕೆ ?

ನನ್ನ ಗಂಡಾಂತರ ಇನ್ನೂ ಹೀಗಿಲ್ಲ. ಪಾಕಿಸ್ತಾನದಲ್ಲಿ ಹಿಂದುಗಳು ಜೀವರು ಸಿಕ್ಕುಬಿದ್ದಾರೆ. ಪಾಕಿಸ್ತಾನ ಸರಕಾರ ಸವಿಮಾತುಗಳ ನ್ನಾಡುತ್ತಿದ್ದರೂ ಅವು ನಂಬಲು ಎಳ್ಳಷ್ಟೂ ಯೋಗ್ಯವಿಲ್ಲವೆಂಬುದನ್ನು ನಾವು ದಿನ ದಿನ ಮನಗಾಣುತ್ತಿದ್ದೇವೆ. ಜಾಫರುಲ್ಲಾರ ದೀರ್ಘ ಹೇಳಿಕೆ ನಾನು ನೋಡಿದ್ದೇನೆ. ಅವರು ಕಾಶ್ಮೀರದೊಡನೆ ಜುನಾಗಡದ ಪ್ರಶ್ನೆಯನ್ನು ತಳಕುಹಾಕಿದ್ದಾರೆ. ಕಾಶ್ಮೀರದ ದಾಳಿಯಲ್ಲಿ ಗುಪ್ತ ಸಹಾಯಮಾಡುವದಕ್ಕಿಂತ ಬಹಿರಂಗವಾಗಿ ಪಾಕಿಸ್ತಾನವು ಯುದ್ಧರಂಗಕ್ಕೆ ಬರಲಿ ಎಂದು ನಾವು ಹೇಳುತ್ತೇವೆ. ಈ ಮೋಸವೇಕೆ? ಅನ್ಯಾಯ ನಮ್ಮಿಂದ ಆಗದಿರಲೆಂದೇ ನಾವು ಈ ಪ್ರಶ್ನೆಯನ್ನು [illegible] ಒಪ್ಪಿಸಲು [illegible]. [illegible] ಪ್ರಜಾ ಸರಕಾರವು ತನ್ನ ಸ್ಥಲ [illegible] ಬೊಡನೆ ಹೋರಾಡಿತು, ಅದಕ್ಕೆ [illegible] ಅಥವಾ ಬೇರೆ ಇನ್ನಾರ ಬೆಂಬಲವೂ [illegible]. ಆದರೆ ಕಾಶ್ಮೀರದಲ್ಲಿ ವಂಚನೆಯಿಂದ ದಾಳಿಗಾರರು ಸಹಾಯ ಹೊಂದುತ್ತಿದ್ದಾರೆ. ಕಾಶ್ಮೀರದಲ್ಲಿ ಪ್ರಜಾ ಮತದಂತೆ ವರ್ತಿಸಲು ನಾವು ನಿರ್ಣಯಿಸಿದ್ದೇನೆ. ದಾಳಿಗಾರರು ತೊಲಗುತ್ತಲೇ ಈ ಮತಗಣನೆ ನಡೆಯುವದಾಗಿ ನಾವು ಹೇಳುತ್ತಬಂದಿದ್ದೇವೆ.

ತಮ್ಮ ವೈರಿಗಳು ತಾವೇ

[illegible] ಪಾಕಿಸ್ತಾನದ ಅಧಿಕಾರಿಗಳು ತಮಗೆ ಘಾತಕವಾದ ಧೋರಣ ಕೈಕೊಂಡು ಅಂತಹ ಕೃತಿಗಳನ್ನೇ ಮಾಡುತ್ತ [illegible] ವೈರಿಗಳಾಗುತ್ತಿದ್ದಾರೆ.

[illegible]

ಜನಬಲ, ಸಂಘಟನ ಸಾಕಷ್ಟಿದೆ

ಧನಬಲ ಮಾತ್ರ ಈಗ ಅಗತ್ಯ

ಸರಕಾರಕ್ಕೆ ಸ್ವಾರ್ಥಸಾಧಕರ ಬೆಂಬಲ

ಹೈದರಾಬಾದ ಹೋರಾಟವು ಹಿಂಸಾತ್ಮಕ ರಾಜ್ಯಭಾರವನ್ನು ಎದುರಿಸಲು ಹೂಡಿದ್ದೆಂಬುದನ್ನೂ ಪ್ರಜೆಯ ಹಕ್ಕು ಬಾಧ್ಯತೆಯ ರಕ್ಷಣೆಗೆ ಟೊಂಕ ಕಟ್ಟಿದ ಹೈದರಾಬಾದ ಸಂಸ್ಥಾನ ಜನರು ದಬ್ಬಾಳಿಕೆಯ ಫಲವಾಗಿ ಅದೆಂತಹ ಹಿಂಸೆಗೆ ಗುರಿಯಾಗುತ್ತಿದ್ದಾರೆ ಎಂಬುದನ್ನು ಹಿಂದುಸ್ಥಾನ ನಾಗರಿಕರು ಸರಿಯಾಗಿ ಅರಿತುಕೊಂಡು ತಮ್ಮ ನೈತಿಕ ಬೆಂಬಲದಿಂದ ಈ ಅಹಿಂಸಾತ್ಮಕ ಪ್ರತಿಕಾರಕ್ಕೆ ಪ್ರೋತ್ಸಾಹ ಕೊಡುವದು ಅದೆಷ್ಟು ಅಗತ್ಯವೆಂಬುದನ್ನೂ ತಿಳಿಸಿಕೊಡುತ್ತ ಸ್ವಾಮೀ ರಮಾನಂದರು ಸಂಚಾರ ಕೈಕೊಂಡಿದ್ದಾರೆ. ಅವರು ಹುಬ್ಬಳ್ಳಿಯಲ್ಲಿ ತಾ. ೩ ರಂದು ಭಾಷಣ ಮಾಡಿ ಜನರಿಗೆ ಹೈದರಾಬಾದದ ನಿಜ ಸಂಗತಿ ಅರುಹಿದರು.

ಜಾತೀಯತೆಯ ಬಣ್ಣ

ಹೈದರಾಬಾದದ ಹೋರಾಟಕ್ಕೆ [illegible] ನರು ಜಾತೀಯತೆಯ ಬಣ್ಣ ಬಳಿದು ಬೇರೆ ನಾಡಿನ ಜನರು ಅದನ್ನು ತಪ್ಪಾಗಿ ಗ್ರಹಿಸುವಂತೆ ಹೇಗೆ ಅಪಪ್ರಚಾರ ಮಾಡುತ್ತಿರುವರೆಂಬುದನ್ನು ಸ್ವಾಮೀಜಿ ತಿಳಿಸಿದರು. ೧ ಕೋಟಿ ೬೦ ಲಕ್ಷ ಹೈದರಾಬಾದ ಪ್ರಜೆಗಳು ಗುಲಾಮರಾಗಿದ್ದರೆ ಭಾರತದ ಸ್ವಾತಂತ್ರ್ಯಕ್ಕೆ ಪೂರ್ಣತೆ ಬರಲಾರದೆಂದು ಮುಂಗಡ ಕಾಂಗ್ರೆಸ್ಸಿನ ವರಿಷ್ಠ ಪುಢಾರಿಗಳು ಉದ್ಗಾರತೆಗೆದದ್ದು ಬಹುಜನ ನಿಜವೆಂಬುದನ್ನು ಸ್ವಾಮೀಜಿ ತೋರಿಸಿಕೊಟ್ಟರು. ಹೈದರಾಬಾದದ ಜನತೆಯ ಪರವಾಗಿ ಜಯದೊರಕುವ ವರೆಗೂ ಹೋರಾಡುವದಾಗಿ ವಚನ ಕೊಡುವೆನೆಂದು ಸಾರಿದರು.

ಧನಸಹಾಯ

ಹೈದರಾಬಾದದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನಬಲವೂ ಸಂಘಟನೆಯೂ ಸಾಕಷ್ಟಿರುವದು. ಆದರೆ ಅದರಿಗೆ ಧನ ಬಲಬೇಕಾಗಿದೆ. ಹೋರಾಟದ ಫಲವಾಗಿ ಆಧಾರ ತಪ್ಪಿ ನಿರ್ಗತಿಕರಾದವರ ಯೋಗಕ್ಷೇಮಕ್ಕೂ ಧನಬೇಕು. ಕಾರ್ಯಕರ್ತರ ಸಂಘಟನೆ ಚಟುವಟಿಕೆಗಳಿಗೂ ಧನಬೇಕು ಇದನ್ನು ಮುಕ್ತ ಹಸ್ತದಿಂದ ಧನಿಕರು ಒದಗಿಸಬೇಕಾಗಿ ಸ್ವಾಮೀಜಿ ಕೇಳಿಕೊಂಡರು.

ನಿಜಾಮ ಸರಕಾರ ಉಳಿದಿಲ್ಲ

ಕುಷ್ಟಗಿ ಕೊಪ್ಪಳ ತಾಲೂಕುಗಳ ೧೮ ಹಳ್ಳಿಗಳಲ್ಲಿ ನಿಜಾಮ ಸರಕಾರ ಉಳಿದಿಲ್ಲ. ಅಲ್ಲಿ ಸ್ವತಂತ್ರ ಸರಕಾರ ಸ್ಥಾಪಿತವಾಗಿ ಕಾರ್ಯ ನಡೆದಿದೆ. ಈ ಸ್ಥಳಗಳ ಪ್ರಜೆಗಳು ಎಲ್ಲವನ್ನೂ ಎದುರಿಸುವ ಕೆಚ್ಚೆದೆಯುವರಾಗಿದ್ದಾರೆ. ನಾವು ಹೋರಾಟದ ಭೇರಿಮೊಳಗಿಸಿದಾಗ ಅನೇಕರಿಗೆ ನಮ್ಮ ಎದೆಗಾರಿಕೆಯ ಬಗೆಗೆ ಸಂದೇಹವಿತ್ತು. ಆದರೆ ಹೈದರಾಬಾದದ ಪ್ರಜೆಗಳು ತಮ್ಮ ಸಂಘಟನೆಯಿಂದ ಶೌರ್ಯದಿಂದ ಅದನ್ನು ಅಲ್ಲಗಳೆದಿದ್ದಾರೆ.

ಅಸ್ತಿಯ ಹಂಚಿಕೆಯಲ್ಲಿ ಪಾಕಿಸ್ತಾನದೊಡನೆ ನಾವು ಔದಾರ್ಯದಿಂದ ನಡೆದುಕೊಂಡಿದ್ದೇವೆ. ನಾವು ಕೊಟ್ಟ ಹಣದಿಂದಲೇ ನಮ್ಮನ್ನು ವಿನಾಶಗೊಳಿಸಲು ಮದ್ದು ಗುಂಡು ಸಿದ್ಧಮಾಡುವದನ್ನು ನಾವು ಸಹಿಸಲಾರೆವು. ಇನರೊಡನೆ ಮಾಡಿಕೊಂಡ ಒಪ್ಪಂದ ಮುರಿಯುವ ಇಚ್ಛೆ ನಮಗಿಲ್ಲ. ಆದ ನ್ನು ಮುರಿಯುವದಿದ್ದಲ್ಲಿ ಒಪ್ಪಂದ ಮಾಡಿಕೊಳ್ಳುವ ಕಾರಣವೇನಿತ್ತು..?

ಏಶಿಯಾದ ಧುರೀಣತ್ವ

ಭಾರತದ ಉತ್ಪತ್ತಿ ಹೆಚ್ಚಲೇಬೇಕು. ಅಂದರೆ ಮಾತ್ರ ಸ್ವತಂತ್ರ ರಾಷ್ಟ್ರಗಳಲ್ಲಿ ತಾನೂ ಸ್ವತಂತ್ರನೆಂದು ಭಾರತವು ತಲೆಯೆತ್ತಿ ಬಾಳಬಲ್ಲದು. ಏಶಿಯಾಖಂಡದ ಧುರೀಣತ್ವ ವಹಿಸುವ ಭಾಗ್ಯ ಭಾರತಕ್ಕೆ ಬರಲಿದೆ. ಕಾರಣ ಔದ್ಯೋಗಿಕ ಪ್ರಗತಿಯನ್ನು ಸಾಧಿಸಿ ಏಶಿಯಾದ ಎಲ್ಲ ರಾಷ್ಟ್ರಗಳ ಕೊರತೆಯನ್ನು ನೀಗಿಸುವ ಯೋಗ್ಯತೆ ಭಾರತ ಕೆಂದಿತೊ [illegible]. ಅಂದರೆ ಮಾತ್ರ ಈ ಸುವರ್ಣ ಸಂಧಿ ಭಾರತವು ಬಿರವಾಗುವದಿಲ್ಲ. ನಾವು ಬಹುಶಃ ಸಾಗಬೇಕೆಂದು ಕೆಲವರ ವಾದ ಜಗದ ಮೇಲಾಟದಲ್ಲಿ ನಾವು ಹೆಣಗಿ ಒಡದಿದ್ದರೆ ನಾವು ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವದು ಖಂಡಿತ. ನಾವು ದುಡಿದು ಮುಪ್ಪಿನವರಾಗಿದ್ದೇವೆ. ಸ್ವತಂತ್ರ ಭಾರತವನ್ನು ಊರ್ಜಿತಕ್ಕೆ ತರುವ ಭಾರವೆಲ್ಲ [illegible] ದೆ ತರುಣರು ಹೊತ್ತಬೇಕು. [illegible] ಕೂಲಿಕಾರರೂ ಅವರ [illegible] ಒಳ್ಳೆ [illegible].



ಸ್ವಾಮಿ ರಮಾನಂದ ತೀರ್ಥರು.

ಫೆಸಿಸ್ಟರಾಜ್ಯ

ಹೈದರಾಬಾದ ಮುಸಲ್ಮಾನರ [illegible] ಪೃಷ. ತಾವು ಅಧಿಕಾರ ನಡೆಸುವ [illegible] ರೆಂದೂ ನಿಜಾಮರು ಕೇವಲ ತಮ್ಮ [illegible] ಗಳು ಮಾತ್ರವೆಂದೂ ಹೇಳುವ [illegible] ಇತ್ತಿಹಾದುಲ್ ಮುಸಲ್ಮೀನ್ ಸಂಸ್ಥೆಯ [illegible] ಫೆಸಿಸ್ಟ ರಾಜ್ಯ ಪದ್ಧತಿಯನ್ನು [illegible] ಕೊಂಡು ಸಾಗಿದ್ದಾರೆ. ಅಲ್ಲಿಯ ಸತ್ಯಾ[illegible] ದರೆ ಪೋಲೀಸರ ಮತ್ತು ದಂಡಿನ [illegible] ಚಾರಗಳನ್ನು ಎದುರಿಸುವದಷ್ಟೇ ಅಲ್ಲ. [illegible] ದುಲ್ ಸಶಸ್ತ್ರ ಸ್ವಯಂಸೇವಕರ ರಾಕ್ಷ[illegible] ಗಳನ್ನು ಕೂಡ ಎದುರಿಸಬೇಕಾಗಿದೆ.

ಹೋರಾಟದ ಎರಡನೆಯ ಅಂಕ

ತಾ ೪ ರಂದು ಸ್ವಾಮೀಜಿಯವರು [illegible] ತರ ಸಭೆಯಲ್ಲಿ ಮಾತನಾಡುತ್ತ ಹೈ[illegible] ಹೋರಾಟದ ಎರಡನೆಯ ಅಂಕವು [illegible] ರಣೆ, ಅಸಹಕಾರ ಮೊದಲಾದ ಅ[illegible] ಸ್ವರೂಪದಲ್ಲಿ ಇನ್ನೂ ಬೆಳೆಯ ಬ[illegible] ಹಿಡ... ಹೈದರಾಬಾದದ ಹೋರಾಟ [illegible] ಶಾಂತಿ ಮಿಂಚ ಸಾಗಿದೆ. [illegible] ದೃಷ್ಟಿಯಿಂದ ಜನರು ಅಲ್ಲಿ ಇಲ್ಲಿ ಕುತು [illegible] ದ್ದರೆ ಅದು ಪ್ರಮಾದವೆನ್ನಬಹುದು [illegible] ಕೊಲೆ ಸುಲಿಗೆ [illegible] ಜನ ಓಡಿಹೋಗಿದ್ದೂ ಉಂಟು. ಸ್ವ[illegible] ಬಂದರೆ ಸ್ಥಾನಾಂತರ ಮಾಡಿರೆಂದು [illegible] ನರಿಗೆ ತಾವು ಸ್ವತಃ ಉಪದೇಶ ಮಾ[illegible] ಕೊನೆಯುಗಳಿಗೆಯು ಉಪಾಯು[illegible] ಮಾಡದೆಗತ್ಯಂತರವಿಲ್ಲೆಂದೂ ಸ್ವಾ[illegible] ರಿದರು. ಹೈದರಾಬಾದ ಒಳಗಿನ [illegible] ಸಹ ಹಿಸುಗಾಡಿ ನಿಜ ಸಂಗತಿ [illegible] ದರು.

ಸ್ವಾರ್ಥಸಾಧಕರ ಬೆಂಬಲ


ಇತ್ತಿಹಾದುಲ್ ಪಕ್ಷಕ್ಕೆ ಹಿಂದೂ [illegible] ಕರ ಬೆಂಬಲವಿರುವ ಸಂಗತಿ [illegible] ಕೇಳಿದ ಒಂದು ಪ್ರಶ್ನೆಗೆ ಉತ್ತ[illegible] ಸ್ವಾಮೀಜಿ ಹೌದೆಂದು ಒಪ್ಪಿ ಹೀಗೆ [illegible] ಇತ್ತಿಹಾದುಲ್ ಸಂಸ್ಥೆ ಕೇವಲ [illegible] ಸಂಸ್ಥೆ ಅದರಲ್ಲಿ ಹಿಂದುಗಳಿಗೆ ಪ್ರವೇ[illegible] ಆದರೆ ತನ್ನ ಜೀವ ಬೇಕು [illegible] ನದಿಂದ ಸರಿಜನ ಮುಖಂಡರಾದ [illegible] ಸಂಕಟಾಯರಂಥವರು [illegible] ಯಾಗಿ ಕೂಡಿಕೊಂಡಿರುವರುಂಟು. [illegible] ಧಿಕಾರದ ಬೆಂಬಲಕ್ಕೆ ಸ್ವಾರ್ಥಿಗಳು [illegible] ಗಳೂ ಇದ್ದೇ ಇರುತ್ತಾರೆ. [illegible] ಇದಕ್ಕೆ ಹೊರತಲ್ಲ.

ಕೂಲಿಕಾರರ ಬೆಂಬಲ [illegible]

[illegible] ಪ್ರಶ್ನೆಗೆ ಸ್ವಾಮಿಗಳು ಹೀಗೆ [illegible] ಕಾಂಗ್ರೆಸಿನ [illegible] ನರಿಗೆ [illegible] ಮಾಡಿದರು. ಈಗ ಸಾಮ್ಯ[illegible] ಗರೂ [illegible] ಪ್ರಶ್ನೆಗೆ ಬಂದರೆ [illegible] ಬೆಂಬಲ [illegible]

[illegible]






[illegible]



[illegible]





[illegible] ದಿಲ್ಲಿಗೆ [illegible]



[illegible]

ಬಂಗಾರ

[illegible]

ಕರ್ನಾಟಕ

ಧಾರವಾಡ

ಬ್ಯಾಹಟ್ಟಿ ಗ್ರಾಮೋದ್ಯೋಗ ಸಮಿತಿಯವರು ಬ್ಯಾಹಟ್ಟಿಯಲ್ಲಿ ಉಣ್ಣೆ ಉದ್ಯೋಗದ ಬೆಳವಣಿಗೆಗಾಗಿ ಸಾವಿರ ರೂಪಾಯಿಗಳನ್ನು ಕೊಡಲೊಪ್ಪಿದ್ದು ಕೆಲ ಹಣವನ್ನು ಈಗಾಗಲೆ ಕೊಟ್ಟುಬಿಟ್ಟದ್ದಾರೆ. ಇದಕ್ಕಾಗಿ ೨ ಎಕರೆ ಭೂಮಿಯೊಂದನ್ನು ಹಿಡಿದಿದ್ದು ಕೆಲಸ ಭರದಿಂದ ನಡೆದಿದೆ.

ಪತ್ರಿಕಾ ಪರಿಷತ್ತಿನಲ್ಲಿ ಮಾತಾಡುತ್ತ ಧಾರವಾಡ ಜಿಲ್ಲೆಯ ಕಲೆಕ್ಟರರು ಫೆಬ್ರುವರಿ ೧ ರಿಂದ ಚಿಮಣಿಯೆಣ್ಣೆಯ ಮೇಲಿನ ನಿಯಂತ್ರಣವನ್ನು ಕಿತ್ತೊಗೆಯಲಾಗುವದು ಎಂದು ಹೇಳಿದರು. ಕಡಲೆ ಮತ್ತು ಕಡಲೆ ಬೇಳೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಧಾನ್ಯಗಳನ್ನು ಪ್ರಾಂತದಲ್ಲಿ ಬೇಕಾದಲ್ಲಿಗೆ ಒಯ್ಯಬಹುದು ಎಂದು ಹೇಳಿದರು. ಬಟ್ಟೆಯ ನಿಯಂತ್ರಣ ಎಪ್ರಿಲ ೧ ರಿಂದ ಹೋಗಬಹುದಂತೆ.

ಎಂ. ಎಸ್. ಎಂ. ರೇಲ್ವೆ ಸಲಹೆ ಸಮಿತಿಗೆ ರೇಲ್ವೆ ಬೋರ್ಡಿನ ಪರವಾಗಿ ಶ್ರೀ ಕೆ ಸಂತಾನಮ್ ಮತ್ತು ರಂಗನಾಥ ದಿವಾಕರ ಇವರು ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟಿರುವರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ವಿಶೇಷ ಸಾಧಾರಣ ಸಭೆಯು ಜನೇವರಿ ೧೪ ಕ್ಕೆ ಹುಬ್ಬಳ್ಳಿಯಲ್ಲಿ ಪ್ರಾಂತಿಕ ಸಮಿತಿಯ ಕಚೇರಿಯಲ್ಲಿ ಮಧ್ಯಾಹ್ನ ೩ ಗಂಟೆಗೆ ಕೂಡುವದು.

ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಇದೇ ತಿಂಗಳ ೧೫, ೧೬, ೧೭ ದಿನಾಂಕಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಾಗು ೧೮, ೧೯, ೨೦ ಮತ್ತು ೨೧ ದಿನಾಂಕಗಳಲ್ಲಿ ವಿಜಾಪುರ ಜಿಲ್ಹೆಯಲ್ಲಿ ಪ್ರವಾಸ ಮಾಡುವರು.

ಬೆಳಗಾವಿ

ಕರ್ನಾಟಕದಲ್ಲಿಯ ಮುಸಲ್ಮಾನರ ಪರಿಷತ್ತನ್ನು ಇದೇ ತಾ. ೧೪, ೧೫ ಕ್ಕೆ ಕರೆಯಬೇಕೆಂದು ಗೊತ್ತಾಗಿದೆ. ಡ್ಯಾ. ನೂರಿಯವರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ಪರಿಷತ್ತಿನ ಸ್ಥಳ ಮುಂತಾದ್ದನ್ನು ಹಿಂದುಗಡೆ ಪ್ರಕಟಿಸಲಾಗುವದು.

ಹೊಸೂರಲ್ಲಿಯ ಮುಸಲ್ಮಾನರು ಶ್ರೀ ಫೀರಿ ಸಾಹೇಬ ಇಂಚಲ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮುಸ್ಲಿಂ ಲೀಗ ಸ್ಥಾಪನೆಯಾದಂದಿನಿಂದ ದೇಶದಲ್ಲಿ ಅತ್ಯಾಚಾರಗಳು ಹೆಚ್ಚಿದ್ದರಿಂದ ಅದನ್ನು ಬಹಿಷ್ಕರಿಸಬೇಕು, ನೆಹರೂ ಸರಕಾರಕ್ಕೆ ವಿಧೇಯರಾಗಿ ನಡೆಯಬೇಕು, ಅಖಂಡ ಭಾರತ ಕಟ್ಟಲು ಪ್ರಯತ್ನಿಸಬೇಕು ಮೊದಲಾದ ಗೊತ್ತುವಳಿಗಳನ್ನು ಸ್ವೀಕರಿಸಿದರು.

ಜಮೀನದಾರರ ನ್ಯಾಯ್ಯವಾದಹಕ್ಕುಗಳಿಗಾಗಿ ಸಂಘಟಿತ ರೀತಿ ಪ್ರಯತ್ನಿಸಲು ಖಾನಾಪುರದಲ್ಲಿ ತಾಲೂಕ ಜಮೀನದಾರರ ಸಂಘವೊಂದು ಸ್ಥಾಪಿತವಾಗಿದೆ. ನಂದಗಡದ ಶ್ರೀ ರಂಗೋ ಗಣೇಶ ಕುಲಕರ್ಣಿಯವರು ಚೇರಮನ್ನರು ಶ್ರೀ ನರಹರ ಹಣಮಂತ ದೇಶಪಾಂಡೆಯವರು ಕಾರ್ಯದರ್ಶಿಗಳಾಗಿರುವರು.

ಸವದತ್ತಿ ಗ್ರಾಮೋದ್ಯೋಗ ಸಹಕಾರೀ ಸಂಘದ ಒತಿಯಿಂದ ಹೊಸೂರ ಬೈಲಹೊಂಗಲ ಮತ್ತು ಸುತ್ತುಮುತ್ತಲಿನ ೨೫ ಗ್ರಾಮಗಳಲ್ಲಿ ಖಾದಿ ಸ್ವಾವಲಂಬನ ಪ್ರಚಾರ ಮಾಡಲಿದೆ. ಇದಕ್ಕೆ ಕಾರ್ಯಕರ್ತರು ಅವಶ್ಯವಿದ್ದು ೧೦ ಜನರಿಗೆ ೩ ತಿಂಗಳ ಮಟ್ಟಿಗೆ ಶಿಕ್ಷಣ ಕೊಟ್ಟು ನಂತರ ಅವರನ್ನು ಸಂಘದ ಕೆಲಸದಲ್ಲಿ ಹಚ್ಚಿಕೊಳ್ಳಲಾಗುವದು ಎಂದು ಪ್ರಕಟಿಸಲಾಗಿದೆ.

ವಿಜಾಪುರ

ಗುಳೇದಗುಡ್ಡದ ಸರಾಫರಾದ ಶ್ರೀ ಸಂಗಪ್ಪ ಶೀಲವಂತ ಇವರು ಪುನಃ ಮುದ್ರೆಯಾಗದ ತೂಕ ಅಳತೆಗಳನ್ನು ತಮ್ಮ ಅಂಗಡಿಯಲ್ಲಿ ಇಟ್ಟುಕೊಂಡಿದ್ದರಿಂದ ಅವರಿಗೆ ೫೧ ರೂಪಾಯಿ ದಂಡ ವಿಧಿಸಲಾಯಿತು.

ತೆಲಗಿಯ ಹುಂಡೇಕಾರ ಗುರುಬಸಯ್ಯ ಚನಸಂಗಯ್ಯನವರು ವಿಜಾಪುರದ ವಿಜಯ ಕಾಲೇಜಿಗೆ ೨೫೦೦ಲ ರೂಪಾಯಿಗಳನ್ನು ತಮ್ಮ ತಂದೆಯವರ ಸ್ಮರಣಾರ್ಥ ಕೊಟ್ಟಿರು ಉಳಿದವರು ೧೦೦೦ ರೂ ಕೊಟ್ಟರು.

ವಿಜಾಪುರದ ಸಿದ್ಧೇಶ್ವರ ಜಾತ್ರೆಯು ಇದೇ ೧೨ ರಿಂದ ೧೮ ರ ವರೆಗೆ ನಡೆಯುವದಿದ್ದು ಅದರಲ್ಲಿ ೬೦-೭೦ ಸಾವಿರ ದನಗಳುಕೂಡುವವು. ವ್ಯವಸ್ಥೆಗಾಗಿ ಸೇವಾದಲದ ಕಾರ್ಯಕರ್ತರೊಡನೆ ಸಹಕರಿಸಿ ಕೆಲಸ ಮಾಡಲು ೨೦೦ಜನ ಬೇಕಾಗಿದ್ದು ಅಂಥವರು ತಮ್ಮ ಹೆಸರುಗಳನ್ನು ಬಸಯ್ಯ ಪುರಾಣಿಕಮಠ ಶಹಾಪೇಟಿ ಇವರಿಗೆ ತಿಳಿಸಬೇಕು.

ಮುದ್ದೇಬಿಹಾಳ ತಾಲೂಕಿನ ಕೊಣ್ಣೂರಗ್ರಾಮದಲ್ಲಿಯ ವಿದ್ಯಾವರ್ಧಕ ಸಂಘದ ಇಂಗ್ಲೀಶ ಶಾಲೆಯ ೪ ನೇ ವಾರ್ಷಿಕ ಸಮ್ಮೇಲನ ೩ ತಾ॥ ರೆಸಿಡೆಂಟ ಮ್ಯಾಜಿಸ್ಟ್ರೇಟ ಶ್ರೀ ಮಗಜಿಕೊಂಡಿ ಇವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಮುದ್ದೇಬಿಹಾಳದ ಶ್ರೀ ಕಾಳಗಿ ಹಣಮಂತರಾಯರನ್ನು ಸಾರ್ವಜನಿಕ ಸುರಕ್ಷಿತತೆ ಕಾಯಿದೆಯನ್ವಯ ಸೆರೆಹಿಡಿದಿದ್ದಾರೆ.

ಹುನಗುಂದದ ಸಬ್ ಇನಸ್ಪೆಕ್ಟರರಾದ ಶ್ರೀ ಬನಹಟ್ಟಿಯವರು ಹುನಗುಂದದಲ್ಲಿ ತಾ ೨ ನೇ ದಿನ ರಾತ್ರಿ ೧೨ ಗಂಟೆಗೆ ಜೂಜಾಡುವ ಅಡ್ಡೆಗೆ ಮುತ್ತಿಗೆ ಹಾಕಿ ೧೭ ಜನರನ್ನು ಹಿಡಿದಿದ್ದಾರೆ. ಫೌಜದಾರರು ಚಾರ ಸಹಿತ ಮಾಡಬೇಕಾಯಿತಂತೆ.

ಗುಜರಾಥಿ ಮತ್ತು ಮರಾಠಿ ಶಾಲೆಗಳಲ್ಲಿ ಕನ್ನಡವನ್ನು ಕಲಿಸಲಿಕ್ಕೇ ಬೇಕೆಂದು ವಿಜಾಪುರ ಜಿಲ್ಹಾ ಸ್ಕೂಲ ಬೋರ್ಡಿನವರು ನಿರ್ಧರಿಸಿದ್ದಾರೆ.

ಬಳ್ಳಾರಿ

ಇದೇ ತಿಂಗಳ ಮೂರನೇ ವಾರದಲ್ಲಿ ಕೂಡ್ಲಗಿಯಲ್ಲಿ ಜರಗುವ ರೈತ ಹಾಗೂ ವಿದ್ಯಾರ್ಥಿ ಕಾಂಗ್ರೆಸ ಸಮ್ಮೇಲನಗಳೊಂದಿಗೆ ಜಿಲ್ಹಾ ರಾಜಕೀಯ ಕಾರ್ಯಕರ್ತರ ಸಮ್ಮೇಲನವನ್ನೂ ಜರುಗಿಸಬೇಕೆಂದು ವಿಚಾರ ಮಾಡಿದ್ದೇವೆ. ಅಗಷ್ಟ ೧೫ರನಂತರ ರಾಜಕೀಯ ಕಾರ್ಯಕರ್ತರು ಒಂದೆಡೆ ಸೇರಿ ಸದ್ಯದ ಪರಿಸ್ಥಿತಿಯನ್ನು ಸಮಾಲೋಚಿಸಿ ಇನ್ನು ಮುಂದೆ ಎಲ್ಲರೂ ಕೂಡಿಕೊಂಡು ಸಮನ್ವಯವಾಗಿ ಜಿಲ್ಹೆಯಲ್ಲಿ ಕೆಲಸ ಮಾಡಲು ನಿರ್ದಿಷ್ಟ ಕಾರ್ಯಕ್ರಮ ಗೊತ್ತು ಪಡಿಸುವದು ಇದರ ಉದ್ದೇಶವಾಗಿದೆಂದು ಮುಂತಾಗಿ ಆರ್. ವಿ. ದೇಸಾಯಿ, ಅಯ ಬಸವರಾಜ ಇವರು ಪ್ರಕಟಿಸುತ್ತಾರೆ.

ಮಂತ್ರಾಲಯದಲ್ಲಿ ಹಿಂದುಧರ್ಮಾಭಿಮಾನಿಗಳು ೨೭ ನೇ ತಾರೀಕು ಅಖಿಲಕರ್ನಾಟಕ ಸನಾತನಿ ಸಂಘದ ಆಶ್ರಯದಲ್ಲಿ ಸಭೆಸೇರಿಸಿದರು. ಶ್ರೀ ಎಸ್ ಬಿ ಕುಲಕರ್ಣಿ ವಕೀಲ ಮುದ್ದೇಬಿಹಾಳ ಇವರು ಅಧ್ಯಕ್ಷತೆ ವಹಿಸಿದ್ದರು. ಮದ್ರಾಸ ಸರಕಾರದವರು ತಂದಿರುವ ಮಠಗಳ ಮಸೂದೆಯಿಂದ ಮಠಗಳ ಅಸ್ತಿತ್ವ ಹಾಗು ಸ್ಥಾನಮಾನಗಳಿಗೆ ಧಕ್ಕೆಬರುವದರಿಂದ ಅದನ್ನು ಕೂಡಲೆ ಹಿಂತೆಗೆದುಕೊಳ್ಳಬೇಕೆಂದೂ ಧರ್ಮಪೀಠಗಳ ಹಾಗು ಧಾರ್ಮಿಕರ ಹಕ್ಕುಗಳನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿ ಸ್ವೀಕೃತವಾಯಿತು. ಮೈಸೂರ ಹರಿಜನ ಮಂದಿರ ಪ್ರವೇಶ ಮಸೂದೆಯನ್ನು ನಿಷೇಧಿಸಲಾಯಿತು. ನ್ಯಾಯ ವಿಧಾಯಕ ಸಭೆಯವರು ಇದನ್ನು ಪಾಸಮಾಡಬಾರದೆಂದೂ ಬಿನ್ನವಿಸಲಾಯಿತು.

ಮಂತ್ರಾಲಯದಲ್ಲಿ ಹೈದರಾಬಾದ ಸಂಸ್ಥಾನದ ಹಲ್ಕಾಯರಿಗೇರಿಯ ಗೌಡ ಶಾನುಭೋಗರು ಕಮೀಟಿಯನ್ನು ಕರೆದಿದ್ದರು. ಶ್ರೀ ಪಾಂಡುರಂಗ ರಾಯಚೂರ ಇವರು ಅಧ್ಯಕ್ಷತೆ ವಹಿಸಿದರು. ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸಿನ ಹೋರಾಟವನ್ನು ಮುಂದೆ ಯಾವರೀತಿಯಿಂದ ನಡೆಸಬೇಕೆಂಬ ಬಗ್ಗೆ ದೀರ್ಘ ಚರ್ಚೆಯಾಯಿತು ತುಂಗಭದ್ರಾ ಗ್ರಾಮದ ಪ್ರಸಿದ್ಧ ಮಾಲೀ ಪಟೇಲ ಶ್ರೀ ರಾಮರೆಡ್ಡಿಯವರನ್ನು ಪುಕ್ಕಟೆ ಕುರಿ ಕೋಳಿ ಕೊಡಿಸದೆ ಇದ್ದದ್ದರಿಂದ ನಿಜಾಮ ಪೋಲಿಸರು ಬೂಟನಿಂದ ಒದ್ದ ಉದ್ಧಟತನಕ್ಕಾಗಿ ಸಂತಾಪವನ್ನು ವ್ಯಕ್ತಮಾಡಿತು.

ಕೊಟ್ಟೂರಲ್ಲಿ ಈಗ ೨ ತಿಂಗಳಗಳಿಂದ ಪ್ಲೇಗು ಇತ್ತು ಈಗ ಸ್ವಲ್ಪ ಕಡಿಮೆಯಾಗಿದೆ. ಸುತ್ತ ಮುತ್ತಿನ ಹಳ್ಳಿಗಳಲ್ಲಿ ಕೂಡ ಪ್ಲೇಗುಇದೆ. ಕೂಡ್ಲಗಿಯಲ್ಲಿ ಈಗ ಹಲವುದಿನಗಳಿಂದ ಇಲಿ ಬೀಳುತಿದ್ದು ೪-೫ ಮರಣಗಳೂ ಆಗಿವೆ.

ಮದ್ರಾಸ ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀ ಅತ್ತಾವರ ಶೆಟ್ಟಿಯವರು ಬಳ್ಳಾರಿಯ ಹಾಯಸ್ಕೂಲಿನಲ್ಲಿ ಎಲ್. ಆಯ. ಎಂ. ಪರಿಷತ್ತಿನ ಉದ್ಘಾಟನ ಮಾಡುತ್ತ ಹಿಂದೀ ಔಷಧ ಪದ್ಧತಿಯು ಅನೇಕ ವರುಷಗಳಿಂದ ನಡೆದು ಬಂದಿದ್ದು ವನಸ್ಪತಿಗಳಲ್ಲಿ ಕಠಿನ ರೋಗಗಳನ್ನು ಗುಣಪಡಿಸುವ ಶಕ್ತಿಯಿರುವದೆಂದು ಮುಂತಾಗಿ ಹೇಳಿದರು.

ಅಕ್ಕಲಕೋಟೆಯ ರಾಜೇಸಾಹೇಬರು ಪ್ರಜಾಭಿಪ್ರಾಯಕ್ಕೆ ತಲೆಬಾಗಿ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ಲೀನಗೊಳಿಸುವದಾಗಿ ಪ್ರಕಟಿಸಿದ್ದಾರೆ.

ಉತ್ತರ ಕನ್ನಡ

ಮುಂಬಯಿಯಲ್ಲಿ ಸೇರಿದ ಗ್ರಾಮೋದ್ಯೋಗ ಸಮಿತಿಯವರು ಹೊನ್ನಾವರ ಔದ್ಯೋಗಿಕ ಶಾಲೆಗೆ ಧನ ಸಹಾಯ ಮಾಡಬೇಕೆಂದು, ಗೊತ್ತುಮಾಡಿದ್ದಾರೆ. ಅದೇ ರೀತಿ ಸವದತ್ತಿ ಗೃಹ ಕೈಗಾರಿಕೆ ಸಹಕಾರೀ ಸಂಘಕ್ಕೆ ಸಹಾಯ ಸಲ್ಲಿಸಲಾಗುವದು. ಧಾರವಾಡ ತಾಲೂಕ ಯೋಜನೆಗೆ ೩೯೪೭೭೭೨ ರೂ. ಗಳನ್ನು ಮಂಜೂರ ಮಾಡಿರುವರು. ಕರ್ನಾಟಕಕ್ಕೆ ಸಂಬಂಧಿಸಿದ ಇತರ ಯೋಜನೆಗಳ ವಿಚಾರ ಮಾರ್ಗದಲ್ಲಿ ನಡೆಯುವದು.

ಉತ್ತರ ಕನ್ನಡ ಜಿಲ್ಹೆಯ ೬ ನಗರಗಳಲ್ಲಿ ಈಗ ಸೀದಾ ಪದ್ಧತಿಯನ್ನು ರದ್ದುಪಡಿಸಲಾಗಿದೆ. ಭಟಕಳದಲ್ಲಿಯ ವಿಚಿತ್ರ ಸಾರಿಗೆ ಪರಿಸ್ಥಿತಿಯ ಮೂಲಕ ಇನ್ನೂ ಸೀದಾ ಪದ್ಧತಿ ಜಾರಿಯಲ್ಲಿ ಇದೆ. ಅನಿರ್ಬಂಧ ವ್ಯಾಪಾರ ನಡೆದಿದ್ದರಿಂದ ಧಾರಣೆಗಳ ಮೇಲೆ ಸುಪರಿಣಾಮವುಂಟಾಗಿದೆ.

ಕಡತೋಕಾ ಗ್ರಾಮದ ಶ್ರೀ ಸ್ವಯಂಭೂದೇವಸ್ಥಾನದಲ್ಲಿ ೩೧ ನೆಯ ತಾರೀಕು ಸಾಯಂಕಾಲ ೬ ಗಂಟೆಗೆ ಶ್ರೀ ನರಸಿಂಹ ಗೋವಿಂದ ಶಾನಭಾಗ ಇವರ ಅಧ್ಯಕ್ಷತೆಯಲ್ಲಿ ಹೊನ್ನಾವರ ತಾಲೂಕ ಚೌಕಗ್ರಾಮ ಭೂಮಾಲಕರ ಸಂಘದ ಮಹಾಸಭೆಯಲ್ಲಿ ಪಾಲಿನ ಸಾಗುವಳಿಯಿದ್ದಲ್ಲಿ ಒಡೆಯರ ಪಾಲು ನಗದಿಯಿಂದ ಕೊಡಿಸುವ ಯೋಜನೆಗೆ ವಿರೋಧ ಮಾಡಲಾಯಿತು. ಒಡೆಯರಿಗೆ ತೀರ್ಪೆಯಲ್ಲಿ ಕೊಟ್ಟ ಸೂಟನ್ನು ರದ್ದುಪಡಿಸಲು ಬಿನ್ನವಿಸಲಾಯಿತು. ಮೈಗಳ್ಳ ರೈತನಿಗೆ ಸಂರಕ್ಷಣೆ ಸಿಕ್ಕಕೂಡದೆಂದು ನಿರ್ಧರಿಸಲಾಯಿತು. ಕಬಜೆ ದಾವೆಗಳ ತೀರ್ಪು ತೀವ್ರವೇ ಆಗಬೇಕು. ಇವೆ ಮೊದಲಾದ ಆಶಯಗಳ ಗೊತ್ತುವಳಿಗಳು ಸ್ವೀಕೃತವಾದವು.

ದಕ್ಷಿಣ ಕನ್ನಡ

ಕ್ಯಾನರಾಚೆಂಬರ ಆಫ ಕಾಮರ್ಸದ ವರ್ಧಂತಿ ಉತ್ಸವ ಇದೇ ೧೧ ನೇ ತಾರೀಖು ರವಿವಾರ ಮದ್ರಾಸ ಸರಕಾರದ ಮಂತ್ರಿಗಳಾದ ಮಾನ್ಯ ಭಕ್ತವತ್ಸಲಂ ಇವರ ಅಧ್ಯಕ್ಷತೆಯಲ್ಲಿ ಕ್ಯಾನರಾ ಹೈಸ್ಕೂಲಿನ ಪಟಾಂಗಣದಲ್ಲಿ ಜರಗಿತು.

೧ ನೇ ತಾರೀಕು ಬಂಟ್ವಾಳದಲ್ಲಿ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆ ಜರುಗಿ ಕೂಲಿಕಾರರ ಸಂಘಟನೆ ಕುರಿತು ಹಲವರ ಭಾಷಣಗಳಾದವು. ವಿಜಾಪುರದಿಂದ ಬಂದಿರುವ ಬಾಲಸಿಂಗ ಮಾಸ್ತರರು ಅಧ್ಯಕ್ಷತೆ ವಹಿಸಿದ್ದರು.

ಮಂಗಳೂರ ತಾಲೂಕ ರೈತರ ಸಮ್ಮೇಲನ ೧೪-೧-೪೮ ರಂದು ವಿಜಾಪುರದ ಕೂಲಿಕಾರ ಧುರೀಣರಾದ ಶ್ರೀಬಾಲಸಿಂಗ ಮಾಸ್ತರರ ಅಧ್ಯಕ್ಷತೆಯಲ್ಲಿ ಸೇರುವದುಗೇಣಿ ಸಂಬಂಧದಲ್ಲಿ ವಿಚಾರಿಸುವದು ರೈತ ಸಂಘಗಳನ್ನು ಸಂಘಟಿಸುವದು ಮೊದಲಾದವುಗಳು ಪರಿಷತ್ತಿನ ಉದ್ದೇಶಗಳಾಗಿವೆ

ಬೆಂಗಳೂರು—ಮೈಸೂರು

ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಶ್ರೀ. ಟಿ. ಸಿದ್ದಲಿಂಗಯ್ಯನವರು ೨ನೇ ತಾರೀಕ ಬೆಂಗಳೂರಿನಲ್ಲಿ ಸಿ ಎಂ ಸಿಯ ದಲ್ಲಿ ಮಾತಾಡುತ್ತ ಸಂಸ್ಥಾನ ಕಾಂಗ್ರೆಸು ಇನ್ನು ಎ.ಐ.ಆಯ. ಸಿ. ಸಿಯ ವಿಧಾಯಕ ಕಾರ್ಯಕ್ರಮ ಅನುಸರಿಸುವದೆಂದೂ ದೇಶ ರಕ್ಷಣೆಯನ್ನು ಮೊದಲು ಲಕ್ಷ್ಯ ಪೂರೈಸಲಾಗುವದೆಂದೂ ಹೇಳಿದರು. ಮುಸಲ್ಮಾನರು ಕಾಂಗ್ರೆಸ್ಸಿನಲ್ಲಿ ಸೇರಿ ಪೂರ್ಣ ಸಹಕರಿಸಬೇಕೆಂದೂ ಕೇಳಿಕೊಂಡರು.

ಕರ್ನಾಟಕ ಏಕೀಕರಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ಮಂಗಳವೇಡೆ ಶ್ರೀನಿವಾಸರಾಯರು ಪ್ರಚಾರಾರ್ಥವಾಗಿ ಬೆಂಗಳೂರಿಗೆ ಹೋಗಿದ್ದರು ಕಾಂಗ್ರೆಸ ಹಾಗು ಕಾಂಗ್ರೆಸ್ಸೇತರ ಕಾರ್ಯಕರ್ತರನ್ನು ಕಂಡು ಸ್ವತಂತ್ರ ಪ್ರಾಂತ ನಿರ್ಮಾಣದ ಬಗ್ಗೆ ಮಾತುಕತೆಯಾಡಿದರು. ಅವರು ಸಂಸ್ಥಾನದಲ್ಲಿ ಮತ್ತು ಕೊಡಗು ಪ್ರಾಂತದಲ್ಲಿ ಸಂಚರಿಸುವರು.

ಭಟಕಳ ಬಂದರದ ವಿಷಯವಾಗಿ ಮೈಸೂರ ಮತ್ತು ಮುಂಬಯಿ ಸರಕಾರಗಳ ನಡುವೆ ನಡೆದ ಮಾತುಕತೆಗಳ ಫಲಿತಾಂಶವಿನ್ನೂ ಪ್ರಸಿದ್ಧವಾಗಿಲ್ಲ. ಆದರೆ ತಜ್ಞ ಸಮಿತಿಯವರು ಭಟಕಳವು ಎಲ್ಲಕಾಲದಲ್ಲಿಯೂ ಉಪಯುಕ್ತವಾದ ಬಂದರವೆಂದು ಅಭಿಪ್ರಾಯ ಪಟ್ಟಿರುವರು. ಮಂಗಳೂರು ಹವೆ ನೆಟ್ಟಗಿದ್ದಾಗ ಮಾತ್ರ ಉಪಯುಕ್ತವೆಂದೂ ಗೃಹಮಂತ್ರಿಗಳು ಮೈಸೂರ ವಿಧಿ ಮಂಡಳದಲ್ಲಿ ಹೇಳಿದರು.

ಮುಖ್ಯಮಂತ್ರಿಗಳು ಪ್ರಶ್ನೆಗಳಿಗೆ ಉತ್ತರಕೊಡುತ್ತ ದಿವಾನ ಮತ್ತು ಮಂತ್ರಿಮಂಡಳದ ಸಂಬಂಧವನ್ನು ಸ್ಪಷ್ಟಪಡಿಸಿದರು ಮಹಾರಾಜರ ಒಪ್ಪಿಗೆಯನ್ನು ಪಡೆದ ವಿಧಿನಿಯಮಗಳ ಪ್ರಕಾರ ಸದ್ಯಕ್ಕೆ ದಿವಾನ ಮತ್ತು ಮುಖ್ಯಮಂತ್ರಿ ಮತ್ತು ಮಂತ್ರಿಗಳ ಸಂಬಂಧವಿದೆ. ದಿವಾನರು ಸಂಯುಕ್ತ ಹೊಣೆಗಾರಿಕೆಯನ್ನು ಒಪ್ಪಿದ್ದಾರೆ. ಮುಖ್ಯಮಂತ್ರಿಗೆ ಹೆಚ್ಚು ಅಧಿಕಾರವಿರುವಂತೆ ರೂಢಿಯನ್ನಿಟ್ಟುಕೊಳ್ಳುವೆವು ಎಂದು ಹೇಳಿದರು.

ಕನ್ನಡ ಸಂಸ್ಥಾನ

ಕೊಲ್ಹಾಪುರದ ಎಂಜಿನಿಯರಿಂಗ ಕಾಲೇಜಿನಲ್ಲಿ ಲೆಕ್ಚರರಾಗಿರುವ ಶ್ರೀ ಜಯವಂತ ಕೃಷ್ಣಾಜಿ ಜೋಡಲು ಕೃಷ್ಣಾ ನದಿಯಲ್ಲಿ ಈಸಲಿಕ್ಕೆ ಹೋದಾಗ ತಿರುಗಣಿ ಸುಳಿಯಲ್ಲಿ ಸಿಕ್ಕು ಕೈಲಾಸವಾಸಿಗಳಾದರು. ಇವರು ಕೇವಲ ೩೦ ವರುಷ ವಯಸ್ಸಿನವರಾಗಿದ್ದರು.

ಮಿರಜೆಯ ಕ್ರಿಶ್ಚನ್ ಮೆಡಿಕಲ್ ಸ್ಕೂಲಿನ ಸುವರ್ಣ ಮಹೋತ್ಸವ ಇದೇ ತಿಂಗಳ ಕೊನೆಯ ವಾರದಲ್ಲಿ ನಡೆಯಲಿದೆ. ಮುಂಬಯಿ ಸರಕಾರದ ಆರೋಗ್ಯ ಮಂತ್ರಿಗಳಾದ ಡಾ. ಗಿಲ್ಡರರು ಮುಖ್ಯ ಅತಿಥಿಗಳಾಗಿ ಆಗಮಿಸಲು ಒಪ್ಪಿದ್ದಾರೆ. ಈ ಸಮಾರಂಭವು ಒಂದು ವಾರದ ವರೆಗೆ ನಡೆಯುವದು. ಹಿರಿಯ ಮಿರಜೆ ಸಂಸ್ಥಾನದ ರಾಜೇಸಾಹೇಬರು ಈ ಸಮಾರಂಭದ ಉದ್ಘಾಟನವನ್ನು ಮಾಡಬಹುದೆಂದು ತಿಳಿಯುತ್ತದೆ.

ದಕ್ಷಿಣ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ಲೀನವಾಗುವದಕ್ಕೆ ನನ್ನ ಬೆಂಬಲವಿದೆ. ಆದರೆ ಕೊಲ್ಹಾಪುರ ಮಾತ್ರ ಕೆಲ ರಾಜಕೀಯ ಕಾರಣಗಳ ಮೂಲಕ ಕೆಲ ಕಾಲ ಹೊರಗುಳಿಯುವದು ಅವಶ್ಯವಿದೆಯೆಂದು ಕೊಲ್ಹಾಪುರ ಮುಖ್ಯ ಮಂತ್ರಿಗಳ ಅಭಿಪ್ರಾಯವಿದೆ.

ಹರಿಹರದಲ್ಲಿಯ ಕಿರ್ಲೋಸ್ಕರ ಕಂಪನಿಯ ಒಡೆಯರು ಮತ್ತು ಕೂಲಿಕಾರರಲ್ಲಿ ಉಂಟಾದ ಮತಭೇದವನ್ನು ಹೋಗಲಾಡಿಸಿ ಮಂತ್ರಿಗಳಾದ ಶ್ರೀ ಭಾಷ್ಯಂರವರು ಒಂದು ಬಗೆಯ ಒಡಂಬಡಿಕೆ ಮಾಡಿಕೊಟ್ಟು ಕೆಲಸಗಾರರು ಕೆಲಸಕ್ಕೆ ಹೋಗಬೇಕೆಂದು ಕೇಳಿಕೊಂಡರು. ಅದರಂತೆ ಕೆಲಸಗಾರರು ಹೋದಾಗ ಅವರನ್ನು ಹಾಗೆಯೆ ಕೆಲಸಕ್ಕೆ ತೆಗೆದುಕೊಳ್ಳದೆ ಕ್ಷಮಾಪತ್ರ ಬರೆದು ಕೊಡಬೇಕೆಂದು ಕೇಳಿದರಂತೆ. ಇದು ನಿಜವಿದ್ದರೆ ಒಡೆಯರು ನ್ಯಾಯವನ್ನು ಪಾಲಿಸಲ್ಲೆಂದು ಹೇಳಬೇಕಾಗುವದು. ಕೆಲಸಗಾರರೀಗ ಬೆಂಗಳೂರಿನ ಆಶಾರಾ ಕಚೇರಿಯ ಮುಂದೆ ಸತ್ಯಾಗ್ರಹ ಮಾಡಲು ನಿರ್ಧರಿಸಿರುವರೆಂದು ತಿಳಿಯುತ್ತದೆ.

ದಕ್ಷಿಣ ಸಂಸ್ಥಾನಗಳ ಪ್ರಜಾಪರಿಷತ್ತುಗಳು ತಮ್ಮತಮ್ಮ ಸಂಸ್ಥಾನಗಳ ವಿಲೀನೀಕರಣ ಗೊತ್ತುವಳಿಗಳನ್ನು ಕೂಡಲೆ ಪಾಸು ಮಾಡಬೇಕೆಂದು ನಿರ್ದೇಶಿಸುವ ಮಹತ್ವದ ಗೊತ್ತುವಳಿಯನ್ನು ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ದಕ್ಷಿಣ ಸಂಸ್ಥಾನ ಪ್ರಾದೇಶಿಕ ಮಂಡಲದವರು ಕೈಕೊಂಡಿರುವರು.

ಸಾಂಗಲಿ, ಮಿರಜಿ, ಬುಧಗಾವ, ಫಲ್ಟನ, ರಾಮದುರ್ಗ ಮತ್ತು ಕುರಂದವಾಡ ಸಂಸ್ಥಾನಿಕರು ವಿಲೀನೀಕರಣದ ಸಂಬಂಧವಲ್ಲಿ ವಿಚಾರವಿನಿಮಯ ಮಾಡಲು ಸರದಾರ ವಲ್ಲಭಭಾಯಿರ ಕಡೆಗೆ ಹೋಗಲಿದ್ದಾರೆಂದು ತಿಳಿಯುತ್ತದೆ.

---

೨೫ ಲಕ್ಷ ಅಂಕಿತ ಸಂಗ್ರಹಿಸತಕ್ಕದ್ದು

ಭಾರತ ಘಟನಾಸಮಿತಿಯ ಅಧಿವೇಶನವು ಎಪ್ರಿಲದವರೆಗೆ ಮುಂದುವರೆದಿದ್ದರಿಂದಲೂ ಹಳ್ಳಿಪಳ್ಳಿಗಳಲ್ಲಿ ಜನಜಾಗ್ರತಿಯಾಗಿ ಏಕೀಕರಣದ ಪ್ರಚಾರ ಸಾಕಷ್ಟು ಆಗುವದೆಂದು ಕಂಡು ಬಂದದ್ದರಿಂದಲೂ ೨೫ ಲಕ್ಷ ಕನ್ನಡಿಗರ ಅಂಕಿತ ಸಂಗ್ರಹದ ಕಾರ್ಯವನ್ನು ಮುಂದೆಸಾಗಿಸಬೇಕೆಂದು ಮೊನ್ನೆ ಕಾಸರಗೋಡಿನಲ್ಲಿ ಕ್ರಿಯಾಸಮಿತಿಯವರು ನಿರ್ಧರಿಸಿದ್ದರಿಂದ ಕನ್ನಡನಾಡಿನೊಳಗಿನ ಸಮಸ್ತ ಕಾರ್ಯಕರ್ತರು ಈ ಕೆಲಸವನ್ನು ಮುಂದೆ ಸಾಗಿಸಬೇಕೆಂದೂ ಮನವಿಯ ಮುದ್ರಿತ ಪ್ರತಿಗಳನ್ನು ಕಾರ್ಯಾಲಯದಿಂದ ಪಡೆದುಕೊಂಡು ಶೀಘ್ರದಲ್ಲಿಯೇ ಪ್ರತಿಯೊಬ್ಬರೂ ತಮ್ಮ ತಮ್ಮ ಸ್ಥಳದ ಕಾರ್ಯವನ್ನು ಮುಗಿಸಿ ಮನವಿಯೋಲೆಗಳನ್ನು ಕಾರ್ಯಾಲಯಕ್ಕೆ ಕಳಿಸಿ ಕೊಡಬೇಕೆಂದೂ ಕರ್ನಾಟಕ ಏಕೀಕರಣ ಮಹಾಸಮಿತಿಯು ಬಿನ್ನವಿಸುತ್ತದೆ.

ಹಿಂದೂಸ್ಥಾನ

ಮುಂಬಯಿ

ಅಕ್ಟೋಬರ ತಿಂಗಳಿಂದ ಮುಂಬಯಿ ಪ್ರಾಂತದ ಪರಿಗಣಿತ ೫೦ ಕ್ಕೂ ಅಧಿಕವಾಗಿದ್ದ ಪೋಲೀಸ್ ಠಾಣೆಗಳ ಎತ್ತುವಳಿಯನ್ನು ರದ್ದುಗೊಳಿಸಲು ಅಧಿಕಾರಿಗಳು ಯೋಗ್ಯ ಉಪಾಯ ಕೈಕೊಂಡಿರುವರು. ಬ್ರಿಟಿಷ ಇಂಜಿನಿಯರಿಂಗ ಕಾಮಿಯ ಹಲವು ಕೆಲಸಗಾರರು ಕಳೆದ ಕೆಲ ದಿನಗಳಿಂದ ಸಂಪು ಹೂಡಿದ್ದು, ಇನ್ನೂ ನಿಲ್ಲಿಸುವ ಲಕ್ಷಣವಿಲ್ಲ. ಸಂಪುಗಾರರು ಪೊಡಲನೆಯ ದಿನಕೊಳವೆಯ ನಳಿಕೆಗಳನ್ನು ಕೆಡಿಸಿ ಬೆಂಝೀನ್, ಕೆರೋಸಿನ್, ವಿಮಾನ ಸ್ಪಿರಿಟ್ ಪೆಟ್ರೋಲ ಮೊದಲಾದವೆಲ್ಲ ನಿಯಂತ್ರಣವಾಗುವಂತೆ ಸೂಚಿಸಿದ್ದರಿಂದ ಕೊಳವೆಯ ರಕ್ಷಣೆ ಅಗತ್ಯವಾಗಿದೆ.

ಸೂರತದಲ್ಲಿ ನೋಸ್ಟಲ್ ಇನ್ನಿಯುಕನ್ಸ ಚೀಲಗಳು ಇಲ್ಲದ್ದರಿಂದ ಲಕ್ಷಾಂತರ ರೂ. ಬೆಳೆಯ ಜಿನಿ ಸುರತದ ಕಾರಖಾನೆಗಳಲ್ಲಿ ಹಾಗೇ ಬಿದ್ದುಕೊಂಡಿದೆ. ಉತ್ಪಾದನೆಯಲ್ಲಿ ಸುರತ ನಗರವು ಹಿಂದುಸ್ಥಾನದಲ್ಲಿ ಅತಿದೊಡ್ಡ ಕೇಂದ್ರವಿದ್ದು ಪ್ರತಿದಿನ ಇಲ್ಲಿ ಒಂದು ಲಕ್ಷ ರೂ ಬೆಲೆಯ ಜರಿಯು ಸಿದ್ಧವಾಗುತ್ತದೆ.

ಭಾರತ ಮುಖ್ಯಮಂತ್ರಿ ಪಂ. ನೆಹರೂರವರೆಗೆ ಗೋವೆಯ ಪ್ರಜೆಗಳ ಪರವಾಗಿ ಒಂದು ಶಿಷ್ಟ ಮಂಡಲ ಹೋಗಿ ಪೋರ್ತುಗೀಜರ ನಿರಂಕುಶ ಆಳಿಕೆಕೊನೆಗೊಳ್ಳಬೇಕೆಂದೂ ಅವರು ಕೊಡಮಾಡಿದ ರಾಜಕೀಯ ಸುಧಾರಣೆ ಅತೃಪ್ತಿಕರವಾಗಿದೆಯೆಂದೂ ಪ್ರತಿಪಾದಿಸಿದ್ದಾರೆ.

ಮಹಾರಾಷ್ಟ್ರ ಕಾಂಗ್ರೆಸ ಸಮಿತಿಯು ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರವರಿಗೆ ೨ ಲಕ್ಷ ರೂ. ಗಳ ಹಮ್ಮಿಣಿ ಅರ್ಪಿಸಬೇಕೆಂದು ಮಾಡಿದ್ದಾಗಿ ತಿಳಿಯುತ್ತದೆ. ಡಾ. ರಾಜೇಂದ್ರ ಪ್ರಸಾದರು ಜಾನೇವರಿ ೧೪ ರಿಂದ ಮಹಾರಾಷ್ಟ್ರದಲ್ಲಿ ಸಂಚರಿಸಲಿರುವರು.

ಬಿ. ಪಿ. ಯು. ಸಿ. ಯು. ಅಧ್ಯಕ್ಷರಾದ ಶ್ರೀ. ಎಸ್. ಎಸ್. ಮಿರಜಕರರ ಅಧ್ಯಕ್ಷತೆಯಲ್ಲಿ ವಿಶಿಯಂತ್ರಣ ವಿರೋಧ ದಿನವನ್ನು ಆಚರಿಸಲು ಮುಂಬಯಿ ಟ್ರೇಡ ಯೂನಿಯನ್ ಕಾಂಗ್ರೆಸದ ಪರವಾಗಿ ತಾ ೪ ಕ್ಕೆ ಸಭೆ ಸೇರಿತ್ತು. ಈ ಸಭೆಯಲ್ಲಿ ಅವಶ್ಯಕ ವಸ್ತುಗಳನ್ನು ನಿಯಂತ್ರಿಸಲು ಮತ್ತು ನಿಯಂತ್ರಣ ಧೋರಣವನ್ನು ಪರಿಶೀಲಿಸಲು ಸರಕಾರಕ್ಕೆ ಬಿನ್ನವಿಸುವ ಒಂದು ನಿರ್ಣಯವು ಅಂಗೀಕೃತವಾಯಿತು.

ಮದ್ರಾಸ

ಎಂ. ಆ್ಯಂಡ ಎಸ್. ಎಂ. ರೇಲ್ವೆಯ ಮುಂಬಯಿ ಆಡಳಿತಿಯ ಲೋಕಲ್ ಸಲಹೆ ಸಮಿತಿಗೆ ಶ್ರೀ ರಂಗರಾವ ದಿವಾಕರರು ರೇಲ್ವೆ ಬೋರ್ಡಿನಿಂದ ರೇಲ್ವೆಗಳ ಮಧ್ಯವರ್ತಿ ಸಲಹೆ ಸಮಿತಿಯ ಪರವಾಗಿ ಸಭಾಸದರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮದ್ರಾಸ ಪ್ರಾಂತ್ಯದಲ್ಲಿ ಆಹಾರ ಪರಿಸ್ಥಿತಿಯು ವಿಷಮವಿರುವದರಿಂದ ಅದನ್ನು ಸುಧಾರಿಸಲು ಮದ್ರಾಸ ಸರಕಾರವು ಕೇಂದ್ರ ಸರಕಾರದ ಸಹಾಯ ಕೋರಿದೆ. ಆಹಾರ ಧಾನ್ಯಗಳ ಸರಬರಾಜು ಅತಿ ಶೀಘ್ರವಾಗಬೇಕೆಂದು ಮದ್ರಾಸ ಮಂತ್ರಿಗಳು ಕೋರುವರಾಗಿ ಮದ್ರಾಸ ಆಹಾರ ಖಾತೆಯ ಸೆಕ್ರೆಟರಿ ಶ್ರೀ ಎಂ. ಎ. ಕುಟ್ಟಿಲಿಂಗಂ ಪಿಳ್ಳೆಯವರು ತಾ. ೫ ರಂದು ಪತ್ರಿಕೋದ್ಯೋಗಿಗಳಿಗೆ ತಿಳಿಸಿದರು.

ಬರುವ ತಿಂಗಳ ಎರಡನೆಯ ವಾರದಲ್ಲಿ ಮದ್ರಾಸಿನ ಕರ್ನಾಟಕ ಸೇವಾ ಸಂಘ ಮತ್ತು ಇತರ ಕನ್ನಡ ಸಂಘಗಳ ಆಶ್ರಯದಲ್ಲಿ ಮದ್ರಾಸ ಕನ್ನಡಿಗರೆಲ್ಲರ ಕೂಟವೊಂದು ನಡೆಯಲಿದೆ.

ಬರುವ ಏಪ್ರಿಲ್ ತಿಂಗಳಲ್ಲಿ ಕರ್ನಾಟಕ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಕೋಲಕರ್ಣಿ ಶ್ರೀನಿವಾಸರಾಯರ ಸಂಪಾದಕತ್ವದಲ್ಲಿ "ನೃತ್ಯಭಾರತಿ" ಎಂಬ ಕನ್ನಡ ತ್ರೈಮಾಸಿಕ ಪ್ರಕಟವಾಗಲಿರುವದು.

ಮದ್ರಾಸಿನ ಮೇಯರರಾದ ಡಾ. ಯು. ಕೃಷ್ಣರಾಯರನ್ನೂ ಶ್ರೀಮತಿ ಶಾರದಾ ಕೃಷ್ಣರಾಯರನ್ನೂ ಸತ್ಕರಿಸಲು ಕ್ವೀನ ಮೇರೀಜ್ ಕಾಲೇಜಿನ ಕನ್ನಡ ಮತ್ತು ಹಿಂದಿ ಅಧ್ಯಾಪಕಿ ಶ್ರೀಮತಿ ನಾಮಗಿರಿ ಪಂಡಾಶಿವರಾಯರವರು ತಾ. ೨ ರಂದು ಸಂಜೆ ಸಂತೋಷಕೂಟವನ್ನು ಏರ್ಪಡಿಸಿದ್ದರು. ಮೇಯರರ ತಂದೆ ಡಾ. ಯು. ರಾಮರಾಯರು, ಕಾಲೇಜ ಪ್ರಿನ್ಸಿಪಾಲ ಲೇಡಿ ರಾಮಮೂರ್ತಿ, ಅ. ಭಾ. ಮಹಿಳಾ ಸಮ್ಮೇಲನಕ್ಕೆ ಕನ್ನಡ ನಾಡಿನ ಪ್ರತಿನಿಧಿಯಾಗಿ ಬಂದ ಶ್ರೀಮತಿ ಉಮಾಬಾಯಿ ಕುಂದಾಪುರ ಇವರು ಪ್ರಮುಖ ಅತಿಥಿಗಳಾಗಿದ್ದರು.

ಮದ್ರಾಸ ಸರಕಾರದ ಉದ್ಯೋಗಿ ಖಾತೆಯ ಡೈರೆಕ್ಟರರಾದ ಶ್ರೀ ಎಂ. ಟಿ. ರಾಜುರವರನ್ನು ಹೈದರಾಬಾದದಲ್ಲಿಯ ಹಿಂದುಸ್ಥಾನ ಸರಕಾರದ ಏಜಂಟ ಜನರಲ್ಲರಾದ ಶ್ರೀ ಕೆ. ಎಂ. ಮುನಶಿ ಅವರ ಕಾರ್ಯದರ್ಶಿಗಳೆಂದು ನೇಮಿಸಲಾಗಿದೆಯೆಂದು ಅಧಿಕೃತವಾಗಿ ತಿಳಿದು ಬಂದಿದೆ.

ಹೆಚ್ಚಿಗೆ ಆಹಾರ ಧಾನ್ಯ ಸಂಗ್ರಹಿಸಿದವರು ಅದನ್ನು ಸರಕಾರಕ್ಕೆ ನಿರ್ದಿಷ್ಟಪಡಿಸಿದ ಬೆಲೆಗೆ ಮಾರುವಂತೆ ಒತ್ತಾಯಪಡಿಸಲು ಮದ್ರಾಸ ಸರಕಾರವು ರೆವಿನ್ಯೂ ಮತ್ತು ಪೋಲೀಸ ಖಾತೆಗಳಿಗೆ ಅಧಿಕಾರ ಕೊಟ್ಟಿದೆ. ಇದರಂತೆ ಆಹಾರ ಧಾನ್ಯದ ಗುದಾಮುಗಳನ್ನು ಶೋಧಿಸಲು ರೆವಿನ್ಯೂ ಮತ್ತು ಲಂಚ ನಿರ್ಮೂಲನ ಖಾತೆಯ ಅಧಿಕಾರಿಗಳಿಗೆ ಅನುವು ಕೊಡಲಾಗಿದೆ.

ಯುಕ್ತಪ್ರಾಂತ

ಸರ್ ಶಾಂತಿ ಸ್ವರೂಪ ಭಟನಾಗರರು ಪಾಟನಾದಲ್ಲಿ ಹಿಂದುಸ್ಥಾನದ ರಾಷ್ಟ್ರೀಯ ವಿಜ್ಞಾನ ಸಂಘಗಳ ವಾರ್ಷಿಕ ಸಭೆಯ ಅಧ್ಯಕ್ಷಸ್ಥಾನದಿಂದ ಸ್ವತಂತ್ರ ಭಾರತದಲ್ಲಿ ವಿಜ್ಞಾನವು ಪರಸತ್ತೆಯ ಸೊತ್ತಾಗಿ ಉಳಿಯತಕ್ಕದ್ದಲ್ಲವೆಂದೂ ಭಾರತೀಯರ ವಿಜ್ಞಾನ ಬುದ್ಧಿ ಬೆಳೆದು ಸಂಪದಭಿವೃದ್ಧಿಯಾಗಿ ಜನಸಾಮಾನ್ಯರ ಜೀವನ ಮಟ್ಟ ಎತ್ತರವಾಗಬೇಕೆಂದು ಹೇಳಿದರು.

ಸಿಯಾ ಮುಸಲ್ಮಾನರ ಮೆರವಣಿಗೆಯ ಮೇಲೆ ಕಾಶಿಯಲ್ಲಿ ಸುನ್ನಿ ಜನರು ಇಟ್ಟಂಗಿಗಳನ್ನು ತೂರಿದರು. ಈ ಬಗ್ಗೆ ಪೋಲೀಸರು ೬೩ ಸುನ್ನಿ ಜನರನ್ನು ಬಂಧಿಸಿದ್ದಾರೆ. ಪ್ರಕ್ಷುಬ್ಧ ಪ್ರದೇಶದಲ್ಲಿ ಸಶಸ್ತ್ರ ಕಾವಲನ್ನಿಡಲಾಗಿದ್ದು ೪೮ ತಾಸುಗಳ ಕರ್ಫ್ಯೂ ಹೇರಲಾಗಿತ್ತು.

ಒಡಿಸಾ

ಒಡಿಸಾ ಪ್ರಾಂತದ ಕೆಲವು ಭಾಗಗಳಲ್ಲಿ ಕಾಡಾನೆಗಳ ಹಾವಳಿ ಅನ್ಯಾಹತವಾಗಿದೆ. ಅವು ಮನುಷ್ಯರನ್ನೂ ದನಕರಗಳನ್ನೂ ಕೊಲ್ಲುತ್ತಿವೆ. ಬೆಳೆಗಳನ್ನು ಹಾಳು ಮಾಡುತ್ತಿವೆ. ಕಾಡಾನೆಗಳನ್ನು ಕೊಲ್ಲುವವರಿಗೆ ಇನ್ನೂ ೫ ವರ್ಷಗಳವರೆಗೆ ಇನಾಮು ಕೊಡಲಾಗುವದೆಂದು ಒಡಿಸಾ ಸರಕಾರವು ಪ್ರಕಟನೆ ಹೊರಡಿಸಿದೆ.

ಪೂರ್ವ ಪಂಜಾಬ

ಪಾಕಿಸ್ತಾನದ ನಿರಾಶ್ರಿತ ಮಂತ್ರಿ ಶ್ರೀ. ಗಜನಫರ ಅಲಿಖಾನರು ಪೂರ್ವ ಪಂಜಾಬದಲ್ಲಿ ೫೦ ಸಾವಿರ ಮುಸಲ್ಮಾನ ಸ್ತ್ರೀಯರ ಅಪಹಾರವಾಗಿರುವದೆಂದು ಕೊಟ್ಟ ಹೇಳಿಕೆ ಅತಿಶಯೋಕ್ತಿಯೆಂದು ಪೂರ್ವ ಪಂಜಾಬದ ಮುಖ್ಯ ಮಂತ್ರಿ ಡಾ. ಗೋಪಿಚಂದ ಭಾರ್ಗವರು ಹೇಳಿದ್ದಲ್ಲದೆ ಪೂ. ಪಂಜಾಬದಲ್ಲಿ ೫೦ ಸಾವಿರ ಪ. ಪಂಜಾಬದಲ್ಲಿ ೫ ಸಾವಿರ ಎಂದು ಪಾಕಿಸ್ತಾನದ ಮಂತ್ರಿಗಳು ಹೇಳಿದ ಅಂಕಿಗಳು ತಿರುವು ಮುರುವಾಗಿವೆಯೆಂದೂ ನುಡಿದರು. ಅಪಹರಿಸಲ್ಪಟ್ಟ ಮುಸಲ್ಮಾನ ಸ್ತ್ರೀಯರಲ್ಲಿ ಅರ್ಧದಷ್ಟು ಅಂದರೆ ೨ ಸಾವಿರ ಸ್ತ್ರೀಯರನ್ನು ಶೋಧಿಸಿ ಪಾಕಿಸ್ತಾನಕ್ಕೆ ಕಳಿಸಲಾಗಿದೆಯೆಂದು ಶ್ರೀ ಭಾರ್ಗವರು ಅರುಹಿದರು.

ಪಶ್ಚಿಮ ಬಂಗಾಲ

ಡಾ. ಶ್ಯಾಮಪ್ರಸಾದ ಮುಕರ್ಜಿಯವರ ರಾಜೀನಾಮೆಯಿಂದ ತೆರವಾದ ಪಶ್ಚಿಮ ಬಂಗಾಲ ಶಾಸನ ಸಭೆಯಲ್ಲಿಯ ಸ್ಥಳಕ್ಕೆ ಡಾ. ಬಿಧಾನ ಚಂದ್ರ ರಾಯರು ಅವಿರೋಧವಾಗಿ ಆರಿಸಿಬಂದರೆಂದು ತಾ ೬ ರಂದು ಸಾರಲಾಯಿತು. ಈ ಉಪಚುನಾವಣೆಯು ವಿಶ್ವವಿದ್ಯಾಲಯ ಮತದಾರ ಸಂಘದಿಂದ ಇತ್ತು.

ಹಿಂದೀ ಸಂಸ್ಥಾನ

ಪಾಕಿಸ್ತಾನ ಜಮ್ಮು ಗಡಿಯಲ್ಲಿ ದಾಳಿಗಾರರು ಭದ್ರಗೊಳ್ಳುತ್ತಿದ್ದಾರೆಂದು ಹಿಂದೀಸೈನ್ಯ ಖಾತೆಗೆ ಸುದ್ದಿಗಳು ಬರುತ್ತಿವೆ.

ಅಕ್ಕಲಕೋಟೆ ಸರ್ಕಾರ ಮತ್ತು ಪ್ರಜಾಪರಿಷತ್ತಿನ ನಡುವೆ ಒಪ್ಪಂದವಾಗದ್ದರಿಂದ ನೊಡಲೇ ನಿರ್ಧರಿಸಿದಂತೆ ಹೋರಾಟ ಪ್ರಾರಂಭವಾಗಿದೆ. ತಾ ೪ ರಂದು ಅಲ್ಲಿಯ ವರ್ತಕರು ಸರಕಾರ ಅಟ ರಿಸಿ ಮೆರವಣಿಗೆ ಹೊರಡಿಸಿದ್ದರು. ದರಬಾರ ಪೋಲೀಸರು ಈ ಮೆರವಣಿಗೆಯ ಮೇಲೆ ಗುಂಡು ಹಾರಿಸಿದರು. ಗುಂಡರು ಕೆಲ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ.

ವರಂಗಲ್ಲ ಜಿಲ್ಹೆಯ ಭೀಮಾವರಂ ಹಾಗು ಚಿನ್ನೂರ, ನಾಲಗೊಂಡ ಜಿಲ್ಹೆಯ ನಿರಿವಾಲ ಗುಡಾ ಮತ್ತು ಪರಭಣಿ ಜಿಲ್ಹೆಯ ಹಿಂಗೋಳಿ, ಕಾಲಮನೂರಿ ತಾಲೂಕುಗಳಲ್ಲಿಯ ಗ್ರಾಮಗಳಲ್ಲಿಯ ಎಲ್ಲ ಸಾಕೆಗಳು ಪೂರ್ಣ ಸುಡಲ್ಪಟ್ಟಿವೆಯಂತೆ.

ಹೊಸದಿಲ್ಲಿ

ತಾ ೬ ರಿಂದ ದಿಲ್ಲಿಯಲ್ಲಿ ಪ್ರಾರಂಭವಾದ ಸಂಸ್ಥಾನಿಕರ ಹಾಗು ಅವರ ಮಂತ್ರಿಗಳ ಪರಿಷತ್ತಿಗೆ ಘಟನಾ ಸಮಿತಿಯಲ್ಲಿಯ ಎಲ್ಲ ಸಂಸ್ಥಾನಗಳ ಪ್ರತಿನಿಧಿಗಳು ಹಾಜರಿದ್ದರು. ಕೇವಲ ಮೈಸೂರ ಪ್ರತಿನಿಧಿಗಳು ಇದ್ದಿಲ್ಲ. ಹಿಂದುಸ್ಥಾನ ಸರಕಾರದೊಡನೆ ಸಂಪರ್ಕದಿಸಲುವಾಗಿ ಯಾವ ವ್ಯವಸ್ಥೆ ಇರಬೇಕು ವಂಶಪರಂಪರಾಗತವಾಗಿ ಬಂದ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಏನುಮಾಡಬೇಕು ಈ ಎರಡು ವಿಷಯಗಳು ಮುಖ್ಯವಾಗಿ ಪರಿಷತ್ತಿನ ಮುಂದಿವೆ. ಸಣ್ಣ ಸಂಸ್ಥಾನಗಳ ಪ್ರತಿನಿಧಿಗಳು ದಿಲ್ಲಿಯಲ್ಲಿ ೯ ನೇ ತಾ ಗೆ ಸಭೆಸೇರಲಿರುವರು.

ಕೇಂದ್ರ ಸರಕಾರದ ಸಿಂಚಣಿಗಾರರು ಪಿಂಚಣಿ ಪಡೆದ ೨ ವರ್ಷ ಆಗುವದರೊಳಗಾಗಿ ಖಾಸಗಿ ನೌಕರಿಹಿಡಿಯಲು ಗವರ್ನರ ಜನರಲರ ಅಪ್ಪಣೆ ಪಡೆಯಬೇಕೆಂದು ಸಿವ್ಹಿಲ್ ಸರ್ವಿಸ ರೆಗ್ಯುಲೇಶನ್ನಿಗೆ ತಿದ್ದುಪಡೆ ಹೊರಟಿದೆ.

ಪಾಕಿಸ್ತಾನ ಸರಕಾರವು ೧೦ ಕೋಟಿ ರೂ. ಗಳ ಸಾಲಕೊಡುವಂತೆ ಹಿಂದುಸ್ಥಾನ ರಿಝರ್ವ ಬ್ಯಾಂಕನ್ನು ಬಿನ್ನವಿಸಿದೆಯೆಂದು ತಿಳಿದುಬಂದಿದೆ.

ಕಾರೇಶಾ ವಿಭಾಗದಲ್ಲಿ ಉಕ್ಕಿನ ಶಿರಸ್ತ್ರಾಣಗಳನ್ನು ಧರಿಸಿದ ಮಶಿನ್ ಗನ್ನುಗಳಿಂದ ಯುಕ್ತರಾದ ೪ ಸಾವಿರ ದಾಳಿಗಾರರು ನಮ್ಮ ಠಾಣ್ಯಗಳ ಮೇಲೆ ದಾಳಿ ಮಾಡಿದರೆಂದು ಕಾಶ್ಮೀರದ ಬಗ್ಗೆ ಸಂರಕ್ಷಣ ಖಾತೆಯ ಪ್ರಕಟನೆ ಹೊರಟಿದೆ.

ದಿಲ್ಲಿ ನಗರ ಸಭೆಯ ಸದಸ್ಯರೂ ಮುಸ್ಲಿಂ ಲೀಗಿನ ಪ್ರಮುಖರೂ ಆದ ಡಾ. ಅಬ್ದುಲ್ ಗನಿ ಖುರೇಶಿಯವರು ಡಾ. ಎಸ್. ಸಿ ಜೋಶಿಯವರ ಕೊಲೆಮಾಡಿದರೆಂದು ಅವರಿಗೆ ಮರಣ ದಂಡನೆ ವಿಧಿಸಲ್ಪಟ್ಟಿದೆ.

ಬ್ರಹ್ಮದೇಶ ಸ್ವತಂತ್ರವಾದ ನಿಮಿತ್ತ ತಾ. ೪ ರಂದು ಭಾರತದಲ್ಲಿಯ ಬ್ರಹ್ಮಿ ರಾಯಭಾರಿ ಕಚೇರಿಯ ಮೇಲೆ ಬ್ರಹ್ಮಿ ರಾಷ್ಟ್ರ ಧ್ವಜವನ್ನು ಬಹಳ ಸಂಭ್ರಮದಿಂದ ಏರಿಸಲಾಯಿತು. ಲಾರ್ಡ ಮೌಂಟಿ ಬ್ಯಾಟನ್, ಸತಿ ಕೌಂಟೆ ಬ್ಯಾಟನ್, ಪಂ. ನೆಹರು ಹಾಗು ಉಳಿದ ಮಂತ್ರಿಗಳು ಸೈನಿಕ ಮತ್ತು ನಾಗರಿಕ ಅಧಿಕಾರಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಚೀನ, ಫ್ರಾನ್ಸ, ಹಾಲಂಡ, ಇರಾಣಗಳ ರಾಯಭಾರಿಗಳೂ ಇತರ ವಿದೇಶಗಳ ಪ್ರತಿನಿಧಿಗಳೂ ಸಮಾರಂಭಕ್ಕೆ ಆಗಮಿಸಿದ್ದರು.

ಹಿಂದುಸ್ಥಾನ ಸರಕಾರವು ಪಾಕಿಸ್ತಾನದ ವಿರುದ್ಧ ಯುಕ್ತ ರಾಷ್ಟ್ರಗಳ ಸಂಘದ ಭದ್ರತಾ ಮಂಡಳಕ್ಕೆ ಸಲ್ಲಿಸಿದ ಮನವಿಯನ್ನು ತಾ. ೩ ರಂದು ಪ್ರಕಟಿಸಿದೆ. ಲೇಕಸಕ್ಸೆಸ್‌ದಲ್ಲಿಯ ಯುಕ್ತರಾಷ್ಟ್ರಗಳ ಸಂಘದ ಕಚೇರಿಯಿಂದಲೂ ಈ ಮನವಿ ಪ್ರಕಟಿತವಾಗಿದೆ.

ಸುಪ್ರಸಿದ್ಧ ಬ್ರಹ್ಮೀ ಶಿಕ್ಷಣ ತಜ್ಞರಾದ ಯು ಬಾ. ಲ್ವಿನ್‌ರವರು ಸ್ವಾಗತ ಸಮಿತಿಯ ಅಧ್ಯಕ್ಷರು ಡಾ. ರಾಜೇಂದ್ರರಿಗೆ ಸ್ವಾಗತ ಕೋರಿ ಮಾತನಾಡುವಾಗ, ಬ್ರಹ್ಮದೇಶವು ಹಿಂದುಸ್ಥಾನದೊಡನೆ ಅತ್ಯಂತ ಸಖ್ಯದಿಂದಿರಲು ಬಯಸುತ್ತದೆಯೆಂದೂ ಕಳೆದ ಎರಡು ವರ್ಷ ಪೂರೈಸಿದಂತೆ ಮುಂದಾದರೂ ಬ್ರಹ್ಮೀ ಜನರು ನಾಲ್ಕುತಂತ್ರ ಕಡ್ಡಿಮೆ ಉಂಡಾದರೂ ಹಿಂದುಸ್ಥಾನಕ್ಕೆ ಅಕ್ಕಿಯನ್ನು ಪೂರೈಸಲು ಹಿಂದು ಮುಂದು ನೋಡುವದಿಲ್ಲವೆಂದೂ ಸಾರಿದರು.

ಹಿಂದುಸ್ಥಾನದಲ್ಲಿರುವ ಪೋರ್ತುಗೀಜ ವಸಾಹತುಗಳನ್ನು ಕೊಂಡುಕೊಳ್ಳಲು ಹಿಂದುಸ್ಥಾನ ಸರಕಾರವು ಮಾತುಕತೆ ಪ್ರಾರಂಭಿಸಿದೆಯೆಂದು ವಿಶ್ವಸನೀಯವಾಗಿ ತಿಳಿದು ಬಂದಿರುವದು. ಈ ಮಾತುಕತೆಯ ಪರಿಣಾಮ ಮಾತ್ರ ಇನ್ನೂ ತಿಳಿದಿಲ್ಲ.

ಸಮಾಜವಾದಿ ಪಕ್ಷದ ಧುರೀಣರಾದ ಡಾ. ರಾಮ ಮನೋಹರ ಲೋಹಿಯಾ ಅವರು ಹಿಂದುಸ್ಥಾನ ಪಾಕಿಸ್ತಾನಗಳ ಆಹಾರ ಸಮಸ್ಯೆಯ ಬಗ್ಗೆ ಮಾತನಾಡುತ್ತ, ಪಾಕಿಸ್ತಾನವು ಹಿಂದುಸ್ಥಾನಕ್ಕೆ ಕೊಡುವದಾಗಿ ಹೇಳಿದ ಆಹಾರ ವಸ್ತುಗಳನ್ನು ಕೊಡುತ್ತಿಲ್ಲವೆಂದೂ ಹಿಂದುಸ್ಥಾನವು ತಾನು ಕೊಡಲೊಪ್ಪಿದ ಪದಾರ್ಥಗಳನ್ನು ಕೊಡುತ್ತಬಂದಿದೆಯೆಂದೂ ಹೇಳಿದರು.

ಹೈದರಾಬಾದ

ಗ್ರಾಮಾಧಿಕಾರಿ ಭೋಗಿಗಳು ರಾಜೀನಾಮೆ ಕೊಡತಕ್ಕದ್ದರಿಂದ ಹಳ್ಳಿಗಳಲ್ಲಿಯ ಆಡಳಿತ ಕುಸಿದು ಹತ್ತಿದೆ. ಜೋಡಂಕಲ್ಲ, ವೆನ್ನಾರಂ, ವಲ್ಲಾಪುರಂ, ಅಪ್ಪಾಪೇಟೆ ಮೊದಲಾದ ಗ್ರಾಮಾಧಿಕಾರಿಗಳು ರಾಜೀನಾಮೆ ಕೊಟ್ಟು ತಮ್ಮ ಕಾಗದ ಪತ್ರಗಳನ್ನು ಕಿಸಾನರು ಸ್ಥಾಪಿಸಿದ ಗ್ರಾಮಪಂಚಾಯತಿಗೆ ಒಪ್ಪಿಸಿದ್ದಾರೆ.

ಸರಕಾರದವರು ವಿದೇಶಿ ಪತ್ರಿಕೋದ್ಯೋಗಿಗಳನ್ನು ಕರೆಯಿಸಿಕೊಂಡು ಅವರಿಗೆ ಇಷ್ಟ ಸ್ಥಳಗಳನ್ನು ಮಾತ್ರ ತೋರಿಸಿ ಜಗತ್ತಿನ ಕಣ್ಣಲ್ಲಿ ಮಣ್ಣೆರಚುವ ಪ್ರಯತ್ನ ನಡೆಸಿದ್ದಾರೆ. ಹಿಂದೀ ಪತ್ರಿಕೋದ್ಯೋಗಿಗಳು ಎಚ್ಚತ್ತು ಈ ಅಪಪ್ರಚಾರ ತಡೆಯಬೇಕು.

ವರಂಗಲ್ಲ ಜಿಲ್ಹೆಯ ೧೯ ಹಳ್ಳಿಗಳ ಜನರು ಪಂಚಾಯತಿ ಸರಕಾರ ಸ್ಥಾಪಿಸಿ ನಿಜಾಮ ಸರಕಾರದ ಹರಲು ಮುರಿದುಕೊಂಡಿರುವದಾಗಿ ತಿಳಿಯುತ್ತದೆ. ಈ ಹಳ್ಳಿಗಳ ಜನಸಂಖ್ಯೆ ೧೦ ಸಾವಿರವಿದ್ದು ಅವರಲ್ಲಿ ಯುದ್ಧವೃತ್ತಿಯ ಕೋಯಾ ಜನರೇ ಹೆಚ್ಚಾಗಿರುವರು. ಸ್ವತಂತ್ರ ಘೋಷಿಸುತ್ತಲೇ ಪಂಚಾಯತ ಸರಕಾರದವರು ಸರಕಾರದ ಕಟ್ಟಡಗಳನ್ನು ವಶಪಡಿಸಿಕೊಂಡರು.

ಪರಭಣಿ ಜಿಲ್ಹೆಯ ಹಿಂಗೋಳಿ ಕರ್ಮಭೂಮಿ ನಾಕೆ ಮೇಲೆ ಕಿಸಾನರು ದಾಳಿ ಮಾಡಿ ಅಲ್ಲಿ ಕಾವಲಿದ್ದ ಮಿಲಿಟರಿ ಜನರಲ್ಲಿ ನಾಲ್ವರನ್ನು ಗಾಯಗೊಳಿಸಿ ಉಳಿದವರನ್ನು ಓಡಿಸಿದರೆಂದು ಸುದ್ದಿ ಬಂದಿದೆ. ಇದರಂತೆ ಗುಲಬುರ್ಗ ಜಿಲ್ಹೆಯ ಹಗರಾಟಗಿರಿಯಲ್ಲಿಯೂ ತಿಕ್ಕಾಟ ನಡೆದಿದೆಯೆಂದು ತಿಳಿಯುತ್ತದೆ.

ಹಿಂದುಸ್ಥಾನ ಸರಕಾರದ ಏಜೆಂಟ ಜನರಲ್ಲರಾದ ಶ್ರೀ ಕೆ. ಎಂ. ಮುನಶಿ ಅವರು ಸಂಯುಕ್ತ ಕರ್ನಾಟಕದ ಸುದ್ದಿಗಾರರಿಗಿತ್ತ ವಿಶೇಷ ಸಂದರ್ಶನದಲ್ಲಿ, ತಮ್ಮ ರಾಯಭಾರವು ಬಹಳ ಕಠಿಣವಾದುದೆಂದೂ ಹೈದರಾಬಾದವು ಹಿಂದುಸ್ಥಾನದಲ್ಲಿ ಸೇರಿ ಶಾಶ್ವತ ಸ್ನೇಹ ಸಂಪಾದಿಸುವದೆಂಬ ಆಶೆ ತಮಗುಂಟೆಂದೂ ಇದಕ್ಕೆ ತಪ್ಪಿದರೆ ಉಭಯತರಿಗೂ ಶಾಂತಿ ಶಕ್ಯವಿಲ್ಲವೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು.

ನಿಜಾಮರ ಮೇಲೆ ಬಾಂಬೆಸೆದ ನಾರಾಯಣರಾವ ಮತ್ತು ಗಂಡಯ್ಯ ಇವರ ವಿಚಾರಣೆ ೬ನೇ ತಾ. ಚೀಫ ಸಿಟಿ ಮ್ಯಾಜಿಸ್ಟ್ರೇಟ ಬದರುದ್ದೀನ ಅಹಮ್ಮದರ ಮುಂದೆ ನಡೆದು ಅವರಿಬ್ಬರೂ ಸೆಶನ್ಸ ಕಮಿಟ್ ಮಾಡಲ್ಪಟ್ಟರು. ಮೂರನೇ ಆರೋಪಿಯಾದ ವಿಠ್ಠಲರಾವ ಎಂಬವನು ಮಾಫಿ ಸಾಕ್ಷಿದಾರನಾಗಿರುತ್ತಾನೆ.

ಹೈದರಾಬಾದದಲ್ಲಿ ಶ್ರೀ ಕೆ. ಎಂ. ಮುನಶಿಯವರ ವಾಸಭವನದ ಬಗ್ಗೆ ಹೈದರಾಬಾದ, ನಿಜಾಮರ ಮತ್ತು ಲಾರ್ಡ ಮೌಂಟ ಬ್ಯಾಟನ್ನರ ನಡುವೆ ತಂತಿಯಮೂಲಕ ವಿಚಾರ ವಿನಿಮಯವಾಗಿ ಬೋಲಾರಾಮದಲ್ಲಿಯ ರೆಸಿಡೆಂಟ ಭವನವನ್ನು ೧೧ ದಿನಗಳ ವರೆಗೆ ನಿಜಾಮರು ಶ್ರೀ ಕೆ. ಎಂ. ಮುನಶಿಯವರಿಗೆ ಕೊಡಮಾಡಿದ್ದಾರೆ. ಅಷ್ಟರಲ್ಲಿ ಶ್ರೀಯುತರು ಬೇರೆ ವಾಸ ಹುಡುಕಿಕೊಳ್ಳಬೇಕಂತೆ.

ಪಾಕಿಸ್ತಾನ

ತಾ. ೫ ರಂದು ಕರಾಚಿಯಲ್ಲಿ ಮಧ್ಯಾನ್ಹದ ಸುಮಾರಕ್ಕೆ ಒಂದು ದೊಡ್ಡ ಜನಸಮುದಾಯವು ಒಂದು ಶೀಖ ಗುರುದ್ವಾರದ ಮೇಲೆ ಹಲ್ಲೆ ಮಾಡಿ ೭೦ ಜನರನ್ನು ಸಂಹರಿಸಿತೆಂದು ಸುದ್ದಿ ಬಂದಿದೆ.

ಕರಾಚಿಯ ಜಿಲ್ಹಾ ಮ್ಯಾಜಿಸ್ಟ್ರೇಟರು ಒಂದು ಪ್ರಕಟನೆ ಹೊರಡಿಸಿ, ೧೮೪ ಶೀಖರು ರಕ್ಷಣ ಕಲಾವದ ಹತ್ತಿರಿದ್ದ ಗುರುದ್ವಾರಕ್ಕೆ ಹೋಗಿದ್ದರೆಂದೂ ಇವರು ಬರುವದನ್ನು ಕಂಡು ಸುಮಾರು ೮ ಸಾವಿರ ಜನರ ಸಮುದಾಯವು ಗುರುದ್ವಾರವನ್ನು ಮುತ್ತಿ ಅದಕ್ಕೆ ಬೆಂಕಿ ಹಚ್ಚಿದರೆಂದೂ ಒಳಗಿರುವವರನ್ನು ಇರಿಯುವದು ಕೊಲ್ಲುವದು ಪ್ರಾರಂಭವಾಯಿತೆಂದೂ ಈ ದೊಂಬಿಯ ಬಗ್ಗೆ ಉಲ್ಲೇಖಿಸಿದ್ದಾರೆ.

ಪಶ್ಚಿಮ ಪಂಜಾಬ ಸರಕಾರವು ತನ್ನ ಶಾಸನ ಸಭೆಗೆ ಒಪ್ಪಿಸಿದ ಅಂದಾಜ ಪತ್ರಿಕೆಯಲ್ಲಿ ೫೬೦ ಲಕ್ಷ ರೂ. ಕೊರತೆಯನ್ನು ತೋರಿಸಿದೆ. ಆದಾಯವು ೬೩೭ ಲಕ್ಷ ರೂ. ಗಳಿದ್ದು ವೆಚ್ಚ ೧೩೯೭ ಲಕ್ಷ ರೂ. ಗಳದ್ದಿದೆ.

ಪಾಕಿಸ್ತಾನ ಘಟನಾಸಮಿತಿಯು ಫೆಬ್ರುವರಿ ಮಧ್ಯದಲ್ಲಿ ಸಭೆಸೇರುವದೆಂದು ತಿಳಿಯುತ್ತದೆ. ಆಗಸ್ಟ ೧೫ ರಿಂದೀಚೆಗೆ ಪಾಕಿಸ್ತಾನ ಗವರ್ನರ ಜನರಲ್ಲರು ಹೊರಡಿಸಿದ ಸುಗ್ರೀವಾಜ್ಞೆಗಳಂತೆ ಕಾಯದೆಗಳನ್ನು ಅದು ಮಾಡುವದೆಂದು ಹೇಳಲಾಗುತ್ತದೆ.

ಮೊರದ ಬಾಗಿಣದ ಮೆರವಣಿಗೆ

ಲೇ:— ಶ್ರೀ. ವೆಂಕಣ್ಣಾಚಾರ್ಯ ಪಪ್ಪು ಬಿ. ಎ. ಎಲ್. ಎಲ್. ಬಿ. ವಕೀಲ, ಹುಬ್ಬಳ್ಳಿ

[ನಾಲ್ಕಾರು ಬೀದಿಗಳ ಒಂದು ಕೂಟ. ಮುನಿಸಿಪಲ್ ಸ್ಯಾನಿಟರಿ ಮೋಟರಿನಿಂದ ಅಧ್ಯಕ್ಷರು ಇಳಿದು ಚಿಕ್ಕ ಭಾಷಣವನ್ನು ಬಿತ್ತರಿಸಲಾರಂಭಿಸುವರು.]

ಅಧ್ಯಕ್ಷರು :— "ನಾಗರಿಕ ಮಹಾಶಯರೆ! ನಮ್ಮ 'ಗಗನೋಚ್ಚ' ನಾಗರಿಕತೆಯು ನಮ್ಮನ್ನು ಎಲ್ಲಿ ತಂದು ಬಿಟ್ಟಿದೆ, ಗಮನಿಸಿರಿ! ನಿಸರ್ಗದಿಂದ ನಮ್ಮನ್ನು ದೂರ ಎಳೆದುಕೊಂಡು ಬಂದು ಕೈಬೆರಳನಿಂದ ಎಣಿಸುವಷ್ಟು ಭಂಗಿ ಜನರ ವೈಯಕ್ತಿಕ ಛಂದದ ತುತ್ತನ್ನಾಗಿ ಮಾಡಿದೆ. ಊರಲ್ಲಿ ಭಂಗಿ ಸಂಪು! ಭಾರಿ ಸಂಪು!! ಸಂಪು ಹೂಡಿಸುವ ಕಲೆಯಲ್ಲಿ ನಿಷ್ಣಾತರೂ, ಸ್ವಾರ್ಥಸಾಧಕರೂ, 'ಕೀರ್ತಿಕಾಮುಕ'ರೂ, ಸಮಾಜ ನಾಶಕರೂ, ಆದ ಸಂಪುಗಾರರು ಭಂಗಿ ಜನರ ಅಜ್ಞಾನದ ಫಾಯದೆಯನ್ನು ತೆಗೆದುಕೊಂಡು ಅವರನ್ನು ಸಂಪಿಗೆ ಪ್ರೇರೇಪಿಸಿದ್ದಾರೆ. ಇಡೀ ಶಹರವನ್ನೇ ಅನಿರೀಕ್ಷಿತ ಅಡಚಣೆಗಳಿಗೆ ಆಣಿಮಾಡಿದ್ದಾರೆ. ಭಾಷೀಸುಸಂಸ್ಕೃತ ಹಿಂದುಸ್ತಾನವನ್ನು ಕಟ್ಟುವ ಪ್ರಾಥಮಿಕ ಶಿಕ್ಷಕರ-ಎಷ್ಟೋಪಟ್ಟು ಹೆಚ್ಚು ಪಗಾರ ಕೊಟ್ಟರೂ ಇವರ ಸಂಪು ಇದ್ದೇ ಇದೆ. ಹೆಚ್ಚು ಹೆಚ್ಚು ಪಗಾರ ಬೇಡುವ ಬೇನೆಯು ಎಲ್ಲ ನೌಕರ ವರ್ಗದಲ್ಲಿ ಹಬ್ಬಿದರೆ ಏನಾದೀತು? ನಗರ ಪಿತಾಮಹರಾದ ನಾವು ನಮ್ಮ ಜೇಬಿನಿಂದ ಕೊಡಬೇಕಾಗಿಲ್ಲ. ಹೆಚ್ಚಿನ ಭಾರವನ್ನು ಹಂಚಿ ನಿಮ್ಮ ತಲೆಯ ಮೇಲೆ ಹಾಕಲಾಗುವದು. ಸಂಪಿಗೆ ಸಹಾನುಭೂತಿಯನ್ನು ತೋರಿಸುವ ನಾಗರಿಕರು ಕಣ್ತೆರೆದು ನೋಡಬೇಕು. ನಿಮ್ಮ ಹಿತದ ಸಲುವಾಗಿ ಯಾದರೂ ಮುಂದೆ ಬಂದು ಈ ಸಂಪು ಮುರಿಯುವ ಕಾರ್ಯವನ್ನು ಯಶಸ್ವಿ ಮಾಡಲಿಕ್ಕೆ ಸಹಕರಿಸಿರಿ."

ಭಾಷಣದ ಪರಿಣಾಮವು ಜನರ ಮೇಲೆ ವಿದ್ಯುತ್ಪ್ರೇರಣೆಯಿಂದ ಆಯಿತು. ಕಿಂದರಿ ಜೋಗಿಯ ಕಿಂದರಿಗೆ ಪ್ರತ್ಯುತ್ತರವನ್ನು ಕೊಟ್ಟ ಇಲಿಗಳ ಸಾಲಿನಂತೆ ಪ್ರತಿಯೊಂದು ಮನೆಯಿಂದ ಮುಚ್ಚಿದ ಮೊರಗಳನ್ನು ಹಿಡಿದುಕೊಂಡು ಬಂದ ಮೆರವಣಿಗೆಯು ಮೋಟರಿನ ಕಡೆಗೆ ಹೊರಟಿತು.

ಒಬ್ಬ :— ನೋಡ್ರೀ, ಈ ಮೊರದ ಬಾಗಿಣದ ಮೆರವಣಿಗೆ!

ಇನ್ನೊಬ್ಬ :— ಬೈಲಕಡೆಯ ಭೀಕರ ಬೈಲಾಟ ?

ಒ:— ಅವರು ಬೇಡಿದಷ್ಟು ಪಗಾರ ಕೊಟ್ಟು ಇದನ್ನು ತಪ್ಪಿಸಬೇಕು.

ಇ :— ಕೊಡುವವರು ಯಾರು —! ನಾವೇ ಅಲ್ಲವೆ ? ನಮ್ಮ ಮೇಲೆ ಹೆಚ್ಚಿನ ಕರ ಹೇರಿ ಮುನಸಿಪಾಲ್ಟಿಯು ಕೊಡುವದು.

ಒ:— ಶ್ರಮಜೀವಿಗಳಿಗೆ ಕೊಡುವದಿಲ್ಲವೆಂದರೆ ಹೇಗೆ ?

ಇ:— ಶ್ರಮಜೀವಿಗಳ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಬೇಕು. ಶ್ರಮದಲ್ಲಿ ಕೂಡ ಭಿನ್ನತೆಯಿದೆ. ಅದಕ್ಕೆ ತಕ್ಕ ಪ್ರತಿಫಲ ಅದದಕ್ಕಿದೆ. ಮಳೆಬರುವಾಗ್ಗೆ ಟಾಂಗಾದವರು ಬಾಡಿಗೆ ಏರಿಸಿದಂತೆ ಬೇಕಾದ್ದು ಬೇಡಿದರೆ ಹೇಗೆ ಕೊಡಬೇಕು? ಶ್ರಮವಾದರೂ ಮಾವಿನ ಹಣ್ಣಿನಂತೆ ನಾನಾ ಪ್ರಕಾರದ್ದು ಅದರದರ ತಕ್ಕ ಕಿಮ್ಮತ್ತು ಹೇಗೋ...

ಒ :— ಗರಜೂ ನೋಡಬೇಕಾಗುತ್ತದೆ.

ಇ :— ಗರಜಬಿದ್ದರೆ, ಎಲ್ಲ ಕೆಲಸವನ್ನೂ ಯಂತ್ರದಿಂದ ಮಾಡಿಸಿದರೆ, ನಿರುದ್ಯೋಗ ಸಮಸ್ಯೆ ಏಳುವದು. ಅಂದರೆ, ಪ್ರತಿಫಲದ ಬದಲು ಪರಿಹಾರದಿಂದ ಹಸಿವನ್ನು ಸ್ವಲ್ಪ ದೂರ ದಬ್ಬಬೇಕಾಗುವದು.

ಒ :— ಪ್ರತಿಫಲ, ಪರಿಹಾರ- ಈ ಇರುಕಿನಲ್ಲಿ!

ಇ :— ನಿಜವಾಗಿ ಹೇಳಬೇಕಾದರೆ ಈಗ ಭಂಗಿಗಳಿಗೆ-ತಪ್ಪಾತು- ಹರಿಜನರಿಗೆ ಸಿಗುವ ಪಗಾರವು ಹೊಟ್ಟೆಗೆ ಸಾಲುವದಿಲ್ಲವೆಂದು ಶ್ರಮಜೀವಿಗಳ ಹಿತಚಿಂತಕರೆಂದು ಕೊಳ್ಳುವ ಕೆಲವು ವಿಶ್ರಾಮ ಜೀವಿಗಳಿದ್ದಾರೆ. ಅಕಾ, ಆ ಭಂಗಿ ಸಂಪುಗಾರ ತಂಡದ ಮುಖಂಡ...

[ಸಂಪುಗಾರರ ತಂಡವು ಮೋಟರಿನ ಹತ್ತಿರ ಬಂದಿತು.]

ಮುಖಂಡ :— ಏನೋ ಅಂದಿರಲ್ಲಾ, ವಿಶ್ರಾಮ ಜೀವಿಗಳು ಅಂತಾ.

ಇ :— ಸ್ವತಃ ಕೆಲಸಗಾರರಲ್ಲದ ಕೆಲಸಗಾರರ ಹಿತಚಿಂತಕ ಧಂಡೆಮಾಡಿ ಹೊಟ್ಟೆ ತುಂಬಿಕೊಳ್ಳುವ ನೀವು ಅಂದೆ.

ಮು :— ಜೋಲೋ, ಸಂಪಿಗೆ ಜಯವಾಗಲಿ! ಪ್ರವಾಹದ ವಿರುದ್ಧ ಈಸುವಿರಾ? ಇದು ನಮ್ಮ ಧಂದೇನು.

ಇ :— ಹೌದು, ಹೌದು, ಹೌದು! ಶ್ರಮಜೀವಿಗಳ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡಿಸಿ ಅವರ ಹೊಟ್ಟೆ ತುಂಬಿಸುವದಲ್ಲ. ನೀವು ಸ್ವತಃ ನಿರುದ್ಯೋಗಿಗಳು. ಒಂದು ಕೈಬೆರಳಲ್ಲಿ ಎಣಿಸುವಷ್ಟು ಸಿರಿವಂತರ ಕಡೆ ಬೊಟ್ಟುಮಾಡಿ ತೋರಿಸುವವರು ಅವರ ಹಣವನ್ನು ಹಂಚಿದರೆ ತಲೆಗೆ ಮೂರು-ನಾಲ್ಕು ರೂಪಾಯಿಗಳು ಸಹ ಬೀಳುವದಿಲ್ಲ.

ಮು :— ಈ ಸಂದರ್ಭದಲ್ಲಿ ತಲೆ ಬೀಸರಿಟ್ಟ ಆ ಶ್ರೀಮಂತನ ಕಥೆಯನ್ನು ಹೇಳುವದನ್ನು ಮರತಿರಲ್ಲಾ !

ಇ :— ಭಿಕ್ಷುಕನು ಶ್ರೀಮಂತನ ಅಣ್ಣ ತಮ್ಮನಾಗಬೇಕೆಂದು ತನ್ನ ಹಿಸೆಯನ್ನು ಕೊಡು ಅಂತ ಬೇಡಿದಾಗ್ಗೆ ಒಂದು ಕವಡಿಯು ಆ ಹಿಸೆಯಾಗಿ ಕೊಡಲ್ಪಟ್ಟಿತು, ಇದೇ ಕಥೆಯಲ್ಲಾ !

ಮು :— ಅದೇ ಕಥೆ.

ಇ : — ಹಾಗೆ ಶ್ರೀಮಂತರ ಸ್ಥಾವರ ಆಸ್ತಿಯನ್ನು ಹಂಚಿದರೂ ಅದೇ ಹಾಡು. ಮುಂದೆ ಸತ್ತವರ ಹೊಲವನ್ನು ಹುಟ್ಟಿದವರ ಖಾತೆ ಮಾಡುತ್ತ ಅಥವಾ ಮೇಲಿಂದ ಮೇಲೆ ಆಸ್ತಿಯ ಸಾರ್ವತ್ರಿಕ ಹಂಚಿಕೆಯನ್ನು ಮಾಡುತ್ತ ಹೋಗಬೇಕು. ಇದು ನಿಸರ್ಗದ ವಿರುದ್ಧವಾಗುವದಿಲ್ಲವೆ ?

ಮು :— ಹಾಗಾದರೆ ಸಮತೆ ಬೇಡವೆ? ಕೆಲವರು ಕಡೆತನಕ ಶ್ರೀಮಂತರು, ಕೆಲವರು ಕಡೆತನಕ ಬಡವರು ಹೀಗೇ ನಡೆಯಬೇಕೇ ?

ಇ :— ಸಮತೆ ! ಸಮತೆ ಶಕ್ಯವೇ ? ತ್ರಿಕಾಲಕ್ಕೂ ಶಕ್ಯವಿಲ್ಲಾ ! ಸಾವಿರಾರು ವರ್ಷದ ಜಗತ್ತಿನ ಇತಿಹಾಸದಲ್ಲಿ ಯಾವ ಇಸ್ವಿಯಲ್ಲಿ ನಿಮ್ಮ ಸಮತೆ ತಲೆ ದೋರಿದೆ- ಹೇಳಿರಿ. ನಾಯಿ ಬಾಲದಂತೆ ಸಮತೆಯನ್ನು ನಿರಂತರ ಕಾಯಿದೆಯ ಕೊಳವಿಯಲ್ಲಿ ಹಾಕಿದರೆ ಮಾತ್ರ ಉಳಿಯುವದು.

ಮು :— ಅದ್ದರಿಂದ......

ಇ :— ಆದ್ದರಿಂದ ವಿಷಮತೆಯನ್ನು (ಆರ್ಥಿಕ ವಿಷಮತೆಯನ್ನು) ಕಡಿಮೆ ಮಾಡುವದೇ ಹಿಂದಿನವರಂತೆ ನಮ್ಮ ಗುರಿಯಾಗಿರಬೇಕು.

ಮು :— ಹಿಂದಿನವರು ಹೇಗೆ ಸಾಧಿಸಿದರು ಆ ಗುರಿಯನ್ನು ?

ಇ :— ದಯಾ, ಮಾಯಾ, ದಾನಾ, ಧರ್ಮ, ಮಾಡಿ. ಉದಾಹರಣಾರ್ಥ ಶ್ರೀಮಂತನು ತನ್ನ ದುಡ್ಡಿನಿಂದ ಗುಡಿ-ಗುಂಡಾರಗಳನ್ನೂ ಧರ್ಮಶಾಲೆ ಛತ್ರಗಳನ್ನು ಕಟ್ಟಿಸಿದರೆ....ಅದೂ ಹೋಗಲಿ ತಾನು ಇರಲಿಕ್ಕೆ ಅರಮನೆಯನ್ನು ಕಟ್ಟಿಸಿದರೂ ಕೂಡ ಅವನ ದುಡ್ಡೆಲ್ಲ ಸಮಾಜದ ಪ್ರತಿಯೊಂದು ಘಟಕಕ್ಕೂ ಅಂದರೆ ಬಡಿಗರರಿಗೆ, ಕಮ್ಮಾರರಿಗೆ, ಉಪ್ಪಾರರಿಗೆ ಕೂಲಿಯವರಿಗೆ ಎಲ್ಲರಿಗೂ ಹಂಚಿ ಹೋಗುವದು. ಈ ದೃಷ್ಟಿಯಿಂದ ಶ್ರೀಮಂತನು ಬರಿ ಹಣಹಂಚುವ ಸಂಸ್ಥೆ ಮತ್ತು ಅವನೊಬ್ಬನೇ ಶ್ರೀಮಂತನಿರುವ ಗುತ್ತಿಗೆಯನ್ನು ಹಿಡಿದಿರುವದಿಲ್ಲ. ಈ ಭಂಗಿ ಜನರಲ್ಲಿ ಬೇಕಾದವನು ಶ್ರೀಮಂತನಾಗಲಿಕ್ಕ ಆಸ್ಪದವಿಲ್ಲವೇ ? ಅವನು ದುಡ್ಡು ಗಳಿಸಲಿಕ್ಕೆ ಯಾವ ಕಾಯಿದೆ ಯಾವ ಸಮಾಜದ ಕಟ್ಟಳೆ ಅಡ್ಡ ಬಂದಿದೆ ? ಕಾಲಚಕ್ರದಲ್ಲಿ ಬಡವನು ಶ್ರೀಮಂತನಾಗುವನು, ಶ್ರೀಮಂತನು ಬಡವನಾಗುವನು. (ಭಂಗಿ ಜನರು ತಮ್ಮ ತಮ್ಮಲ್ಲಿ) ಇವರನ್ನುವದು ಬರೋಬರಿ.

ಭಂಗಿ :— ಮುಖಂಡ ಮಹಾಶಯರೆ, ನಮ್ಮ ಜನರ ಶ್ರಮದ ಕಿರಿಮೆಯಲ್ಲಿ ಪ್ರಚಾರದ ಹವೆಯನ್ನು ತುಂಬಿ ಉಬ್ಬಿಸಿದರೆ ಏನಾಗುವದು?

ಇ :— ಅಷ್ಟೇ ಅಲ್ಲ, ಭಂಗಿ ಬಾಂಧವರೇ ನಮ್ಮ ಸಂಸ್ಕೃತಿಯ ವೃಕ್ಷಕ್ಕೆ ಸರಿಹೋಗದ ಯಾವದೋ ವಿದೇಶೀ ಗಿಡದ ಕಲ್ಮನ್ನು ಅಂಟಿಸಹೋದರೆ ಇಡೀ ಗಿಡವೇ ವಿಕೃತವಾಗುವ ಸಂಭವವಿದೆ.

ಮು. ಪ್ರ :— ಅದು ಇರಲಿ ನೀವು ಮಾಡುವ ಕೆಲಸವನ್ನು ಜನರು ಒಂದೆರಡು ದಿವಸ ಮಾಡಲಿಕ್ಕೆ ಹಿಂದುಮುಂದು ನೋಡಬಹುದು. ಇವತ್ತಿನಂತೆ ಎಲ್ಲರೂ ಭಂಗಿ ಕೆಲಸವನ್ನು ಮಾಡಲಿಕ್ಕೆ ಪ್ರಾರಂಭಿಸಿದರೆ ನಿಮ್ಮಲ್ಲಿ ನಿರುದ್ಯೋಗವನ್ನು ಬಗೆಹರಿಸಿರಿ ಅಂತಾ ನೀವೇ ಮೊಂದೆ ಬರುವಿರಿ.

ಮು :— ಶ್ರಮಜೀವಿಗಳಷ್ಟೇ ಸಮಾಜದಲ್ಲಿ ಬದುಕಬೇಕು.

ಇ :— ಹಾಗಾದರೆ ಸಂಪಿಗೆ ಪ್ರೇರೇಪಿಸುವ ನಿರುದ್ಯೋಗಿಗಳಾದ ನೀವು ಭಾವೀ ಸಮಾಜದಲ್ಲಿ ಬದುಕುವ ಹಕ್ಕನ್ನೇ ಕಳಕೊಳ್ಳುವಿರಿ.

ಮು :— ಬದುಕುವ ಹಕ್ಕು ನಿಸರ್ಗದ ನಿಯಮ ಅದನ್ನು ಯಾರೂ, ಯಾವ ಕಾಯಿದೆಯೂ ಕಸಿದುಕೊಳ್ಳಲಾರದು.

ಇ :— ಅದರಷ್ಟೇ ನಿಸರ್ಗ ನಿಯಮವಾದ ಇನ್ನೊಂದು ಜೀವನ ಹೋರಾಟದಲ್ಲಿ ತಕ್ಕದಾದುದೇ ಬದುಕುತ್ತದೆ. ಕೃತ್ರಿಮ ಕಾಯಿದೆಗಳನ್ನು ಮಾಡಿ ನಿಸರ್ಗ ನಿಯಮಗಳನ್ನು ಉಲ್ಲಂಘಿಸಿ ಅಪಾತ್ರತೆಗೆ ಹೆಚ್ಚು ಸೌಕರ್ಯಗಳನ್ನು ಒದಗಿಸಿ ಕೊಟ್ಟರೆ ಅಂಥ ನಿಸರ್ಗ ವಿರುದ್ಧ ಸಮಾಜ ರಚನೆಯು ಬಾಳಬಲ್ಲದೇ ?

ಮು :— ಹಾಗಾದರೆ ಪ್ರತಿಯೊಬ್ಬನಿಗೆ ಸೌಕರ್ಯಗಳು ಬೇಡವೇ ?

ಇ :— ಸೌಕರ್ಯಗಳನ್ನು ಪಡೆಯಬೇಕು. ಸೌಕರ್ಯಗಳನ್ನು ಸಮವಾಗಿ ಹಂಚಿದರೆ ಸಮಾಜ ಜೀವನವು ಬೇಸರದ್ದಾಗುವುದು. ಯಾಕಂದರೆ ಪ್ರತಿಯೊಬ್ಬನಿಗೆ ಒಂದೇ ತರಹದ ಊಟ ಉಡಿಗೆ ವಸತಿಯ ಆಶ್ವಾಸನವು ಸಿಕ್ಕರೆ ಮನಮುಟ್ಟಿ ಅವನೇಕೆ ದುಡಿಯುವನು? ಜೀವನದ ಜೀವಾಳವಾದ ಸ್ಪರ್ಧೆಯು ಇಲ್ಲದಂತಾಗಿ ಪ್ರಗತಿಯೇ ನಿಲ್ಲುವದು, ಎಲ್ಲರಿಗೂ ಚಲೋ ಜಿನಸುಗಳು ಬೇಕು. ಚಲೋ ಜಿನಸುಗಳು ಜಗತ್ತಿನಲ್ಲಿ ಸ್ವಲ್ಪೇ ಅವೆ. ಅವುಗಳನ್ನು ಎಲ್ಲರಲ್ಲಿ ಹಂಚಲು ಬರುವದಿಲ್ಲ. ಅವುಗಳನ್ನು ದೊರಕಿಸುವ ಬಗ್ಗೆ ಹೋರಾಟವು ಅನಿವಾರ್ಯ. ಈ ಹೋರಾಟದಲ್ಲಿ ಗೆದ್ದವನೇ ಅವನ್ನು ಪಡೆಯಬಲ್ಲನು.

ಮು :— ಈ ತತ್ವ ನನಗೆ ಸಮ್ಮತವಿದೆ. ಆದರೆ ಪರಾರ್ಜಿತ ಹಣದ ಮೇಲೆ ಲೋಲಾಡುವ ಸಿರಿವಂತ ನಿರುದ್ಯೋಗಿಗಳ ಉಚ್ಚಾಟನೆ ಆಗಬೇಕಲ್ಲವೇ?

ಇ :— ಉಚ್ಚಾಟನ ಆದರೆ, ಸಂಸ್ಕೃತಿ ಸಂವರ್ಧನೆಗೆ ಮತ್ತು ಮಾನವ ಸುಧಾರಣೆಗೆ ಪೋಷಕವಾದ ಲಲಿತಕಲೆ, ಸಾಹಿತ್ಯ, ವಿಜ್ಞಾನ, ಇಲ್ಲದಂತಾಗುವುವು. ಉದರ ಪೋಷಣೆಗಾಗಿ ೨೪ ತಾಸು ದುಡಿಯುವ ದುಡಿಮೆಗಾರನಿಗೆ ಇವು ಸಾಧ್ಯವೇ ? ಮತ್ತು ಬರಿ ಶ್ರಮಜೀವಿಗಳಿಂದ ದೇಶವು ಮುಂದೆ ಬರುವದಿಲ್ಲ; ಹಾಗಿದ್ದರೆ ಆಫ್ರಿಕಾ ಖಂಡವು ಜಗತ್ತಿನ ಪ್ರಮುಖ ರಾಷ್ಟ್ರವಾಗುತ್ತಿತ್ತು. ಹಿಂದುಸ್ತಾನವು ಮುಂದುವರಿದ ರಾಷ್ಟ್ರವಾಗಲಿಕ್ಕೆ ಶ್ರಮಜೀವಿಗಳೊ ? ವಿದ್ವಾನ್ ವಿಶ್ರಾಮ ಜೀವಿಗಳೊ- ಯಾರು ಕಾರಣರು ?


ಭಂ :— ನೀವನ್ನುವದೇ ಬರಾಬರಿ. ನಮ್ಮ ಮುಖಂಡರೇ ನಮಗೆ ತಪ್ಪು ದಾರಿ ಹಿಡಿಸಿದ್ದಾರೆ. ನೀವನ್ನುವಂತೆ ನಾವು ದುಡಿದು ಶ್ರೀಮಂತರಾಗಲಿಕ್ಕೆ ಎಲ್ಲರಂತೆ ನಮಗೂ ಸಮನಾದ ಸಂಧಿಯಿದೆ. ಶ್ರೀಮಂತ, ಬಡವ ರಾತ್ರಿ ಹಗಲು ಮೇಲು, ಕೀಳು, ಇವು ಇದ್ದೇ ತೀರುವವು. ಸಂಪನ್ನು ಮುಕ್ತಾಯಗೊಳಿಸಿ ಕೆಲಸಕ್ಕೆ ಪ್ರಾರಂಭಿಸುವೆವು.

ಮು. ಪ್ರ :— ಬೋಲೋ ಮೂರ್ಖ ಮುಖಂಡ ಮುರ್ದಾಬಾದ!

(೧ನೇ ಪುಟದಿಂದ ಬಂದುದು)

ಹೋಯಿತು. ಪ್ರತಿಯೊಂದು ಬಂಡವಾಲ ಪದ್ಧತಿಯ ಸಾರ್ವಭೌಮ ರಾಷ್ಟ್ರದಲ್ಲಿ ಆಳುವ ವರ್ಗ ಸಾಮಾನ್ಯ ಜನತೆ ಎಂದು ಎರಡು ವಿರುದ್ಧ ದೃಷ್ಟಿಕೋನಗಳ ಪಕ್ಷಗಳಿದ್ದೇ ಇರುತ್ತವೆ. ರಾಷ್ಟ್ರದ ಪ್ರತಿನಿಧಿಗಳೆಂದು ಸಂ. ರಾ. ಸಂಘದಲ್ಲಿ ಅಭಿಪ್ರಾಯವನ್ನು ಮುಂದಿಸುವವರು ರಾಷ್ಟ್ರದ, ಸರಕಾರದ ಅರ್ಥಾತ್ ಆಳುವ ವರ್ಗದ ಮತವನ್ನು ಇಚ್ಛೆಯನ್ನು ಮುಂದಿಡುವರಲ್ಲದೆ ಜನತೆಯ ಅಭಿಪ್ರಾಯವನ್ನಲ್ಲ. ಅದರಿಂದಲೇ ಅಂತಯುದ್ಧದ ಅಂತರ್ರಾಷ್ಟ್ರೀಯ ಯುದ್ಧಗಳು ಹುಟ್ಟುವಂತಾಗುವುದು. ಹಾಗಲ್ಲದೆ ಸಾಕ್ಷಾತ್ ಜನಪ್ರತಿನಿಧಿಗಳೇ ಸಂ. ರಾ. ಸಂಘದಲ್ಲಿ Peples Parliment- ಜನಸಂಘದಿಂದ ಆಯ್ಕೆ ಹೊಂದಿ ಬಂದು ಕೂಡುವುದಾದರೆ ಐಕ್ಯ ಸಹಕಾರಗಳು ತಾವೇ ತಾವಾಗಿ ಕೈಗೂಡುವವು. ಇದರಿಂದ ಅಂತರ್ರಾಷ್ಟ್ರೀಯ ಶಾಂತಿ ಸ್ಥಾಪಿತವಾಗಿ ಜಾಗತಿಕ ಉತ್ಪಾದಕ ಶಕ್ತಿ ಶತಗುಣ ಹೆಚ್ಚಾಗುವುದು ಖಂಡಿತ.

ಜನಪ್ರತಿನಿಧಿಗಳೊಂದಿಗೆ ಸೇರಿ Territorial Fedaralism— ರಾಜ್ಯಘಟಿತ ಮಂಡಲೀಕರಣವನ್ನು ಬಿಟ್ಟು Functional Fedaralism- ಕರ್ತವ್ಯ ಘಟಿತ ಮಂಡಲೀಕರಣವನ್ನು ಕೈಗೊಂಡರೆ ರಾಷ್ಟ್ರರಾಷ್ಟ್ರಗಳ ಘರ್ಷಣ ತಪ್ಪಿ ಸರ್ವಹಿತೈಕ ದೃಷ್ಟಿಯಿಂದ ಜಗತ್ತಿನ ಅವಶ್ಯಕತೆಗಳನ್ನು ಅತಿ ಸುಲಭವಾಗಿ ಪೂರೈಸಬಹುದು. ಯುರೋಪಿಗೊಂದು ಸಾಮಾನ್ಯ ರೇಲ್ವೆ ಪದ್ಧತಿ, ಇಡೀ ಅಮೇರಿಕ ಖಂಡಕ್ಕೊಂದು ವಿಮಾನ ಪ್ರಯಾಣ ಸೌಕರ್ಯ ಇವು ಸಂಯುಕ್ತ ಅಧಿಕಾರಕ್ಕೆ ವಿದ್ಯುಚ್ಛಕ್ತಿ ಒಳಪಟ್ಟರೆ ಸಾಧಿಸಲ್ಪಡಬಹುದು. ಇಲ್ಲವೆ ಮಧ್ಯಪೂರ್ವದಲ್ಲಿ ಸೀರಾವರಿ ಮತ್ತು ವಿದ್ಯುಚ್ಛಕ್ತಿಯನ್ನು ಅತಿರಾಷ್ಟ್ರೀಯತ ದಂತೆ ಅಂತರ್ರಾಷ್ಟ್ರೀಯ ಅಧಿಕಾರಕ್ಕೊಳಪಡಿಸಿದರೆ ಸರ್ವರ ಹಿತವೂ ಹಸ್ತಗತವಾಗದಿರದು. ಇದಕ್ಕೆ ಮೇಲ್ಪಟ್ಟದ ನಾಗರಿಕ, ಪ್ರಜೆ ಎನಿಸಿಕೊಳ್ಳುವ ಬುದ್ಧಿ ಅಗತ್ಯ. ಆ ಬುದ್ಧಿ ರಾಷ್ಟ್ರೀಯತೆಯ ದಡವನ್ನು ದಾಟಿ ಮೇಲೇರಿದು ನಿಲ್ಲಬೇಕು. ಇ [illegible] ಣಡಸಂತತಕ್ಕೆ ನಿಮರ್ಶೆಗೆ ದಾಸಗಳು ಅವಕಾಶ ಕಲ್ಪಿಸಿಕೊಡುವುದು ಅವಶ್ಯಕ. ವಿರು [illegible] ಭಿಪ್ರಾಯವೆಂದ ಕೂಡಲೆ ಖಂಡನೀಯವೂ ದಂ [illegible] ನೀಯವೆಂದು ಸರಕಾರ ಅದರ ಕರ್ತರನ್ನು ದಮಿಸುವುದು ನಿಲ್ಲಬೇಕು. ಅಂದು ವಿಶ್ವಜನೀನ ಶಾಸನಗಳು ವಿಶ್ವಶಾಸನ ಸಭೆಯಲ್ಲಿ ರಚಿತವಾದಾವು. ಇಲ್ಲದಿದ್ದರೆ ಸದ್ಯದ ರಾಷ್ಟ್ರೀಯ ಸಾರ್ವಭೌಮತೆಯಿರುವ ವರೆಗೆ ಮಾನವ ಕುಲದ ಭವಿಷ್ಯದು ಬಗ್ಗೆ ಹೆಚ್ಚು ಆಶೆಯನ್ನು ಇಟ್ಟುಕೊಳ್ಳುವುದು ಅಸಾಧ್ಯವೆಂದು ಖಂಡಿತವಾಗಿ ಹೇಳಬಹುದಾಗಿದೆ.



ಜ್ಯೋತಿಷಿ— ಕೃಷ್ಣಶಾಸ್ತ್ರಿ ಅತೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಜಾನೇವರಿ ೧೨ ರಿಂದ ೧೮ ರ ವರೆಗೆ

ಮೇಷ

ಎಲ್ಲರ ಪ್ರಕೃತಿ ಉತ್ತಮ ಆದರೆ ಒಂದಿಬ್ಬರು ಕೆಲಕಾರಣಗಳಿಂದ ಯೋಗಾಗಲೂ ಕುರಕುರಿ ನಡೆಸುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವಿದೆ ಆದರೆ ಅದು ಸಾಧ್ಯವಾಗುವವರೆಗೆ ಜಗಳ ಮತ್ತು ಪರಾಧೀನತೆಯ ತೊಂದರೆ ವಿಪರೀತ. ಹೆಂಡತಿಯ ತವರೂರಲ್ಲಿ ಕೆಲವೊಂದು ಉನ್ನತಿಯ ಸಂಗತಿಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರ ಸುಖ ಅನುಕೂಲ. ಬೌದ್ಧಿಕ ಕೆಲಸದಲ್ಲಿ ವಿಜಯ ಪರಪೂರ್ಣ ಜನರೊಡನೆ ಕೆಲದಿವಸ ವರೆಗೆ ಸಹವಾಸ ಸ್ವಪ್ನ ಶುಭ ಮತ್ತು ಭಾವೀ ಸೂಚಕ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ೪ ನೇ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೨-೧೩-೧೪-೧೫ ಅನುಕೂಲ

ವೃಷಭ

ಪ್ರಕೃತಿ ಮತ್ತು ಸ್ತ್ರೀ ಪಾಸೂ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿಶಯ ಉತ್ತಮ. ಮಿತ್ರ ಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ ಸಂಗ್ರಹದಲ್ಲಿ ಹೆಚ್ಚಳ. ಮಕ್ಕಳಲ್ಲಿ ವಿಶೇಷ ಉನ್ನತಿ. ಪ್ರವಾಸಾದಿ ಕೆಲಸ ಹಿತಕರ ಆದರೆ ಕೃತ್ತಿಕೆಯ ೪ ನೇ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆಯಶಸ್ಸು. ತಾ. ೧೨-೧೩-೧೫-೧೮- ಅನುಕೂಲ.

ಮಿಥುನ

ಪ್ರಕೃತಿಗೆ ತಿರುಕಳ ಕ್ಲೇಶ. ಹೆಂಡತಿಗೊಡ ಮೇಲಿಂದ ಮೇಲೆ ವಿರೋಧ ಮನೆಯಲ್ಲಿರುವ ಪಕ್ಕೆ ಮನಸ್ಸು ಅಸುತ್ತಾಹಿತ. ಉದ್ಯೋಗದಲ್ಲಿ ಪ್ರಗತಿಸಾಮಾನ್ಯವೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಕ್ಕಳಲ್ಲಿ ಒಬ್ಬರ ಉತ್ಕರ್ಷ ಆದರೆ ಎರಡನೆಯವರಿಗೆ ಕಾಯಿಲೆ ಸ್ವಲ್ಪ ಅವಚಿತ ಧನ ಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವರು ಆದರೂ ಶತ್ರುಗಳನಾಶ ಪರಭಾರೆ ಆಗುವದು ಪ್ರವಾಸ ಸ್ವಲ್ಪ ಅನುಕೂಲ. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅತಿ ತೊಂದರೆಯದು. ಮೃಗಾದ ೧ ನೇ ಮತ್ತು ಆರಿದ್ರೆಯ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೬, ೧೭, ೧೮, ಅನುಕೂಲ.

ಕರ್ಕ

ಎಲ್ಲರ ಪ್ರಕೃತಿ ಉತ್ತಮ ಆದರೆ ನಿಮ್ಮ ನಿಮ್ಮಲ್ಲಿ ಕಲಹ. ಪರಸ್ತ್ರೀ ಬಗ್ಗೆ ಪಾಪಬುದ್ಧಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅಮೂಲ್ಯ ಒಂದು ವಸ್ತು ಅಲ್ಪ ಬೆಲೆಯಲ್ಲಿ ಸಿಕ್ಕುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮಕ್ಕಳಿಂದ ಲೌಕಿಕಾಸ್ಪದವಾದ ಕೃತ್ಯಗಳು ಪ್ರವಾಸಾದಿ ಕೆಲಸ ಹಿತಕರ ಪುಷ್ಯದ ೪ ನೇ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೨, ೧೩, ೧೫, ೧೮ ಅನುಕೂಲ.

ಸಿಂಹ

ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಬಹಳ ಕಡಿಮೆ. ಸಣ್ಣ ದೊಡ್ಡ ಪ್ರತಿಯೊಂದು ವಿಷಯದಲ್ಲಿ ಉತ್ತರದಕ್ಷಿಣ ಧ್ರುವಗಳಷ್ಟು ಪರಸ್ಪರ ಮಕ್ಕಳು ಕೆಲವೊಂದು ಮುದ್ದುತನದ ಕೃತ್ಯಗಳನ್ನು ಮಾಡುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು ಪ್ರತಿಷ್ಠೆ ಉತ್ತಮ. ಆದರೆ ಕೆಲವೊಂದು ವಿಲಕ್ಷಣ ಕಾರಣದಿಂದ ಲಾಭಕ್ಕಿಂತ ಹಾನಿಯೇ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರಗತಿ. ಪಕ್ಷಗಳಿಂದ ಫಲಪ್ರಾಪ್ತಿ ಆಗುವಷ್ಟು ಹೇಳು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಮಘಾದ ೪ ನೇ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ ತಾ. ೧೪, ೧೫, ೧೬, ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ ಆದರೆ ಉಳಿದ ಎಲ್ಲ ವಿಷಯಗಳಲ್ಲಿ ಅತಿಶಯ ತೊಂದರೆ. ಹೆಂಗಸರು ಬಹಳ ದ್ವೇಷಮಾಡುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಿಮೆಯೆ ಆದರೆ ಲಾಭ ಕುಂಬ. ನೌಕರರಿಗೆ ಹೆಚ್ಚು ಲಾಭ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷದವರು ಒಬ್ಬರೊಬ್ಬರ ಫಜೀತಿಮಾಡುವ ಪ್ರಯತ್ನ ನಡೆಸುವರು. ಮತ್ತು ಕೊನೆಯಲ್ಲಿ ಅವರದೇ ಮೇಲುಗೈ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಉತ್ತರಾದ ೪ ನೇ ಮತ್ತು ಹಸ್ತದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೨, ೧೩, ೧೭, ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಅನುಕೂಲ. ಆದರೂ ಪತಿ ಪತ್ನಿಯರಲ್ಲಿ ಅಹೇತುಕ ವಿರೋಧ ಬರುತ್ತ ನಡೆಯುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಉತ್ತಮ ವಾಹನ ಸುಖ. ಅಸ್ತ್ರರಿಂದ ಗೌರವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ. ಆದರೆ ಅನುಕೂಲತೆ ಪೂರ್ಣ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ಹೆಚ್ಚು ಅನುಕೂಲ. ಚಿತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೬ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ಅತಿ ಉತ್ತಮ. ಮಕ್ಕಳ ಉತ್ಕರ್ಷ. ಆದರೂ ಕೆಲವೊಂದು ಸೂಕ್ಷ್ಮ ಕಾರಣಗಳಿಂದ ಪ್ರಾಪಂಚಿಕ ಸಮಾಧಾನ ಕಡಿಮೆಯೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತ ಲಾಭ ಅತಿ ಉತ್ತಮ. ಮಿತ್ರರಿಂದ ಒಳ್ಳೆ ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಸಿಕ್ಕು ಶತ್ರುಗಳು ಬಹಳ ಮಟ್ಟಿಗೆ ಹಿಮ್ಮೆಟ್ಟುವರು. ಪ್ರವಾಸಾದಿ ಕೆಲಸ ಹಿತಕರ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೨, ೧೩, ೧೭, ೧೮ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯಲ್ಲಿ ಕುರಕುರಿ. ಮಕ್ಕಳಲ್ಲಿ ಉತ್ಕರ್ಷ. ಆದರೆ ಅವರಿಂದ ನಿಮ್ಮ ಅಪಮಾನವಾಗುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಆದರೆ ವೆಚ್ಚವೂ ಅಂದಾಜಿಗಿಂತ ಹೆಚ್ಚು. ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತಕರ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೩, ೧೪, ೧೫, ೧೬ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಲ್ಲಿ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವಿದೆ. ಆದರೆ ಕೆಲವೊಂದು ನಿರರ್ಥಕ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಬಂಧು ವರ್ಗದವರಿಂದ ಬಹಳ ಸಹಾಯ. ಸ್ವಪ್ನ ಬೋಧಪ್ರದ. ಪ್ರವಾಸಾದಿ ಕೆಲಸ ಹಿತಕರ. ಉತ್ತರಾಷಾಢಾದ ೪ ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೨, ೧೩, ೧೪, ೧೫ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ. ವಿಷಯಸುಖ ಅನುಕೂಲ. ಆದರೆ ಉಳಿದ ಎಲ್ಲ ವಿಷಯಗಳಲ್ಲಿ ಹೆಂಡತಿಯದು ಅತಿಶಯ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಮೊದಲು ತಕರಾರು ಮತ್ತು ತೊಂದರೆ. ಆದರೆ ಕೊನೆಯಲ್ಲಿ ಮನಸ್ಸಿನಂತೆ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಆದರೆ ಅದರಲ್ಲಿ ಕೆಲವೊಂದು ಮಾತು ಮನಸ್ಸಿಗೆ ಬಹಳ ಹತ್ತುವಂತಹದು. ಮಿತ್ರತ್ವದಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಧನಿಷ್ಠಾದ ೪ ನೇ ಮತ್ತು ಶತತಾರಕೆಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೫, ೧೬, ೧೭, ೧೮ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ನಿಮ್ಮ ನೀತಿಯ ಬಗ್ಗೆ ಅವಳ ಮನಸ್ಸು ಸಂಶಯಿತ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಕಡಮೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವ್ಯಸನಾಗಿ ಹೆಚ್ಚು ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೨, ೧೩, ೧೭, ೧೮ ಅನುಕೂಲ.

ಸಾದರ ಸ್ವೀಕಾರ

ಮುಂಬೆಳಗು

ಲೇಖಕರು— ಅ. ಕ. ಸಂಕಪ್ಪ ರೈ.
ಪ್ರಕಾಶಕರು— ಬಾಳಿಗ ಎಂಡ್ ಸನ್ಸ್.
ರಥಬೀದಿ ಮಂಗಳೂರ.
ಪುಟಗಳು— ೪೬ ಬೆಲೆ ೦—೧೨—೦

ವಿಜ್ಞಾನ ವಿಶ್ವಾಮಿತ್ರ

ಲೇಖಕರು— ಎಸ್. ಎಸ್. ವೀರಪ್ಪ
ಪ್ರಕಾಶಕರು— ಎಸ್. ಎಸ್. ಎನ್.
ಪುಸ್ತಕ ಪ್ರಕಟನಾಲಯ ಬೆಂಗಳೂರ ನಗರ.
ಪುಟಗಳು— ೬೦ ಬೆಲೆ ೦-೮-೦

ಮೇಕೆದಾಟು ಮತ್ತಿತರ ಕಥನಕವನಗಳು

ಲೇಖಕರು— ಎಸ್. ಎಸ್. ವೀರಪ್ಪ
ಪ್ರಕಾಶಕರು— ಎಸ್. ಎಸ್. ಎನ್.
ಪುಸ್ತಕ ಪ್ರಕಟನಾಲಯ ಬೆಂಗಳೂರ ನಗರ.
ಪುಟಗಳು— ೬೦ ಬೆಲೆ ೦-೧೨-೦

ಕಪಟನಾಟಕ

ಲೇಖಕರು:— ಶ್ರೀಮತಿ 'ಭಾರತಿ' ಯವರು. ಪ್ರಕಾಶಕರು— ಎಸ್. ಎಸ್. ಎನ್. ಪುಸ್ತಕ ಪ್ರಕಟನಾಲಯ ಬೆಂಗಳೂರು.
ಪುಟಗಳು ೭೬ ಬೆಲೆ ೦-೧೨-೦

ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ

ಲೇಖಕರು— ಡಿ. ಎನ್. ರಾಯ
ಪ್ರಕಾಶಕರು— ಎಸ್. ಎಸ್. ಎನ್.
ಪುಸ್ತಕ ಪ್ರಕಟನಾಲಯ ಬೆಂಗಳೂರ.
ಪುಟಗಳು ೫೦ ಬೆಲೆ ೦-೧೦-೦

ಭವಭೂತಿಯ ಉತ್ತರ ರಾಮಾಯಣದ ಕಥಾಚಿತ್ರ

ಲೇಖಕರು— ಎಸ್. ಎಸ್. ವೀರಪ್ಪ
ಪ್ರಕಾಶಕರು— ಎಸ್. ಎಸ್. ಎನ್.
ಪುಸ್ತಕ ಪ್ರಕಟನಾಲಯ ಬೆಂಗಳೂರ.
ಪುಟಗಳು ೯೦ ಬೆಲೆ ೧-೦-೦

ಸ್ವಾಮಿಜಿಯ ಪತ್ರಗಳು

(ಶ್ರೀ ಸ್ವಾಮಿ ವಿವೇಕಾನಂದರ ಪತ್ರಗಳ ಅನುವಾದ) ಅನು— ಕೋ. ಚನ್ನಬಸಪ್ಪ
ಪ್ರಕಾಶಕರು— ಎಸ್. ಎಸ್. ಎನ್.
ಪುಸ್ತಕ ಪ್ರಕಟನಾಲಯ ಬೆಂಗಳೂರ ನಗರ.

ಕಲಾ. (ಕನ್ನಡ ಮಾಸಪತ್ರಿಕೆ)

ಸಂಪಾದಕರು ಯಲ್ಲೂರ ಉಮೇಶರಾವ
ಪ್ರಕಾಶಕರು. ಕಲಾ ಕಾರ್ಯಾಲಯ ಹಂಪನಕಟ್ಟೆ ಮಂಗಳೂರ.
ಬಿಡಿಸಂಚಿಕೆ ೬ ಆಣೆ. ವಾರ್ಷಿಕಚಂದಾ ೪-೮-೦.

ಕಲಾ ಮಾಸಿಕವು ಕಲಾಪೂರ್ಣವಾಗಿದೆ. ವಿವಿಧ ಲೇಖನಗಳು ವಿಚಾರಪೂರಿತ ವಿಷಯಗಳಿಂದಲೂ ವಿನೋದ, ವಿಮರ್ಶನಗಳೊಳಗೊಂಡ ವಿಷಯಗಳಿಂದಲೂ ಚಿತ್ರಗಳಿಂದಲೂ ಪರಿಪೂರ್ಣವಾಗಿದೆ.

ಚಂದಾದಾರರಲ್ಲಿ ವಿನಂತಿ

—✻—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚಸಹಿತ(ಚಂದಾಪಣ ಮುಂಗಡ)

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧-೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದ ಪರವಾಗಿ ಪ. ರಾ. ನೊಡಕೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.